
ರಂಜನೆ ಬೋಧನೆ. ಶೋಧನೆ

ಲಂಕೇಶ್

ಮೇ 27, 2009 ರೂ. 12/-



ವಿರಲ ಹೆಗ್ಡೆಗೆ ಸರ್ಕಾರಿ ಹಿಂಸೆ



ರಾಘವೇಶ್ವರ ಸ್ವಾಮಿಗೆ ಮಲ್ಲಿಕಾ ಮೋಹ



ಪೋರಿ ಹಿಂದೆ ಹೋರಿ

ರ್ಶನ್ ಸೋದರರರಿಂದ



ತಾಯಿಗೆ ಗೇಟ್‌ಪಾಸ್

ಶಿವಮೊಗ್ಗ : ಜಯಂತ್ ಕಿವಿಗೆ ಯಡ್ಡಿ ಹೂ



ಶ್ರುತಿ ಪ್ರಿಯ ಚಂದ್ರಚೂಡನ

ಚೋರ ಪುರಾಣ



ಪಾಂಡು ಪೈ ಮುಗಿಸಿದವ


ಪ್ರದೀಪ್ ಮೆಂಡನ್

ಅಪ'ಶ್ರುತಿ' ನುಡಿಸುತ್ತಿರುವ ತಂಬೂರಿ ನಾರದರು!

ಶ್ರುತಿಯೆಂಬ ಒಬ್ಬ ಮಹಿಳೆ ತನ್ನ ಗಂಡನಿಂದ ವಿಚ್ಛೇದನ ಕೋರಿ ಮತ್ತೊಬ್ಬ ಪುರುಷನನ್ನು ಮದುವೆಯಾಗುವ ತೀರ್ಮಾನ ಮಾಡಿದ್ದಾರೆ. ಇದು ಆಕೆಯ ವ್ಯಕ್ತಿಯ ತೀರ್ಮಾನ. ಈ ತೀರ್ಮಾನದ ತಪ್ಪು-ಸರಿಗಳಿಗೆ ಸಂಪೂರ್ಣ ಬಾಧ್ಯಸ್ಥರು ಅವರೇ ಹೊರತು ಇತರರಿಗೆ ಅದರ ಉಸಾಬರಿ ಬೇಕಿಲ್ಲ. ಈ ತೀರ್ಮಾನವನ್ನು ಗಂಡ-ಹೆಂಡತಿಯರಿಬ್ಬರೂ ಪರಸ್ಪರ ಸಮ್ಮತಿಯಿಂದಲೇ ಮಾಡಿದ್ದರೆ ಅದರ ತಪ್ಪು ಸರಿಗಳ ಬಗ್ಗೆ ವ್ಯಾಖ್ಯಾನ ಮಾಡುವ ಅಧಿಕಾರ ನ್ಯಾಯಾಲಯಕ್ಕೂ ಇಲ್ಲ! ಹೀಗಿರುವಾಗ ಮಾಧ್ಯಮಗಳಿಗಾಗಲೀ, ಶ್ರುತಿ ಮತ್ತು ಮಹೇಂದರ್ ಸೇರಿರುವ ಬಿಜೆಪಿ ಪಕ್ಷಕ್ಕಾಗಲೀ ಈ ತೀರ್ಮಾನದ ಸರಿ-ತಪ್ಪುಗಳ ಬಗ್ಗೆ ಜಡ್ಜ್‌ಮೆಂಟ್ ನೀಡುವ ಅಥವಾ ಶಿಕ್ಷೆ ಘೋಷಿಸುವ ಯಾವ ಅಧಿಕಾರವೂ ಇಲ್ಲ.

ವಿವಾಹ ವಿಚ್ಛೇದನವೆಂಬುದು ಮಹಿಳೆ ಮತ್ತು ಪುರುಷರಿಬ್ಬರಿಗೂ ಈ ದೇಶದ ಸಂವಿಧಾನ ಮತ್ತು ಕಾನೂನು ನೀಡಿರುವ ಹಕ್ಕು. ಭಾರತದಂತಹ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ಪುರುಷರು ದಾಸಿಯಂತೆ ನಡೆಸಿಕೊಳ್ಳಲಾಗಿದೆಯೇ ವಿನಃ ಸಮಾನ ಹಕ್ಕಿರುವ ನಾಗರಿಕಳಾಗಿ ಇತಿಹಾಸದಲ್ಲಿ ಎಂದಿಗೂ ಪರಿಗಣಿಸಿರಲಿಲ್ಲ. ಸ್ವಾತಂತ್ರ್ಯಾನಂತರವೇ ಮಹಿಳೆಯರಿಗೂ ಓಟಿನ ಹಕ್ಕಿನ ಜೊತೆಗೆ ಇನ್ನಿತರ ಹಕ್ಕುಗಳು ದೊರೆತವು. ಅವುಗಳಲ್ಲಿ ಒಂದು ವೈವಾಹಿಕ ಜೀವನದಲ್ಲಿನ ಸ್ವಾತಂತ್ರ್ಯ.

ಕಾನೂನಿನ ದೃಷ್ಟಿಯಲ್ಲಿ ಮದುವೆಯೆಂಬುದು ಗಂಡು ಮತ್ತು ಹೆಣ್ಣು ಪರಸ್ಪರ ಸಮ್ಮತಿಯಿಂದ ಮಾಡಿಕೊಳ್ಳುವ ಒಂದು ಕಾಂಟ್ರಾಕ್ಟು. ಒಂದು ಒಪ್ಪಂದ. ಈ ಒಪ್ಪಂದದ ತಳಹದಿ ಪರಸ್ಪರ ವಿಶ್ವಾಸ ಮತ್ತು ಪ್ರೀತಿ. ಎಲ್ಲಾ ಒಪ್ಪಂದಗಳಂತೆ ಈ ಒಪ್ಪಂದದಲ್ಲೂ ಹಕ್ಕುಗಳೂ ಇವೆ, ಬಾಧ್ಯತೆಗಳೂ ಇವೆ. ಇವಕ್ಕೆ ಯಾರೊಬ್ಬರಿಂದ ಚ್ಯುತಿ ಬಂದರೂ, ಅಥವಾ ಮದುವೆಯ ತಳಹದಿಯಾಗಿರುವ ಪ್ರೀತಿ ಮತ್ತು ವಿಶ್ವಾಸಕ್ಕೆ ಧಕ್ಕೆ ಬಂದರೂ ಮದುವೆಯೆಂಬ ಒಪ್ಪಂದ ಊರ್ಜಿತವಾಗುವುದಿಲ್ಲ. ಆಗ ಯಾರು ಬೇಕಾದರೂ ಆ ಒಪ್ಪಂದವನ್ನು ಕಾನೂನು ಬದ್ಧವಾಗಿ ಮುರಿದುಕೊಳ್ಳಲು ವಿವಾಹ ವಿಚ್ಛೇದನದ ಕಾನೂನು ಅವಕಾಶ ಮಾಡಿಕೊಡುತ್ತದೆ.


ಶ್ರುತಿ

ಈ ಕಾನೂನು ಮೇಲುನೋಟಕ್ಕೆ ಗಂಡು ಹೆಣ್ಣುಗಳಿಬ್ಬರಿಗೂ ಸಮಾನ ಅವಕಾಶ ಕಲ್ಪಿಸುತ್ತಿರುವಂತೆ ಕಂಡುಬಂದರೂ, ನಮ್ಮ ದೇಶದ ಇತರ ಎಲ್ಲಾ ಕಾನೂನುಗಳಂತೆ ಈ ಕಾನೂನು ಸಹ ಮೂಲಭೂತವಾಗಿ ಪುರುಷ ಪಕ್ಷಪಾತಿಯೇ. ಮಹಿಳೆ ತನ್ನ ಗಂಡ ಲಂಪಟನೆಂದೋ, ಪರಸ್ತ್ರೀ ವ್ಯಾಮೋಹಿಯೆಂದೋ, ನಪುಂಸಕನೆಂದೋ ಸಾಬೀತುಮಾಡದೆ ಕೇವಲ ಹೊಂದಾಣಿಕೆ ಸಾಧ್ಯವಿಲ್ಲ ಎಂಬ ಕಾರಣಕ್ಕೆ ನ್ಯಾಯಾಲಯದಿಂದ ವಿಚ್ಛೇದನ ಪಡೆಯುವುದು ಸಾಧ್ಯವಿಲ್ಲ. ಅಂಥ ಸಂದರ್ಭದಲ್ಲಿ ಗಂಡನೂ ಹೊಂದಾಣಿಕೆ ಸಾಧ್ಯವಿಲ್ಲ ಎಂದು ಸಮ್ಮತಿ ನೀಡದೆ ಹೆಂಗಸಿಗೆ ಆ ಮದುವೆಯಿಂದ ವಿಮೋಚನೆ ಸಿಗುವುದೇ ಇಲ್ಲ. ವ್ಯಕ್ತಿಯೊಬ್ಬ ಮಾಡುವ ಹಲವು ಪ್ರಮುಖ ತೀರ್ಮಾನಗಳು ತಪ್ಪಾಗುವಂತೆ ಹಲವು ಪ್ರಕರಣಗಳಲ್ಲಿ ವಿಚ್ಛೇದನದ ತೀರ್ಮಾನ 'ಸರಿ' ಇಲ್ಲದೆ ಇರಬಹುದು. ಆದರೆ ಆ ತಪ್ಪು ತೀರ್ಮಾನದಿಂದ ಬಾಧೆಗೊಳಗಾಗುವವರು ಆ ದಂಪತಿಗಳು ಮತ್ತು ಅಪ್ರಾಪ್ತ ವಯಸ್ಸಿನ ಅವರ ಮಕ್ಕಳು. ಅಷ್ಟೇ ಹೊರತು, ಇದಕ್ಕೆ ಇತರ ಕಾನೂನುಗಳಂತೆ ಸಾರ್ವಜನಿಕ ಆಯಾಮವಿಲ್ಲ. ಏಕೆಂದರೆ ಮದುವೆಯೆಂಬ ಒಪ್ಪಂದ ಮೂಲಭೂತವಾಗಿ ಖಾಸಗಿಯಾದದ್ದು!

ಈ ಎಲ್ಲವೂ ಶ್ರುತಿಯ ವಿಚ್ಛೇದನ ಪ್ರಕರಣಕ್ಕೂ ಅನ್ವಯವಾಗಬೇಕಲ್ಲವೇ? ಶ್ರುತಿ ತನ್ನ ಕಾನೂನುಬದ್ಧ ಹಕ್ಕನ್ನು ಚಲಾಯಿಸಿದ್ದಾಳೆ. ಅದು ತಪ್ಪಿರಬಹುದು. ಸರಿಯೂ ಇರಬಹುದು. ಆಕೆಯ ಮಾತಿನಲ್ಲೇ ಹೇಳುವುದಾದರೆ "ಮುಳುಗುತ್ತಿದ್ದ ದೋಣಿಯಿಂದ ನದಿಗೆ ಬಿದ್ದು ಸಾಯುವ ಬದಲು ಮತ್ತೊಂದು ದೋಣಿಯ ಮೇಲೆ ಕಾಲಿಟ್ಟಿದ್ದೇನೆ.'' ಆ ದೋಣಿಯೂ ತೂತೇ ಇರಬಹುದು. ಹಾಗಿದ್ದಲ್ಲಿ ಆಕೆಯ ಹಿತಚಿಂತಕರು ಆಕೆ ಬಯಸಿದರೆ ಅದರ ಬಗ್ಗೆ ಎಚ್ಚರಿಕೆ ನೀಡಬಹುದೇ ವಿನಃ ಈ ಖಾಸಗಿ ವಿಷಯವನ್ನು ಸಾರ್ವಜನಿಕ ಚರ್ಚೆಯ ವಿಷಯ ಮತ್ತು ಇಷ್ಯು ಮಾಡುವುದು ಯಾವುದೇ ರೀತಿಯಲ್ಲಿ ತರವಲ್ಲ.

ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ಸದಾನಂದ ಗೌಡರು "ಶ್ರುತಿಯವರು ವಿಚ್ಛೇದನಕ್ಕೆ ಸಂಬಂಧಪಟ್ಟಂತೆ ನೀಡುತ್ತಿರುವ ಹೇಳಿಕೆಗಳು ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದಿರುವುದು ನಿಜ" ಎಂದೂ, ಆಕೆಗೆ ನೀಡಿರುವ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನವನ್ನು ಹಿಂದೆ ಪಡೆಯಲಾಗುವುದೆಂದೂ ಹೇಳಿದ್ದಾರೆ. ಇದು ಬಿಜೆಪಿ ಹಿಂದೂಗಳ ಪಕ್ಷವಲ್ಲವೆಂದೂ, ಹಿಂದೂ ಪುರುಷರ ಪಕ್ಷ ಮಾತ್ರವೆಂದೂ ಮತ್ತೊಮ್ಮೆ ಸಾಬೀತು ಮಾಡುತ್ತಿದೆ.

ಶ್ರುತಿಯ ವೈಯಕ್ತಿಕ ವಿಚ್ಛೇದನ ನಿರ್ಧಾರಕ್ಕೂ, ಪಕ್ಷದ ವರ್ಚಸ್ಸಿಗೂ ಏನು ಸಂಬಂಧ? ತಮ್ಮ ಪಕ್ಷದ ಶಾಸಕ ರಘುಪತಿ ಭಟ್ಟ ಹೆಂಡತಿ ಪದ್ಮಪ್ರಿಯಾಳನ್ನು ಕೊಂದಾಗ ಇವರ ಪಕ್ಷದ ವರ್ಚಸ್ಸಿಗೆ ಹಾನಿಯಾಗಲಿಲ್ಲ, ಅಪ್ಪ-ಮಗಳೆಂದು ಹೇಳಿಕೊಳ್ಳುತ್ತಾ ಬ್ರಹ್ಮ-ಸರಸ್ವತಿ ಆಟ ಆಡುವ ಮುಖ್ಯಮಂತ್ರಿಗಳಿಂದ ಬಿಜೆಪಿ ವರ್ಚಸ್ಸಿಗೆ ಹಾನಿಯಾಗಲಿಲ್ಲ, ದಾವಣಗೆರೆಯ ಶಾಸಕ ರೇಣುಕಾಚಾರ್ಯ ಮದುವೆಯಾಗಿದ್ದರೂ ನರ್ಸ್ ಒಬ್ಬಳೊಂದಿಗೆ ಬಹಿರಂಗ ಸಂಬಂಧವಿಟ್ಟುಕೊಂಡದ್ದರಿಂದ ಪಕ್ಷದ ವರ್ಚಸ್ಸಿಗೆ ಹಾನಿಯಾಗಲಿಲ್ಲ.

ಮಹಾರಾಷ್ಟ್ರದ ಜಲ್‌ಗಾಂವ್‌ನಲ್ಲಿ ಬಿಜೆಪಿ ಕಾರ್ಪೊರೇಟರ್ ಒಬ್ಬ ಶಾಲಾ ಬಾಲಕಿಯರನ್ನು ಬೆದರಿಸಿ ಬ್ಲೂಫಿಲಂ ತೆಗೆದಾಗ ಬಿಜೆಪಿ ವರ್ಚಸ್ಸಿಗೆ ಹಾನಿಯಾಗಲಿಲ್ಲ. ರಾಜಸ್ಥಾನದಲ್ಲಿ ಬಿಜೆಪಿಯ ನಾಯಕನೊಬ್ಬ ತನ್ನ ಪುತ್ರಿಯ ಮೇಲೆಯೇ ಹಲವಾರು ವರ್ಷಗಳಿಂದ ಅತ್ಯಾಚಾರ ನಡೆಸಿದ್ದ ವಿಕೃತಿ ಹೊರಬಿದ್ದಾಗಲೂ ಬಿಜೆಪಿಯ ವರ್ಚಸ್ಸಿಗೆ ಧಕ್ಕೆಯಾಗಲಿಲ್ಲ, ಛತ್ತೀಸಗಡದ ಬಿಜೆಪಿ ಸಂಸದನೊಬ್ಬ ಮಹಿಳೆಯರನ್ನು ವಿದೇಶದಲ್ಲಿ ಮಾರಾಟ ಮಾಡುವಾಗ ಸೆರೆ ಸಿಕ್ಕಾಗಲೂ ಬಿಜೆಪಿ ಪಕ್ಷದ ವರ್ಚಸ್ಸಿಗೆ ಹಾನಿಯಾಗಲಿಲ್ಲ.



ಆದರೆ ಶ್ರುತಿಯೆಂಬ ಹೆಣ್ಣುಮಗಳೊಬ್ಬಳು ಕಾನೂನು ಬದ್ಧವಾಗಿ ವಿಚ್ಛೇದನ ಪಡೆಯುವ ತನ್ನ ಹಕ್ಕು ಚಲಾಯಿಸಿದೊಡನೆ ಬಿಜೆಪಿ ಪಕ್ಷದ ವರ್ಚಸ್ಸು ಹಾಳಾಯಿತೆಂದು ಹಳಹಳಿಸುತ್ತಿರುವುದೇಕೆ? ಬಿಜೆಪಿ ಪಕ್ಷದ ಪ್ರಕಾರ ಅದರ ವರ್ಚಸ್ಸಿರುವುದೇ ಅದು ಈ ದೇಶದ ಸನಾತನ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿರುವುದರಲ್ಲಿ. ಅದರ ಪ್ರಕಾರ ಈ ದೇಶದ ಸನಾತನವಾದಿ ಮೌಲ್ಯಗಳೇ ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠವಾದದ್ದು ಮತ್ತು ಬಿಜೆಪಿ ಅದರ ಪುನರುತ್ಥಾನಕ್ಕಾಗಿ ರಾಜಕಾರಣ ಮಾಡುತ್ತಿದೆ.

ಈ ಸನಾತನವಾದಿ ಪರಂಪರೆಯಲ್ಲಿ ಮಹಿಳೆಯರ ಸ್ಥಾನಮಾನವೇನು? ಅದನ್ನು ಮನುಸ್ಮೃತಿ ಅತ್ಯಂತ ಸ್ಪಷ್ಟವಾಗಿ ದಾಖಲಿಸಿದೆ. "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ"- ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. "ಆಕೆ ಹುಟ್ಟುತ್ತಾ ತಂದೆಯ ನೆರಳಿನಲ್ಲೂ, ಯೌವನದಲ್ಲಿ ಗಂಡನ ನೆರಳಿನಲ್ಲೂ ಮತ್ತು ವೃದ್ಧಾಪ್ಯದಲ್ಲಿ ಮಕ್ಕಳ ನೆರಳಿನಲ್ಲೂ ಬದುಕಬೇಕು." ಆಕೆಯ ಜೀವನ ಸಾರ್ಥಕ್ಯವಿರುವುದೇ ಗಂಡನ ಸೇವೆಯಲ್ಲಿ! ಇಂಥ ಮೌಲ್ಯಗಳನ್ನು ಹೊಂದಿರುವ ಬಿಜೆಪಿ ತನ್ನ ಪಕ್ಷದ ನಾಯಕಿ ವಿಚ್ಛೇದನಕ್ಕೆ ಅರ್ಜಿ ಹಾಕುವುದನ್ನು ಸಹಿಸಲು ಸಾಧ್ಯವೇ?

ಆದರೆ ದುರಂತವೆಂದರೆ ಈ ಬಗೆಯ ನಿಲುವು ಬಿಜೆಪಿಗೆ ಮಾತ್ರ ಸೀಮಿತವಾಗಿಲ್ಲ. ಹೊರೆಹೊತ್ತ ಮಹಿಳೆಯ ಲಾಂಛನ ಹೊಂದಿರುವ ಜೆಡಿಎಸ್‌ನ ಮಹಿಳಾಮಣಿಗಳು ಇದೇ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಪ್ರಾಯಶಃ ಕಾಂಗ್ರೆಸ್ಸಿನಲ್ಲಿರುವವರು ಅದೇ ಅಭಿಪ್ರಾಯ ಹೊಂದಿರಲಿಕ್ಕೂ ಸಾಕು. ಅಷ್ಟು ಮಾತ್ರವಲ್ಲ, ವಿಚ್ಛೇದನವೆಂಬ ಅತ್ಯಂತ ಖಾಸಗಿ ವಿಷಯವನ್ನು ಮಾಧ್ಯಮಗಳು ನಿರ್ವಹಿಸಿದ ರೀತಿಯೂ ಸಹ ನಾಚಿಕೆ ತರುವಂತಿವೆ. ಶ್ರುತಿ ಚಲನಚಿತ್ರ ನಟಿಯಾಗಿದ್ದ ಮಾತ್ರಕ್ಕೆ ಆಕೆಯ ಖಾಸಗಿ ಜೀವನವನ್ನು ಒಂದು ಚೀಪ್‌ರೇಟ್ ಕನ್ನಡ ತ್ರಿಕೋನ ಪ್ರೇಮಕಥೆಯಂತೆ ಬಾಯಿ ಚಪ್ಪರಿಸುತ್ತಾ ಬಿತ್ತರಿಸುತ್ತಿರುವ ಮಾಧ್ಯಮಗಳು ಅತ್ಯಂತ ಹೊಣೆಗೇಡಿತನವನ್ನು ತೋರಿಸುತ್ತಿವೆ. ಯಾವುದೋ ಅಪರಾಧಕ್ಕೆ ಸಾರ್ವಜನಿಕ ವಿಚಾರಣೆ ನಡೆಸುತ್ತಿರುವಂತೆ ಅಥವಾ ಮತ್ತೊಂದು ಚಿತ್ರವೊಂದರ ಯಶಸ್ಸಿನ ಬಗ್ಗೆ ವಿಚಾರಿಸುತ್ತಿರುವಂತೆ "ನಿಮ್ಮ ಈ ಪ್ರೇಮವಾದರೂ ಯಶಸ್ವಿಯಾಗುತ್ತದೆಂಬುದಕ್ಕೆ ಖಾತರಿ ಏನು" ಎಂದು ಪ್ರಶ್ನಿಸುತ್ತಿವೆ.

ಚಾರ್ವಾಕ

▸ ಶಿವಸುಂದರ್

ಇದರ ಹಿಂದೆ ಆಕೆ ಮಾಡಿಕೊಂಡಿರುವ ಆಯ್ಕೆ ಸರಿಯಾದದ್ದಲ್ಲ ಎಂಬ ನೈತಿಕ ಮುಖವಾಡವಿದ್ದರೂ ಮಹಿಳೆ ವಿಚ್ಛೇದನ ಕೇಳುವುದೇ ಅಪರಾಧವೆಂಬ ಪುರುಷಪ್ರಧಾನ ಮೌಲ್ಯವೇ ಕೆಲಸ ಮಾಡುತ್ತಿದೆ. ವಿಚ್ಛೇದನ ನಂತರದಲ್ಲಿ ಒಬ್ಬರು ಮಾಡಿಕೊಳ್ಳುವ ಆಯ್ಕೆ 'ಸರಿ' ಇದ್ದರೆ ಮಾತ್ರ ಸಮರ್ಥನೀಯವೆಂಬ ಮಾನದಂಡವನ್ನು ಈ ಮಾಧ್ಯಮಗಳು ಪುರುಷರಿಗೇನೂ ಅನ್ವಯಿಸುವುದಿಲ್ಲವಲ್ಲ!

ಸಾರ್ವಜನಿಕ ವ್ಯಕ್ತಿಗಳ ಜೀವನಶೈಲಿ ಅವರು ಪ್ರತಿಪಾದಿಸುವ ಜೀವನಮೌಲ್ಯಗಳಿಗೆ ತದ್ವಿರುದ್ಧವಾಗಿದ್ದಾಗ ಸಾರ್ವಜನಿಕರಿಗೆ ಅದನ್ನು ಪ್ರಶ್ನಿಸುವ ಹಕ್ಕು ಖಂಡಿತಾ ಇರಬೇಕು. ಶ್ರುತಿಯ ಪ್ರಕರಣದಲ್ಲಿ ಅಂಥ ವೈರುಧ್ಯವಿರುವುದು ಆಕೆ ವಿಚ್ಛೇದನದಂಥ ಮೂಲಭೂತ ಮಹಿಳಾ ಸ್ವಾತಂತ್ರ್ಯವನ್ನೂ ವಿರೋಧಿಸುವ ಬಿಜೆಪಿ ಪಕ್ಷದ ಸದಸ್ಯಳಾಗಿರುವುದರಲ್ಲಿ ಮಾತ್ರ!

ಅದನ್ನು ಬಿಟ್ಟರೆ ಆಕೆ ಮಹೇಂದರ್‌ಗೆ ದ್ರೋಹ ಮಾಡಿದಳೇ ಎಂಬ ವಿಷಯವಾಗಲೀ, ಆಕೆ ಕಾಲಿಟ್ಟಿರುವ ಹೊಸ ದೋಣಿಯೂ ತೂತೇ ಎನ್ನುವ ವಿಚಾರವಾಗಲೀ ಸಂಬಂಧಪಟ್ಟವರು ಮತ್ತು ಅವರು ಇಷ್ಟಪಟ್ಟರೆ ಅವರ ಹಿತಚಿಂತಕರು ಒಟ್ಟು ಸೇರಿ ಬಗೆಹರಿಸಿಕೊಳ್ಳಬೇಕಿರುವ ವಿಷಯ. ಅದಕ್ಕೂ ಬಿಜೆಪಿ ಪಕ್ಷಕ್ಕೂ, ಮಾಧ್ಯಮಗಳಿಗೂ, ಸಮಾಜಕ್ಕೂ ಏನೂ ನೇರ ಸಂಬಂಧವಿಲ್ಲ. ಆದರೆ ಅಂಥ ಪ್ರಬುದ್ಧತೆಯನ್ನು ಯಾರೂ ಪ್ರದರ್ಶಿಸಲು ಸಿದ್ಧರಿಲ್ಲ. ಶ್ರುತಿಯನ್ನು ಮತ್ತು ಆಕೆಯ ಹೊಸ ದೋಣಿಯನ್ನು ಒಳಗೊಂಡಂತೆ! ■

No Comments

"ನನ್ನ ಗಂಡ ಪತ್ರಕರ್ತ ಲಸಂತ ವಿಕ್ರಮತುಂಗೆ ಶ್ರೀಲಂಕಾ ಸರ್ಕಾರದಿಂದ ಹತರಾದ ನಂತರವೂ ಸಿಂಹಳೀಯ ಸರ್ಕಾರಕ್ಕೆ ಸವಾಲಾಗಿದ್ದಾರೆ. ಈಗಲೂ ಗೂಗಲ್‌ನಲ್ಲಿ ಶ್ರೀಲಂಕಾದ ಅಧ್ಯಕ್ಷನಿಗಿಂತ ಲಸಂತನ ಹೆಸರೇ ಅತ್ಯಂತ ಜನಪ್ರಿಯವಾಗಿದ್ದು ಹೆಚ್ಚಿನ ಓದುಗರನ್ನು ಪಡೆದಿದೆ."

-.ಸೋನಾಲಿ ವಿಕ್ರಮತುಂಗೆ

"2008-09ರ ಸಾಲಿನಲ್ಲಿ ಕೃಷಿಗೆ 52,000 ಕೋಟಿ ರೂ.ಸಾಲ ನೀಡಲಾಗಿದ್ದರೆ, ಕೈಗಾರಿಕೆಗಳಿಗೆ 2.13ಲಕ್ಷ ಕೋಟಿ ರೂ. ಸಾಲ ನೀಡಲಾಗಿದೆ."

- ರಿಸರ್ವ್ ಬ್ಯಾಂಕ್ ವರದಿ

"ತನ್ನ ದೇಶದಲ್ಲಿ ಗ್ಯಾಸ್ ಅಥವಾ ಇತರೇ ಇಂಧನಗಳು ಅಥವಾ ಇನ್ಯಾವುದೇ ಸಂಪನ್ಮೂಲಗಳು ಇಲ್ಲದ ಯಾವುದೇ ಆಫ್ರಿಕನ್ ಬಡ ದೇಶ ಭಾರತದ ರಾಯಭಾರ ಕಚೇರಿಯ ಗಮನ ಸೆಳೆಯುವುದು ಕಷ್ಟ."

- ಭಾರತ-ಆಫ್ರಿಕಾ ಸಮ್ಮೇಳನದಲ್ಲಿ ಆಫ್ರಿಕಾ ದೇಶದ ರಾಯಭಾರಿಯೊಬ್ಬ ಹೇಳಿದ ಮಾತು

"ಉದಾರೀಕರಣ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಕಳ್ಳಸಾಗಣೆಯ ಪ್ರಮಾಣವೂ ಹೆಚ್ಚಾಗಿದೆ."

- ಪ್ರೊ.ಸಿ.ಪಿ. ಚಂದ್ರಶೇಖರ್, ಅರ್ಥಶಾಸ್ತ್ರಜ್ಞ

"ಪಾಕಿಸ್ತಾನ ಮತ್ತು ಅಮೆರಿಕದ ಗೂಢಚರ್ಯೆ ಸಂಸ್ಥೆಗಳಾದ ಐಎಸ್‌ಐ ಮತ್ತು ಸಿಐಎಗಳೆರಡೂ ಒಟ್ಟು ಸೇರಿಯೇ ತಾಲಿಬಾನನ್ನು ಹುಟ್ಟುಹಾಕಿದ್ದೆಂದು ನಾನು ಒಪ್ಪಿಕೊಳ್ಳುತ್ತೇನೆ."

- ಆಸಿಫ್ ಅಲಿ ಜರ್ದಾರಿ, ಪಾಕಿಸ್ತಾನದ ಅಧ್ಯಕ್ಷ

"ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯ ಜೊತೆ ನಿತೀಶ್ ಕುಮಾರ್ ವೇದಿಕೆ ಹಂಚಿಕೊಂಡು ತಮ್ಮ ಜಾತ್ಯತೀತ ಮುಖವಾಡವನ್ನು ಕಿತ್ತುಹಾಕಿದ್ದಾರೆ."

-ಲಾಲು ಪ್ರಸಾದ್ ಯಾದವ್

"ಈ ಚುನಾವಣೆಗಳಲ್ಲಿ ಶರದ್ ಪವಾರ್, ನಿತೀಶ್ ಕುಮಾರ್ ಮುಂತಾದವರು ಮಾತಾಡುತ್ತಿರುವುದನ್ನು ಕೇಳಿದಷ್ಟೂ ನನ್ನ ಗೊಂದಲ ಹೆಚ್ಚಾಗುತ್ತಿದೆ. ಇಂದು ಒಂದು ಮಾತನಾಡಿದರೆ ನಾಳೆ ಮತ್ತೊಂದನ್ನು ಮಾತಾಡುತ್ತಾರೆ."

- ಫ್ರೆಂಚ್ ರಾಯಭಾರಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಬಾಬ್ರಿ ಮಸೀದಿ ಕಡೆವಿದ ಸೇಡನ್ನು ನಾವೆಲ್ಲಾ ಒಟ್ಟುಸೇರಿ ತೀರಿಸಿಕೊಳ್ಳಬೇಕು. ನಾನು ಬಿಜೆಪಿಗೆ ಗೋರಿ ತೋಡಿದ್ದೇನೆ. ನೀವದನ್ನು ಮಣ್ಣುಹಾಕಿ ಮುಚ್ಚಿಬಿಡಿ."

- ಕಲ್ಯಾಣ್ ಸಿಂಗ್

"ಕ್ರಿಮಿನಲ್ ನ್ಯಾಯದಾನ ಪ್ರಕರಣಗಳಲ್ಲಿ ಅದ್ಭುತವಾದ ನ್ಯಾಯದೃಷ್ಟಿ ಇರುವ ಆದೇಶಗಳನ್ನು ನ್ಯಾಯಮೂರ್ತಿ ಅರಿಜಿತ್ ಪಸಾಯತ್ ಅವರು ನೀಡಿದ್ದಾರೆ."

- ಆರ್.ಕೆ. ರಾಘವನ್, ನಿವೃತ್ತ ಪೊಲೀಸ್ ಅಧಿಕಾರಿ

"ಅನ್ಯಾಯದ ವಿರುದ್ಧ ದನಿ ಎತ್ತಿ ಬದ್ಧತೆಯಿಂದ ಹೋರಾಟ ನಡೆಸಿ ಸಂಚಲನ ಸೃಷ್ಟಿಸಿದ ಡಾ. ಸಿದ್ದಲಿಂಗಯ್ಯನವರನ್ನು ಕರ್ನಾಟಕದ ಅಂಬೇಡ್ಕರ್ ಎನ್ನಬಹುದು."

- ಸಿ.ಹೆಚ್. ಹನುಮಂತರಾಯ

"ನಾನು ತೆಲಂಗಾಣದ ಹಿತಾಸಕ್ತಿಯಿಂದ ಎನ್‌ಡಿಎ ರ್‍ಯಾಲಿಯಲ್ಲಿ ಭಾಗವಹಿಸಿದ್ದೇನೆ ಹೊರತು ನಾನೇನು ಎನ್‌ಡಿಎ ಸೇರಿಕೊಂಡಿಲ್ಲ"

- ಚಂದ್ರಶೇಖರ್, ಟಿಆರ್‌ಎಸ್ ಮುಖಂಡ

"ಪ್ರತಿಭಟನೆಗಳಲ್ಲಿ ಹಿಂಸೆಯನ್ನು ಬಳಸುವುದನ್ನು ನಾವು ಒಪ್ಪುವುದಿಲ್ಲ."

- ರಾಂ ಮಾಧವ್, ಆರೆಸ್ಸೆಸ್ ಮುಖಂಡ

ಅನಿವಾರ್ಯ ಕರ್ಮ!

"ಕಾಂಗ್ರೆಸ್ ಸರ್ಕಾರಕ್ಕೆ ಎಡರಂಗ ಹೊರಗಿನಿಂದ ಬೆಂಬಲ ನೀಡುವುದು ಅಂಥಾ ಉತ್ತಮ ಬೆಳವಣಿಗೆಯೇನಲ್ಲ, ಆದರೆ ಎನ್‌ಡಿಎ ಮೈತ್ರಿಕೂಟವನ್ನಂತೂ ರಾಜಕೀಯ ಅಸ್ಪೃಶ್ಯರಂತೆಯೇ ಕಾಣಬೇಕು."

- ಪ್ರೊ. ಸುಮಿತ್ ಸರ್ಕಾರ್

ಅಭಿವ್ಯಕ್ತಿ ಸ್ವಾತಂತ್ರ್ಯದ ದುರ್ಬಳಕೆ!

"ಸಂಸ್ಕೃತ ಭಾಷೆಯ ಕಲಿಕೆ ಮತ್ತು ಅನುಷ್ಠಾನದಿಂದ ಮಾತ್ರ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ."

- ಪೇಜಾವರ ಸ್ವಾಮೀಜಿ

ಬೆಡ್‌ರೂಮಿನಲ್ಲೂ ಇಣುಕಿ ನೋಡುವ ಪಕ್ಷ

"ಶ್ರುತಿಯವರು ವಿಚ್ಛೇದನಕ್ಕೆ ಸಂಬಂಧಪಟ್ಟಂತೆ ನೀಡುತ್ತಿರುವ ಹೇಳಿಕೆಗಳು ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದಿರುವುದು ನಿಜ."

- ಸದಾನಂದ ಗೌಡ

ಪ್ರಜಾತಂತ್ರದಲ್ಲಿ ವ್ಯಕ್ತಿಪೂಜೆ ಸರ್ವಾಧಿಕಾರದ ಮೆಟ್ಟಿಲು

ಚಿಂತಕರ ಚಾವಡಿ

"ವ್ಯಕ್ತಿಯೊಬ್ಬನ ಬಳಿ, ಆತ ಎಷ್ಟೇ ಮಹಾತ್ಮನಿರಲಿ, ಸಮಾಜ ತನ್ನ ಸ್ವಾತಂತ್ರ್ಯವನ್ನು ಅಡವಿಡಬಾರದು. ಅದರಲ್ಲೂ ಸಮಾಜ ತನ್ನ ಸಾಮೂಹಿಕ ಪ್ರಯತ್ನದಿಂದ ಕಟ್ಟಿದ ಸಾಂಸ್ಥಿಕ ರಚನೆಗಳನ್ನು ಬದಲಾಯಿಸಿಬಿಡುವಷ್ಟು ಅಧಿಕಾರವನ್ನಂತೂ ಯಾವ ವ್ಯಕ್ತಿಗೂ ಕೊಡಲೇಬಾರದು. ಭಾರತದ ರಾಜಕಾರಣದಲ್ಲಿ ಭಕ್ತಿ ಅಥವಾ ವ್ಯಕ್ತಿಪೂಜೆಯು ಇತರ ದೇಶಗಳಿಗಿಂತ ಎಷ್ಟೋ ಪಾಲು ಹೆಚ್ಚಿನ ಪಾತ್ರವನ್ನು ವಹಿಸುತ್ತದೆ. ಧಾರ್ಮಿಕ ಜೀವನದಲ್ಲಿ ಭಕ್ತಿಯು ವ್ಯಕ್ತಿಯೊಬ್ಬನ ಮೋಕ್ಷಸಾಧನೆಯ ಮಾರ್ಗವಾಗಿರಬಹುದು. ಆದರೆ ರಾಜಕಾರಣದಲ್ಲಿ ವ್ಯಕ್ತಿಪೂಜೆ ಅಥವಾ ಭಕ್ತಿಯು ಸಂಸ್ಥೆಗಳ ಅವನತಿಗೆ ಮತ್ತು ನಿಧಾನವಾಗಿ ಸರ್ವಾಧಿಕಾರಕ್ಕೆ ದಾರಿಮಾಡಿಕೊಡುತ್ತದೆ."



- ಡಾ.ಅಂಬೇಡ್ಕರ್

ನೀನಾ ಮತ್ತು ಸೀತೆಯರ ದುಃಖ



ಕಂಡಹಾಗೆ

■ ಗೌರಿ ಲಂಕೇಶ್

ಒಬ್ಬಳ ಹೆಸರು ಸೀತಾ, ಇನ್ನೊಬ್ಬಳ ಹೆಸರು ...ನಾ. ಮೊದಲನೆಯವಳು ಸುಮಾರು ಎರಡು ಸಾವಿರ ...ಗಳ ಹಿಂದೆ ಸೃಷ್ಟಿಸಲ್ಪಟ್ಟ ಪುರಾಣದಲ್ಲಿ ಕಾಣಿಸಿ...ಳ್ಳುವ ಮಹಿಳೆ. ಎರಡನೆಯವಳು ಆಧುನಿಕ ...ಶವಾದ ಅಮೆರಿಕದಲ್ಲಿ ವ್ಯಂಗ್ಯ ಚಿತ್ರಕಾರಳಾಗಿ ...ಡಿಯುತ್ತಿರುವ ಹೆಂಗಸು. ಆದರೆ ಕಾಲ, ದೇಶ, ...ಷೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಮೀರಿ ...ರಿಬ್ಬರನ್ನು ಒಂದು ಸಂಗತಿ ಜೊತೆಗೂಡಿಸುತ್ತದೆ. ...ು ಗಂಡನಿಂದ ತಿರಸ್ಕೃತಗೊಂಡಿರುವ ಮಡದಿ...ಬ್ಬಳ ಯಾತನೆ, ಅಸಹಾಯಕತೆ ಮತ್ತು ಏಕಾಂಗಿತನ.

...ಸೀತೆ ಬೇರೆ ಯಾರೂ ಅಲ್ಲ, ವಾಲ್ಮೀಕಿ ಬರೆದ ...ಮಾಯಣದ ನಾಯಕಿ. ಆ ಸೀತೆಗಾದ ವ್ಯಥೆ ತನಗಾದ ...ಖಕ್ಕಿಂತ ವಿಭಿನ್ನವಾಗಿರಲಿಲ್ಲ ಎಂದು 'ಸೀತಾ ...ಗ್ಸ್ ದ ಬ್ಲೂಸ್' ಎಂಬ ಆನಿಮೇಷನ್ ಸಿನಿಮಾದ ...ಮೂಲಕ ನೀನಾ ಪ್ಯಾಲಿ ತೋರಿಸಿದ್ದರಿಂದ ಇವತ್ತು ... ಕೆಲ ಹಿಂದೂತ್ವವಾದಿಗಳ ಕೆಂಗಣ್ಣಿಗೆ ...ಯಾಗಿದ್ದಾಳೆ.

...ಪುರುಷನೊಬ್ಬ ತನ್ನ ಮಡದಿಯ ಬಗ್ಗೆ ವಿನಾಕಾರಣ ...ಪ್ರೀತಿ ಕಳೆದುಕೊಳ್ಳಬಹುದೇ? ಆಕೆ ಯಾವ ತಪ್ಪು ...ಮಾಡಿರದಿದ್ದರೂ ಅವಳನ್ನು ತಿರಸ್ಕರಿಸಬಹುದೇ? ...ತನನ್ನು ಪ್ರೀತಿಸಿ ಆತನಿಗಾಗಿ ಎಂತಹ ತ್ಯಾಗವನ್ನೂ ...ಮಾಡಲು ಸಿದ್ಧವಿರುವ ಹೆಂಡತಿಯನ್ನು ಆತ ತನ್ನ ...ಬದುಕಿನಿಂದಲೇ ಹೊರದೂಡಿದರೆ ಆಕೆ ಏನು ...ಮಾಡಬೇಕು?

...ಈ ಎಲ್ಲ ಪ್ರಶ್ನೆಗಳು ನೀನಾಳನ್ನು ಕಾಡಿದ್ದು ಆಕೆಯ ...ಗಂಡ ಅವಳಿಗೆ ಇ-ಮೇಲ್ ಮೂಲಕ 'ನೀನಾ, ವಾಪಸ್ಸು ...ಬರಬೇಡ' ಎಂಬ ಒಂದೇ ಒಂದು ಸಾಲನ್ನು ಕಳುಹಿಸಿ ...ಅವಳೊಂದಿಗಿನ ತನ್ನ ದಾಂಪತ್ಯ ಜೀವನವನ್ನು ...ನಿರ್ದಾಕ್ಷಿಣ್ಯವಾಗಿ ಅಂತ್ಯಗೊಳಿಸಿದಾಗ.

...ಅದು ಆದದ್ದು ಹೀಗೆ: ನೀನಾಳ ಅಮೆರಿಕನ್ ...ಗಂಡನಿಗೆ ಭಾರತದಲ್ಲಿ ಆರು ತಿಂಗಳ ಕಾಲ ಕಾಂಟ್ರಾಕ್ಟ್ ...ಮೇಲೆ ಕೆಲಸ ಮಾಡುವ ಅವಕಾಶ ಸಿಗುತ್ತದೆ. ಅಲ್ಲಿಯ...ವರೆಗೆ ಅವರಿಬ್ಬರ ದಾಂಪತ್ಯ ಜೀವನ ಚೆನ್ನಾಗಿ ಸಾಗಿದ್ದು ... ನೀನಾಳನ್ನು ಅಮೆರಿಕದಲ್ಲಿ ಬಿಟ್ಟು ಭಾರತಕ್ಕೆ ...ಬರುತ್ತಾನೆ. ಆದರೆ ಇಲ್ಲಿಗೆ ಬಂದನಂತರ ನೀನಾಳನ್ನು ...ಉಪೇಕ್ಷಿಸಲಾರಂಭಿಸುತ್ತಾನೆ. ಹೀಗೆ ಕೆಲ ತಿಂಗಳುಗಳು ...ಉಳಿದ ನಂತರ ಆತನ ಕಾಂಟ್ರಾಕ್ಟ್ ಅನ್ನು ಇನ್ನೊಂದು ...ವರ್ಷದ ಅವಧಿಗೆ ವಿಸ್ತರಿಸಲಾಗುತ್ತದೆ. ಆಗ ನೀನಾ ...ೂ ತನ್ನ ಗಂಡನೊಂದಿಗೆ ವಾಸಿಸಬೇಕೆಂದು ನಿರ್ಧರಿಸಿ ...ಕೆಲಸಕ್ಕೆ ರಾಜೀನಾಮೆ ನೀಡಿ, ಬಾಡಿಗೆ ಮನೆಯನ್ನು ...ಬಿಟ್ಟು, ಗಂಟುಮೂಟೆ ಕಟ್ಟಿಕೊಂಡು ಆಕೆಯೂ ...ಭಾರತಕ್ಕೆ ಬರುತ್ತಾಳೆ.

...ಅಪಾರ ಪ್ರೀತಿ ಹೊತ್ತು ಬಂದಿರುವ ನೀನಾಳಿಗೆ ... ಆಘಾತ ಕಾದಿರುತ್ತದೆ. ಅವಳ ಗಂಡ ಆಕೆಯ ...ಗಿನ ಪ್ರೀತಿ ಮತ್ತು ಆಸಕ್ತಿಯನ್ನು ಕಳೆದುಕೊಂಡಿದ್ದಾನೆ. ...ಸಹಜವಾಗಿಯೇ ನೀನಾ ಇದನ್ನು ಕಂಡು ಘಾಸಿಗೊಳಗಾ...ಗುತ್ತಾಳೆ. ಇದು ತಾತ್ಕಾಲಿಕ ಸಮಸ್ಯೆ ಎಂದು ಭಾವಿಸಿ ...ಗಂಡನ ತಾತ್ಸಾರವನ್ನು ಸಹಿಸಿಕೊಂಡಿರುತ್ತಾಳೆ. ಭಾರತದಲ್ಲಿ ...ಆಕೆಗೆ ಸ್ನೇಹಿತರಾಗಲಿ, ಸಹೋದ್ಯೋಗಿಗಳಾಗಲಿ ...ಇಲ್ಲದಿರುವುದು ಆಕೆಯ ಏಕಾಂಗಿತನವನ್ನು ಹೆಚ್ಚಿಸುತ್ತಿದೆ. ...ಜೊತೆಗೆ ಭಾರತೀಯ ಮಹಿಳೆಯರಿಗೆ ಸ್ವಾತಂತ್ರ್ಯ ಇಲ್ಲದಿ...ರುವುದು, ಅವರನ್ನು ಎರಡನೆ ದರ್ಜೆಯ ಪ್ರಜೆಗಳಂತೆ ...ನೋಡಿಕೊಳ್ಳುವುದು, ಗಂಡನ ಹೊರತಾಗಿ ಪ್ರತ್ಯೇಕ ಅಸ್ತಿತ್ವ ...ಇಲ್ಲದಿರುವುದೆಲ್ಲ ನೀನಾಳಲ್ಲಿ ಬೇಸರ ಮೂಡಿಸುತ್ತದೆ.

ಅದೇ ಹೊತ್ತಿಗೆ ನೀನಾ 'ರಾಮಾಯಣ'ವನ್ನು ಓದಲು ಪ್ರಾರಂಭಿಸುತ್ತಾಳೆ. ರಾಮನನ್ನು ಮರ್ಯಾದ ಪುರುಷೋತ್ತಮನೆಂದೂ, ಆತ ಎಲ್ಲ ರೀತಿಯ ಸದ್ಗುಣಗಳನ್ನು ಹೊಂದಿರುವವನೆಂದೂ; ಆದರೆ ಸೀತೆಯನ್ನು ಯಾವ ಸ್ವಂತಿಕೆಯೂ ಇಲ್ಲದ, ಸ್ವಾತಂತ್ರ್ಯವಿಲ್ಲದ ಆಕೃತಿಯಂತೆ ಚಿತ್ರಿಸಿರುವುದನ್ನು ನೋಡಿ ನೀನಾಳಿಗೆ 'ರಾಮಾಯಣ' ಸ್ತ್ರೀದ್ವೇಷಿಯಾದ ಕರಪತ್ರಕ್ಕಿಂತ ಹೆಚ್ಚಿನ ಮೌಲ್ಯ ಹೊಂದಿರದ ಕೃತಿ ಎಂಬಂತೆ ಕಾಣಿಸುತ್ತದೆ.


ಅದೇ ಹೊತ್ತಿಗೆ ನೀನಾ ಹೊಸದಾಗಿ ಸೃಷ್ಟಿಸುವ ಹಾಸ್ಯಚಿತ್ರ ಮಾಲೆ (comic strip) ಯನ್ನು ಉದ್ಘಾಟಿಸಲು ಆಕೆಗೆ ಅಮೆರಿಕದಿಂದ ಆಹ್ವಾನ ಬರುತ್ತದೆ. ಕೆಲ ದಿನಗಳ ಮಟ್ಟಿಗೆಂದು ನೀನಾ ಅಮೆರಿಕಕ್ಕೆ ಹೋದಾಗ ಅವಳ ಗಂಡ 'ನೀನಾ, ವಾಪಸ್ಸು ಬರಬೇಡ' ಎಂಬ ಇ-ಮೇಲ್ ಕಳುಹಿಸಿ ಅವಳೊಂದಿನ ತನ್ನ ದಾಂಪತ್ಯ ಜೀವನವನ್ನು ಅಂತ್ಯಗೊಳಿಸುತ್ತಾನೆ. ತನ್ನ ಈ ನಿರ್ಧಾರಕ್ಕೆ ಆತ ಯಾವ ಕಾರಣವನ್ನಾಗಲಿ, ವಿವರಣೆಯನ್ನಾಗಲಿ ನೀಡುವುದಿಲ್ಲ. ಬದಲಾಗಿ ತನ್ನ ಜೀವನದಿಂದ ಅದೆಂತಹದ್ದೋ ಬೇಡವಾದ ವಸ್ತುವನ್ನು ಬಿಸಾಡಿದಂತೆ ಆಕೆಯನ್ನು ತ್ಯಜಿಸುತ್ತಾನೆ.

ನೀನಾ ದುಃಖದಲ್ಲಿ ಮುಳುಗುತ್ತಾಳೆ. ತನ್ನ ಗಂಡ ತನ್ನನ್ನು ಹೀಗೆ ತಿರಸ್ಕರಿಸಲು ಕಾರಣವೇನೆಂದು ಆಕೆ ಚಿಂತಿಸುತ್ತಿರುವಾಗಲೇ ಆಕೆಗೆ ರಾಮಾಯಣದ ಸೀತೆ ನೆನಪಾಗುತ್ತಾಳೆ. ಮೂರು ಸಾವಿರ ವರ್ಷಗಳ ಹಿಂದೆ ವಾಲ್ಮೀಕಿಯ ಕಾಲ್ಪನಿಕ ಸೃಷ್ಟಿಯಾದ ಸೀತೆ ಅನುಭವಿಸಿದ ಒಬ್ಬಂಟಿತನಕ್ಕೂ ಆಧುನಿಕ ಮಹಿಳೆಯಾದ ತಾನು 21 ನೇ ಶತಮಾನದಲ್ಲಿ ಅನುಭವಿಸುತ್ತಿರುವ ನೋವಿಗೂ ಅಷ್ಟೇನೂ ವ್ಯತ್ಯಾಸವಿಲ್ಲ ಎನಿಸುತ್ತದೆ ನೀನಾಳಿಗೆ. "ನನ್ನನ್ನು ತಿರಸ್ಕರಿಸಿದ್ದ ನನ್ನ ಗಂಡನ ಬಗ್ಗೆ ನನಗಿನ್ನೂ ಇದ್ದ ಪ್ರೀತಿ, ಹಂಬಲ ಮತ್ತು ಆಶೆ ಸೀತೆಯ ಅನುಭವವೂ ಆಗಿತ್ತು. ಆಗ ರಾಮಾಯಣ ಕೇವಲ ಲಿಂಗಭೇದ ತೋರುವ ದೃಷ್ಟಾಂತ ಕತೆಯಾಗಲ್ಲದೆ, ಮನುಷ್ಯರ ನಡುವಿನ ಸಂಬಂಧಗಳ ಮತ್ತು ಅವರ ಹೃದಯಾಳದಲ್ಲಿರುವ ವೇದನೆಯ ಕತೆಯಂತೆ ಕಂಡಿತು. ಅದೇ ಹೊತ್ತಿಗೆ 1920 ರಲ್ಲಿ ಬ್ಲೂಸ್ (ಹೆಚ್ಚಾಗಿ ದುಮ್ಮಾನಗಳ ಬಗೆಗಿನ ಹಾಡುಗಳ ಒಂದು ಸಂಗೀತ ಶೈಲಿ) ಕವನಗಳನ್ನು ಹಾಡಿದ್ದ ಆನೆಟ್ ಹಾನ್‌ಶಾ ಅವರ ಸಂಗೀತವನ್ನು ಕೇಳಿದೆ. ನನ್ನ ವೈಯಕ್ತಿಕ ದುಃಖ, ಸೀತಾಳ ಕಥನ ಮತ್ತು ಹಾನ್‌ಶಾಳ ಸಂಗೀತ, ಈ ಮೂರು ಒಟ್ಟಾಗಿ ಸಾಗಿದ್ದರಿಂದ 'ಸೀತಾ ಸಿಂಗ್ಸ್ ದ ಬ್ಲೂ' ಸಿನಿಮಾವನ್ನು ಮಾಡಿದೆ" ಎನ್ನುತ್ತಾಳೆ ನೀನಾ.

82 ನಿಮಿಷಗಳ ಈ ಆನಿಮೇಟೆಡ್ ಸಿನಿಮಾದಲ್ಲಿ ಸೀತೆಯನ್ನು ತಾನು ವಿಧೇಯಳನ್ನಾಗಿ ತೋರಿಸಿದೆ ಉತ್ಸಾಹಿ, ದೃಢ ನಿರ್ಧಾರಗಳ ಮತ್ತು ಭಾವುಕ ಜೀವಿಯನ್ನಾಗಿ ತೋರಿಸಿದ್ದೇನೆ ಎಂದು ನೀನಾ ಹೇಳುತ್ತಾರಾದರೂ ನಮ್ಮ ದೇಶದಲ್ಲೇ ರಾಮಾಯಣದ ಅನೇಕ ವ್ಯಾಖ್ಯಾನಗಳಲ್ಲಿ ಸೀತೆ ಇದಕ್ಕಿಂತಲೂ ಹೆಚ್ಚು ಗಟ್ಟಿ ವ್ಯಕ್ತಿತ್ವದವಳಾಗಿ ಮೂಡಿಬಂದಿದ್ದಾಳೆ.

ತಾನು ದೇವಾನುದೇವತೆಗಳ ಕತೆ ಹೇಳುತ್ತಿಲ್ಲ, ಬದಲಾಗಿ ಸಾಮಾನ್ಯ ಮನುಷ್ಯರ ಕತೆ ಹೇಳುತ್ತಿರುವೆ ಎಂಬಂತೆ ನೀನಾ ಈ ಚಿತ್ರವನ್ನು ನಿರೂಪಿಸಿ ಅದರಲ್ಲಿ ವ್ಯಂಗ್ಯ ಚಿತ್ರ, ವರ್ಣಕಲಾಕೃತಿ, ಕೊಲಾಜ್ ಮತ್ತು ಸೂತ್ರದ ಬೊಂಬೆಗಳನ್ನು ಉಪಯೋಗಿಸಿದ್ದಾರೆ. ಜೊತೆಗೆ ಅಣಕ ತುಂಬಿರುವ ಆಧುನಿಕ ಶೈಲಿಯ ತಮಾಷೆಯ ಸಂಭಾಷಣೆಗಳನ್ನು ಬಳಸಿದ್ದಾರೆ.

ಸಹಜವಾಗಿಯೇ ಇದೆಲ್ಲ ಕೆಲ 'ರಾಮಭಕ್ತ'ರಾದ ಹಿಂದೂತ್ವವಾದಿಗಳನ್ನು ಕೆರಳಿಸಿದೆ. ಅವರಲ್ಲಿ ಹಲವರು ಹಿಂದೂ ಜನ ಜಾಗೃತಿ ಸಮಿತಿ ಎಂಬ ತಂಡವನ್ನು ಇಂಟರ್‌ನೆಟ್ ಜಾಲದಲ್ಲಿ ಸೃಷ್ಟಿಸಿಕೊಂಡು ಒಂದು ಮನವಿಯನ್ನು ತೇಲಿಬಿಟ್ಟಿದ್ದಾರೆ. ನೀನಾ ತನ್ನ ಈ ಚಿತ್ರದಲ್ಲಿ ಹಿಂದೂ ದೇವತೆಗಳಿಗೆ ಅವಮಾನ ಮಾಡಿದ್ದಾರೆ, ದೇವತೆಗಳನ್ನು ಅರೆನಗ್ನರನ್ನಾಗಿ ಚಿತ್ರಿಸಿದ್ದಾರೆ, ಸೀತೆಯ ಸೌಂದರ್ಯವನ್ನು ಅಶ್ಲೀಲವಾಗಿ ಬಣ್ಣಿಸಲಾಗಿದೆ, ಕೆಲ ಪಾಷಂಡಿಗಳು ರಾಮ ಜನ್ಮಭೂಮಿ ಹೆಸರಿನಲ್ಲಿ ಅಯೋಧ್ಯೆಯಲ್ಲಿದ್ದ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದರು ಎಂದು ಬಿಂಬಿಸಿದ್ದಾರೆ..... ಇಂತಹದ್ದೇ ಹತ್ತಾರು ತಕರಾರುಗಳನ್ನು ಈ ಹಿಂದೂವೀರರು ಎತ್ತಿದ್ದಾರೆ. ಆದರೆ ಈ ಸಿನಿಮಾದ ಮೂಲ ವಸ್ತುವಾದ ರಾಮನಿಂದಾಗಿ ಸೀತೆ ಅನುಭವಿಸಿದ ವೇದನೆ ಬಗ್ಗೆ ಅವರು ಚಕಾರವೆತ್ತಿಲ್ಲ. ಅದರರ್ಥ ಅವರ ಸೀಮಿತ ಬುದ್ಧಿಗೆ ಈ ಚಿತ್ರದ ಆಶಯ ಅರ್ಥವೇ ಆಗಿಲ್ಲ. ಆದರೂ ತಾವು ಹಿಂದೂಗಳ ಪ್ರತಿನಿಧಿಗಳೆಂಬಂತೆ ವರ್ತಿಸಿರುವ ಅವರೆಲ್ಲರೂ ಈ ಚಿತ್ರವನ್ನು ಕೂಡಲೇ ನಿಷೇಧಿಸಬೇಕೆಂದೂ, ಅದರ ಸೃಷ್ಟಿಕರ್ತರ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳಬೇಕೆಂದೂ ಅಗ್ರಹಿಸಿದ್ದಾರೆ.



ಇಂತಹ ಮನಸ್ಥಿತಿಯವರಿಗೆ ರಾಮ ಓರ್ವ ಕಾಲ್ಪನಿಕ ಪುರುಷನಾಗಿದ್ದ ಎಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲ, ಅಷ್ಟೇ ಅಲ್ಲ ಜಗತ್ತಿನಾದ್ಯಂತ ಕೇವಲ ಒಂದು ರಾಮಾಯಣವಿಲ್ಲ ಬದಲಾಗಿ ನೂರಾರು ವಿಭಿನ್ನ ರಾಮಾಯಣಗಳಿವೆ ಎಂಬುದನ್ನು ಒಪ್ಪಿಕೊಳ್ಳಲು ಅವರು ಸಿದ್ಧವಿಲ್ಲ.


ಉದಾಹರಣೆಗೆ ಭಾರತದಲ್ಲಿ ರಾಮಾಯಣದ ಹಲವಾರು ವ್ಯಾಖ್ಯಾನಗಳಿವೆ. ಮಾತ್ರವಲ್ಲ , ಯಾವ ಸಮುದಾಯದ ಜನ ಅದನ್ನು ವ್ಯಾಖ್ಯಾನಿಸಿದ್ದಾರೆ ಎಂಬುದನ್ನು ಆಧರಿಸಿ, ಆ ಸಮುದಾಯಗಳ ಆಶೋತ್ತರಗಳನ್ನು ಮತ್ತು ಸೈದ್ಧಾಂತಿಕ ಕಾಳಜಿಗಳನ್ನು ಬಿಂಬಿಸುತ್ತಾ ರಾಮಾಯಣ ಹಲವಾರು ರೂಪಗಳನ್ನು ಪಡೆದಿದೆ. ಆದ್ದರಿಂದ ಒಂದು ರಾಮಾಯಣದಲ್ಲಿ ಸೀತೆ ರಾವಣನ ಮಗಳಾಗಿದ್ದರೆ, ಬುಡಕಟ್ಟು ಸಮುದಾಯಗಳ ರಾಮಾಯಣಗಳಲ್ಲಿ ಸೀತೆ ಪತಿವ್ರತೆಯಲ್ಲ. ಹಾಗೆಯೇ ಮತ್ತೊಂದು ರಾಮಾಯಣದಲ್ಲಿ ರಾವಣ ಸುಸಂಸ್ಕೃತ ಮತ್ತು ಮಾನವೀಯ ವ್ಯಕ್ತಿಯಾಗಿದ್ದರೆ ರಾಮ ದುರ್ಬಲ ಮತ್ತು ಧೈರ್ಯವಿಲ್ಲದ ವ್ಯಕ್ತಿಯಾಗಿದ್ದಾನೆ. ಇನ್ನೂ ವಿಚಿತ್ರವೆಂದರೆ ಕೆಲ ರಾಮಾಯಣಗಳಲ್ಲಿ ಸೀತೆಗೆ ಆಗಾಗ್ಗೆ ತಪರಾಕಿ ಕೊಡುವ ವ್ಯಕ್ತಿಯಾಗಿಯೂ ರಾಮ ನಿರೂಪಿತನಾಗಿದ್ದಾನೆ.

ಆದರೆ ಹಿಂದೂತ್ವವಾದಿಗಳಿಗೆ ಇದ್ಯಾವುದೂ ಅರ್ಥವಾಗುವುದಿಲ್ಲ, ಕೊನೆಗೆ ವಾಲ್ಮೀಕಿ ಬರೆದ ರಾಮಾಯಣವೂ ಅವರಿಗೆ ಬೇಕಿಲ್ಲ. ಅವರಿಗೆ ಬೇಕಿರುವುದು ಯುದ್ಧಕ್ಕೆ ಸನ್ನದ್ಧನಾಗಿರುವ ರಾಮ ಮಾತ್ರ. ಯಾಕೆಂದರೆ ಅಂತಹ ರಾಮನಲ್ಲಿ ಮಾತ್ರ ಅವರಿಗೆ ತಮ್ಮಲ್ಲಿರದ ಪೌರುಷತ್ವ ಕಾಣಿಸುತ್ತದೆ. ಮಾನವೀಯತೆ ಕಳೆದುಕೊಂಡಿರುವ ರಾಮನಲ್ಲಿ ಅವರಿಗೆ ತಮ್ಮ ಅಂತರಾಳದಲ್ಲಿರುವ ರಕ್ತದಾಹದ ದರ್ಶನವಾಗುತ್ತದೆ. ಅವರ ರಾಮ ಯಾವುದೇ ಕಾರಣವಿಲ್ಲದೆ ತನ್ನ ಹೆಂಡತಿಯನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುತ್ತಾನೆ, ಗರ್ಭಿಣಿಯಾದ ಆಕೆಯನ್ನು ಕಾಡಿಗೂ ಅಟ್ಟುತ್ತಾನೆ. ಅದು ಈ ಹಿಂದೂ ವೀರರಿಗೆ ಅನ್ಯಾಯವೆಂದಾಗಲಿ, ಅಮಾನವೀಯ ಎಂದಾಗಲಿ ಅನ್ನಿಸುವುದೇ ಇಲ್ಲ.

ಇನ್ನು ವಾಲ್ಮೀಕಿಯ ಜಾನಕಿ ಮತ್ತು ತಮ್ಮ ಸುತ್ತಲೂ ಇರುವ ಸೀತೆಯ ದುಃಖ ಅವರಿಗೆ ಅರ್ಥವಾಗುವುದಾದರೂ ಹೇಗೆ?


('ಸೀತಾ ಸಿಂಗ್ಸ್ ದ ಬ್ಲೂಸ್' ಸಿನಿಮಾವನ್ನು ಇಂಟರ್‌ನೆಟ್‌ನಲ್ಲಿ ಉಚಿತವಾಗಿ ನೋಡಬಹುದು) ■


ಲಸಂತ


ಪೊಲಿತ್ಕೋವಸ್ಕ

ಲಸಂತ ಬಿತ್ತಿದ ಬೀಜ ಸತ್ತಿಲ್ಲ!


ಶ್ರೀಲಂಕಾದ The Sunday Leader ಪತ್ರಿಕೆಯ ಸಂಪಾದಕ ಲಸಂತ ಮನಿಲ ವಿಕ್ರಮತುಂಘೆಗೆ ಮರಣೋತ್ತರವಾಗಿ ಯುನೆಸ್ಕೋ 2009ರ World Press Freedom ಪ್ರಶಸ್ತಿ ಕೊಟ್ಟು ಗೌರವಿಸಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ಈ ಪ್ರಶಸ್ತಿಯನ್ನು ಮರಣೋತ್ತರವಾಗಿ ಪಡೆದವರು ಕೇವಲ ಇಬ್ಬರು. ಮೊದಲನೆಯವರು, ರಶಿಯಾದ ಪತ್ರಕರ್ತೆ ಅನ್ನಾ ಪೊಲಿತ್ಕೋವಸ್ಕಯ ಮತ್ತು ಎರಡನೆಯವರೇ ಲಸಂತ ಮನಿಲ ವಿಕ್ರಮತುಂಘೆ.



ಇಬ್ಬರೂ ಸತ್ಯ, ನ್ಯಾಯ ಮತ್ತು ಸ್ವಾತಂತ್ರ್ಯಗಳಿಗಾಗಿ ಕೊನೆಯುಸಿರಿರುವ ತನಕವೂ ದುಡಿದವರು. ಅದೇ ಆಶಯಗಳಿಗಾಗಿ ಮಡಿದವರು. ರಾಜಕಾರಣಿಗಳು ಮತ್ತು ಪ್ರಭುತ್ವದ ಸೈನ್ಯದ ಪೈಶಾಚಿಕತೆಯನ್ನು ತಮ್ಮ ಹರಿತವಾದ ಬರಹಗಳಿಂದ ಬಯಲಿಗೆಳೆಯುತ್ತಿದ್ದರು ಎಂಬ ಕಾರಣಕ್ಕೆ ಪೊಲಿತ್ಕೋವಸ್ಕಯರನ್ನು 1996ರಲ್ಲಿ ಮಾಸ್ಕೋದಲ್ಲಿ ಕೊಲೆ ಮಾಡಲಾಯಿತು. ಈಗ ಅದೇ ಆಶಯಗಳಿಗಾಗಿ ದುಡಿಯುತ್ತಿದ್ದ ಲಸಂತ ವಿಕ್ರಮಸಿಂಘೆಯವರನ್ನೂ ಗುಂಡಿಟ್ಟು ಕೊಲ್ಲಲಾಗಿದೆ.


ಸುತ್ತ ಮುತ್ತ
▸ಕುಮಾರ್ ಬುರಡಿಕಟ್ಟಿ

ಲಸಂತ ವಿಕ್ರಮತುಂಘೆ ಯಾವುದೇ ಅಂಜಿಕೆ, ಅಳುಕು ಇಲ್ಲದೇ, ತಮ್ಮ ಜೀವಕ್ಕೆ ಎಂಥ ಬೆದರಿಕೆಯಿದ್ದರೂ ಸರ್ಕಾರ, ಮಿಲಿಟರಿ ಸಾಮಾನ್ಯ ಜನರ ಮೇಲೆ ನಡೆಸುತ್ತಿದ್ದ ದೌರ್ಜನ್ಯಗಳನ್ನು ಹಸಿಹಸಿಯಾಗಿ ಬರೆದು ಸರ್ಕಾರದ ಫ್ಯಾಸಿಸ್ಟ್ ಮುಖವನ್ನು ಲಂಕಾದ ಜನರಿಗೆ ಪರಿಚಯಿಸುತ್ತಿದ್ದರು. ಸಿಂಹಳೀಯ ಸರ್ಕಾರ ತಮಿಳರಿಗೆ ಮಾಡುತ್ತಿದ್ದ ಜನಾಂಗೀಯ ತಾರತಮ್ಯವನ್ನು ಅಂಕಿ ಅಂಶಗಳ ಸಮೇತವಾಗಿ ಬಯಲಿಗೆಳೆದು ಬರೆಯುತ್ತಿದ್ದರು. ಶ್ರೀಲಂಕಾ ಸೇನೆ ಎಲ್‌ಟಿಟಿಇಯನ್ನು ಹೊಸಕಿ ಹಾಕುವ ಭರದಲ್ಲಿ ತಮಿಳರ ಮೇಲೆ ನಡೆಸುತ್ತಿದ್ದ ದೌರ್ಜನ್ಯಗಳ, ಮಾರಣಹೋಮಗಳ ವಸ್ತುನಿಷ್ಠ ವರದಿಗಳನ್ನು ಪ್ರಕಟಿಸಿ ಲಂಕಾ ಸೈನ್ಯದ ರಕ್ತದಾಹವನ್ನು ಅಂತಾರಾಷ್ಟ್ರೀಯ ಸಮುದಾಯದೆದುರು ಬಿಚ್ಚಿಡುತ್ತಿದ್ದರು. ಇದಕ್ಕಾಗಿ ಹಲವು ಬಾರಿ ಅವರಿಗೆ ಪ್ರಾಣಬೆದರಿಕೆಗಳೂ ಬಂದಿದ್ದುಂಟು. ಅದನ್ನವರು "ಸುಮ್ಮನೇ ಹೆದರಿಸುವುದಕ್ಕೆ ಹೀಗೆ ಮಾಡುತ್ತಿದ್ದಾರೆ" ಎಂದು ಪರಿಗಣಿಸಿರಲಿಲ್ಲ. ಏಕೆಂದರೆ, ಅಷ್ಟು ಹೊತ್ತಿಗಾಗಲೇ ನ್ಯಾಯ, ಸತ್ಯ, ಪ್ರಜಾತಂತ್ರಗಳ, ಸ್ವಾತಂತ್ರ್ಯಗಳ ಪರವಾಗಿ ತಮ್ಮ ಲೇಖನಿಗಳನ್ನು ಬಳಸಿದ ಹತ್ತಾರು ಪತ್ರಕರ್ತರನ್ನು ಸರ್ಕಾರ ಕೊಂದು ಹಾಕಿತ್ತು. ಆದ್ದರಿಂದ ತಾನೇ ಮುಂದಿನ ಬಲಿ ಎಂಬುದು ಲಸಂತ ವಿಕ್ರಮತುಂಘೆಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದಲೇ ಅವರು ತಮ್ಮ ಸಾವಿನ ನಂತರ ಪ್ರಕಟಗೊಳ್ಳಬೇಕಾದ ಸಂಪಾದಕೀಯವನ್ನೂ ಮೊದಲೇ ಬರೆದಿದ್ದರು! ಅದರಲ್ಲಿ "ನನ್ನನ್ನು ಕೊಲ್ಲುತ್ತಾರೆಂಬುದು ಬಹಳ ಹಿಂದೆಯೇ ಬರೆದಿಟ್ಟ ಸತ್ಯ. ಯಾರು ಕೊಲ್ಲುತ್ತಾರೆಂಬುದೂ ಗೊತ್ತಿರುವ ಸತ್ಯ. ಗೊತ್ತಾಗಬೇಕಿರುವುದು ಯಾವಾಗ ಎಂಬುದಷ್ಟೆ" ಎಂದು ಬರೆದಿದ್ದರು. ಅವರ ನಿರೀಕ್ಷೆ ನಿಜವಾಗಿತ್ತು.




ಇದೇ 2009ರ ಜನವರಿ 8ರಂದು ಲಸಂತ ವಿಕ್ರಮತುಂಘೆ ಎಂದಿನಂತೆ ತಮ್ಮ ಆಫೀಸಿಗೆ ಹೋಗುತ್ತಿದ್ದಾಗ ಶ್ರೀಲಂಕಾದ ಅಧ್ಯಕ್ಷ ರಾಜಪಕ್ಸೆಯ ಗೂಂಡಾಗಳೇ ಅವರನ್ನು ಗುಂಡಿಕ್ಕಿ ಕೊಂದು ಹಾಕಿದರು. ರಾಜಪಕ್ಸೆ ಲಸಂತ ವಿಕ್ರಮತುಂಘೆಯ ಬಹುಕಾಲದ ಸ್ನೇಹಿತರಾಗಿದ್ದರು ಎಂಬುದನ್ನಿಲ್ಲಿ ದಾಖಲಿಸಲೇಬೇಕು.

ವಿಕ್ರಮತುಂಘೆಯನ್ನೇನೋ ಕೊಂದು ಹಾಕಿದರು. ಆದರೆ, ಅವರು ಬಿತ್ತಿದ ಬೀಜಗಳನ್ನು ಕೊಲ್ಲಲಾಗಲಿಲ್ಲ. ಈಗ ಲಸಂತ ಅವರ ಪತ್ನಿ ಸೋನಾಲಿ ವಿಕ್ರಮತುಂಗೆ ಮತ್ತು The Sunday Leader ಪತ್ರಿಕೆ ಇಬ್ಬರೂ ಲಸಂತ ವಿಕ್ರಮತುಂಘೆ ನಡೆದ ದಾರಿಯಲ್ಲಿ ದೃಢವಾಗಿ ಮುನ್ನಡೆಯುತ್ತಿರುವುದೇ ಅದಕ್ಕೆ ಸಾಕ್ಷಿ. ಮುಂದಿನ ಬಲಿ ತಾವೇ ಎಂಬುದು ಅವರಿಗೂ ಗೊತ್ತಿದೆ. ಅವರನ್ನು ಯಾರು ಕೊಲ್ಲುತ್ತಾರೆಂಬುದೂ ಗೊತ್ತಿದೆ. ಆದರೆ, ಯಾವಾಗ ಎಂಬುದಷ್ಟೇ ಗೊತ್ತಿಲ್ಲ. ಬಂದೂಕಿನ ನಳಿಗೆಯಿಂದ ಸ್ವಾತಂತ್ರ್ಯಾಕಾಂಕ್ಷೆಯನ್ನು ಸದೆಬಡಿಯಲಾಗುವುದಿಲ್ಲ ಎಂಬ ಸಾರ್ವಕಾಲಿಕ ಚಾರಿತ್ರಿಕ ಸತ್ಯ ಮಾತ್ರ ಫ್ಯಾಸಿಸ್ಟ್ ಸರ್ಕಾರಗಳಿಗೆ ಅರ್ಥವಾಗಿಲ್ಲ. ■

ಕೋರ್ಟು ಕಾನೂನನ್ನು ಎತ್ತಿಹಿಡಿಯಿತು, ನ್ಯಾಯವನ್ನಲ್ಲ!

ಭಾರತದ ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ತೀರ್ಪೊಂದನ್ನು ನೀಡಿದೆ. 'ಕಾನೂನಿಗೆ ಕಣ್ಣಿಲ್ಲ' ಎಂಬ ಮಾತನ್ನು ಈ ತೀರ್ಪು ಮತ್ತೊಮ್ಮೆ ರುಜುವಾತು ಮಾಡಿದೆ. ಅದನ್ನು ನೋಡಿದರೆ ಎಂಥವರಿಗೂ ನ್ಯಾಯಾಲಯದ ಬಗ್ಗೆ ಆಕ್ರೋಶ ಬಾರದಿರದು. ಹಾಗೆಯೇ ನ್ಯಾಯವನ್ನರಸಿ ನ್ಯಾಯಾಲಯದ ಬಾಗಿಲು ತಟ್ಟಿದವರಿಗೆ ಘೋರ ಅನ್ಯಾಯವಾದದ್ದನ್ನು ಕಂಡು ಮರುಕ ಹುಟ್ಟದಿರದು.



ಅದು ಉತ್ತರಾಧಿಕಾರ ಕಾಯಿದೆಗೆ ಸಂಬಂಧಪಟ್ಟ ಕೇಸು. ನಾರಾಯಣಿ ಎಂಬ ಮಹಿಳೆಯೊಬ್ಬಳು 1955ರಲ್ಲಿ ದಿಂಡ್ಯಾಲ್ ಶರ್ಮ ಎಂಬುವವನನ್ನು ಮದುವೆಯಾಗಿದ್ದಳು. ಆಕೆಯ ದುರಂತ ಏನೆಂದರೆ, ಮದುವೆಯಾದ ಮೂರೇ ತಿಂಗಳಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯಾಗಿಬಿಟ್ಟಳು. ತನ್ನ ಬದುಕಿನ ಬಗ್ಗೆ, ಭವಿಷ್ಯದ ಬಗ್ಗೆ ಆಕೆ ಕಟ್ಟಿಕೊಂಡ ಸುಂದರ ಕನಸುಗಳು, ವೈವಿಧ್ಯಮಯ ಆಶೆಗಳು ಹೀಗೆ ಮೂರೇ ತಿಂಗಳಲ್ಲಿ ಮಣ್ಣುಪಾಲಾಗಿ ಹೋದವು. ಬರಸಿಡಿಲಿನಂತೆ ಬಂದೆರಗಿದ ಆಘಾತವನ್ನ ಅರಗಿಸಿಕೊಂಡು ಸಹಜ ಜೀವನಕ್ಕೆ ಮರಳುವುದಕ್ಕೆ ಆಕೆಗೆ ಬಹಳಷ್ಟು ಸಮಯ ಬೇಕಿತ್ತು. ಇಂಥ ಸಂದರ್ಭದಲ್ಲಿ ಯಾವುದೇ ಹೆಣ್ಣಿಗೆ ಅತ್ಯವಶ್ಯವಾಗಿ ಬೇಕಾಗಿರುವುದು ಕೇವಲ ಕನಿಕರವಲ್ಲ, ಅನುಕಂಪವಲ್ಲ, ಬದಲಿಗೆ ಬದುಕಿನ ಬಗ್ಗೆ ಭವಿಷ್ಯದ ಬಗ್ಗೆ ಭರವಸೆ; ಅದನ್ನು ಆಗು ಮಾಡುವುದಕ್ಕೆ ಆತ್ಮಸ್ಥೈರ್ಯ.

ನಾರಾಯಣಿಯ ಅತ್ತೆ-ಮಾವಂದಿರರಿಗೆ ಒಂದಿಷ್ಟಾದರೂ ಕನಿಕರವಿದ್ದರೆ, ಕಿಂಚಿತ್ತಾದರೂ ಮಾನವೀಯತೆಯಿದ್ದಿದ್ದರೆ ಆಕೆಯಲ್ಲಿ ಬದುಕಿನ ಬಗ್ಗೆ ಭರವಸೆ ಮೂಡಿಸುತ್ತಿದ್ದರು; ಭವಿಷ್ಯವನ್ನು ಎದುರಿಸುವ ಆತ್ಮಸ್ಥೈರ್ಯ ತುಂಬುತ್ತಿದ್ದರು. ಆ ಮೂಲಕ ಮಾನಸಿಕ ಖಿನ್ನತೆಯೆಡೆಗೆ ಜಾರುತ್ತಿದ್ದ ಆಕೆಯನ್ನು ಹೊರತರುತ್ತಿದ್ದರು. ಆದರೆ, ಅವರು ಮಾಡಿದ್ದೇನು ಗೊತ್ತೆ? ಮಗ ಸತ್ತ ಮೂರೇ ದಿನಕ್ಕೆ ನಾರಾಯಣಿಯನ್ನು ಮನೆಯಿಂದ ಹೊರದಬ್ಬುವ ಮೂಲಕ ಈಗಾಗಲೇ ಆಕೆಯ ಮನಸ್ಸಿನ ಮೇಲಾಗಿದ್ದ ಗಾಯದ ಮೇಲೆ ಬರೆ ಎಳೆದುಬಿಟ್ಟರು. ಅನಿವಾರ್ಯವಾಗಿ ಆಕೆ ಭಾರದ ಹೃದಯ ಹೊತ್ತುಕೊಂಡು ತವರುಮನೆಗೆ ಮರಳಿ ತನ್ನ ತಂದೆ-ತಾಯಿಗಳ ಆಶ್ರಯ ಪಡೆಯಬೇಕಾಯಿತು.

ನಾರಾಯಣಿ ಬದುಕೆಂಬ ಸವಾಲನ್ನು ಸ್ವೀಕರಿಸಿದಳು. ನಡೆದುಹೋದ ದುರಂತದ ಬಗ್ಗೆಯೇ ಚಿಂತಿಸುತ್ತಾ ಕೊರಗಿ, ಕೊರಗಿ ಸಾಯುವುದಕ್ಕೆ ಬದಲು ಹೊಸ ಬದುಕನ್ನು ಕಟ್ಟಿಕೊಳ್ಳಲು ನಿರ್ಧರಿಸಿದಳು. ಬದುಕು-ಭವಿಷ್ಯಗಳ ಬಗ್ಗೆ ಮತ್ತೆ ಹೊಸ ಕನಸುಗಳನ್ನು ಕಟ್ಟಿಕೊಂಡು ಅವುಗಳನ್ನು ಸಾಕಾರಗೊಳಿಸುವುದಕ್ಕೆ ಪಣ ತೊಟ್ಟಳು. ಆಕೆಯಲ್ಲಿ ಮೊಳಕೆಯೊಡೆದ ಈ ಚೈತನ್ಯ ಸಹಜವಾಗಿ ಆಕೆಯ ತಂದೆ-ತಾಯಿಗಳ ಮೊಗದಲ್ಲಿ ಮಂದಹಾಸ ಮೂಡಿಸಿತು. ಅವರೂ ಆಕೆಯ ಬೆನ್ನಿಗೆ ನಿಂತರು. ನಾರಾಯಣಿ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿ ಆನಂತರ ಉದ್ಯೋಗಕ್ಕೆ ಸೇರಿಕೊಂಡು ದುಡಿಯಲಾರಂಭಿಸಿದಳು. ತನ್ನ ದುಡಿಮೆಯಲ್ಲಿ ಜೀವನ ಸಾಗಿಸಿದ್ದೂ ಅಲ್ಲದೇ ಒಂದಿಷ್ಟು ಹಣವನ್ನು ಉಳಿಸಿ ಬ್ಯಾಂಕ್‌ನಲ್ಲಿ ಠೇವಣಿಯಿಟ್ಟಳು. ಜೊತೆಗೆ ಕೆಲಸ ಮಾಡುತ್ತಿದ್ದ ಕಂಪನಿಯಲ್ಲೂ ಒಂದಿಷ್ಟು ಭವಿಷ್ಯ ನಿಧಿ ಸಂಗ್ರಹವಾಯಿತು.

ಕಾಲಾಂತರದಲ್ಲಿ ಮಗಳು ಹೊಸ ಬದುಕನ್ನು ಕಟ್ಟಿಕೊಂಡ ಸಂತಸವನ್ನು ಅನುಭವಿಸುತ್ತಲೇ ಆಕೆಯ ತಂದೆತಾಯಿಗಳು ತೀರಿಕೊಂಡರು. ನಂತರ 1996 ಜುಲೈ 11ರಂದು ನಾರಾಯಣಿಯೂ ಸತ್ತುಹೋದಳು. ಸಾಯುವ ಮುನ್ನ ಬ್ಯಾಂಕ್ ಖಾತೆಯಲ್ಲಿದ್ದ ಹಣ, ಕಂಪನಿಯಿಂದ ಬರಬೇಕಾದ ಭವಿಷ್ಯ ನಿಧಿ ಮತ್ತು ಆಕೆಯ ಇನ್ನಿತರ ಆಸ್ತಿಪಾಸ್ತಿಗಳು ಯಾರಿಗೆ ಸೇರಬೇಕೆಂಬುದರ ಬಗ್ಗೆ ಆಕೆ ವಿಲ್ ಬರೆದಿಟ್ಟಿರಲಿಲ್ಲ.


ಗಂಡ ಸತ್ತ ಮೂರೇ ದಿನಕ್ಕೆ ನಾರಾಯಣಿಯನ್ನು ಮನೆಯಿಂದ ಹೊರದಬ್ಬಿದ ಆಕೆಯ ಅತ್ತೆ ಮಾವಂದಿರರ ಸಂಬಂಧಿಕರಿಗೆ ಆಕೆಯ ನೆನಪಾಗಿದ್ದು ಆಕೆ ಸತ್ತ ಮೇಲೆಯೇ. ಅಲ್ಲಿಯತನಕ ಆಕೆ ಎಲ್ಲಿದ್ದಾಳೆ, ಏನು ಮಾಡುತ್ತಿದ್ದಾಳೆ ಎಂದು ಒಮ್ಮೆಯೂ ತಲೆಕೆಡಿಸಿಕೊಂಡಿರದಿದ್ದ ಅವರು ಯಾವುದೇ ನಾಚಿಕೆಯಿಲ್ಲದೇ ಆಕೆ ಕಷ್ಟಪಟ್ಟು ದುಡಿದು ಕೂಡಿಟ್ಟಿದ್ದ ದುಡ್ಡು ತಮಗೇ ಸೇರಬೇಕೆಂದು ಹಠ ಹಿಡಿದರು. ಆಕೆಯ ನಾದಿನಿ (ದಿಂಡ್ಯಾಲ್ ಶರ್ಮಾ ಅವರ ಸಹೋದರಿ) ಆ ಹಣ ತನಗೇ ಸೇರಬೇಕೆಂದು ನ್ಯಾಯಾಲಯದ ಮೊರೆ ಹೋದಳು. ಪ್ರಕರಣ ಸುಪ್ರೀಮ್ ಕೋರ್ಟ್‌ತನಕ ಹೋಯಿತು. ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯ ಇದೇ ಮೇ ತಿಂಗಳ ಮೊದಲ ವಾರದಲ್ಲಿ ನಾರಾಯಣಿಯ ಆಸ್ತಿ, ದುಡ್ಡು ಎಲ್ಲವೂ ಆಕೆಯ ಅತ್ತೆ-ಮಾವಂದಿರರ ಸಂಬಂಧಿಕರಿಗೆ ಸೇರಬೇಕೆ

ಒಬಾಮಾ ಚಾವೇಜ್ ಭಾಯಿ ಭಾಯಿ

ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಮತ್ತೊಂದು ಮಹತ್ವಪೂರ್ಣ ಹೆಜ್ಜೆಯನ್ನಿಟ್ಟಿದ್ದಾರೆ. ಅಮೆರಿಕ ದೇಶವು ಲ್ಯಾಟಿನ್ ಅಮೆರಿಕನ್ ದೇಶಗಳೊಂದಿಗೆ ದಶಕಗಳಿಂದ ಸಾಧಿಸಿಕೊಂಡು ಬಂದಿದ್ದ ವೈರತ್ವ ನೀತಿಯನ್ನು ಕೊನೆಗಾಣಿಸಿ ಆ ದೇಶಗಳೊಂದಿಗೆ ಸ್ನೇಹಹಸ್ತ ಚಾಚಿದ್ದಾರೆ. ಅದಕ್ಕೆ ಕಳೆದ ಏಪ್ರಿಲ್ ಮೂರನೇ ವಾರದಲ್ಲಿ ಕರೀಬಿಯನ್ ದ್ವೀಪ ಸಮುಚ್ಚಯದಲ್ಲಿರುವ ತ್ರಿನಿಡಾಡ್‌ನ ಪೋರ್ಟ್ ಆಫ್ ಸ್ಪೇನ್‌ನಲ್ಲಿ ನಡೆದ ಶೃಂಗಸಭೆ ಸಾಕ್ಷಿಯಾಗಿದೆ. ಆಸಕ್ತಿದಾಯಕ ವಿಚಾರ ಎಂದರೆ 1961ರಲ್ಲಿ ಯಾವ ದಿನದಂದು ಇದೇ ಅಮೆರಿಕ ಕ್ಯೂಬಾದ ಮೇಲೆ ಅನ್ಯಾಯವಾಗಿ ಯುದ್ಧ ಸಾರಿತ್ತೋ ಅದೇ ದಿನ ಈ ಶೃಂಗಸಭೆ ಏರ್ಪಾಟಾಗಿತ್ತು! ಸತತವಾಗಿ ಐವತ್ತು ವರ್ಷಗಳ ತನಕ ಹಗೆತನ ಸಾಧಿಸಿದ ಅಮೆರಿಕ ಕೊನೆಗೂ ಒಬಾಮಾ ನೇತೃತ್ವದಲ್ಲಿ ಸ್ನೇಹಹಸ್ತ ಚಾಚಿದ್ದು ಸಹಜವಾಗಿ ಇಡೀ ಲ್ಯಾಟಿನ್ ಅಮೆರಿಕನ್ ಜನತೆಯಲ್ಲಿ ಖುಷಿ ತಂದಿದೆ. ಒಬಾಮಾ ಅವರ ಬಗ್ಗೆ ವಿಶೇಷ ನಿರೀಕ್ಷೆಗಳನ್ನು ಹುಟ್ಟಿಸಿದೆ.



ಒಬಾಮಾ-ಚಾವೇಜ್

ಅಮೆರಿಕದ ಹಿಂದಿನ ಅಧ್ಯಕ್ಷರಾಗಿದ್ದ ಬಿಲ್ ಕ್ಲಿಂಟನ್ ಕಾಲದಲ್ಲಿ ಈ ಶೃಂಗಸಭೆಯನ್ನು ನಡೆಸುವ ಪರಿಪಾಠ ಪ್ರಾರಂಭವಾಯಿತು. ಅದರ ಹಿಂದಿದ್ದ ಪ್ರಮುಖ ಉದ್ದೇಶ ಎಂದರೆ ಲ್ಯಾಟಿನ್ ಅಮೆರಿಕದಲ್ಲಿ ಜಾಗತೀಕರಣ ನೀತಿಗಳನ್ನು ಜಾರಿಮಾಡುವುದಕ್ಕೆ ಆ ದೇಶಗಳನ್ನು ಒತ್ತಾಯಿಸುವುದೇ ಆಗಿತ್ತು. ಹೀಗೆ ಅಮೆರಿಕದ ಲೂಟಿಯನ್ನು ಮುಂದುವರೆಸುವುದಕ್ಕಾಗಿ ಪ್ರಾರಂಭಗೊಂಡ ಶೃಂಗಸಭೆಯೇ ಇಂದು ಅವೆರಡೂ ಶಕ್ತಿಗಳ ನಡುವಿನ ಸ್ನೇಹ ಸೇತುವೆಯಾಗುತ್ತಿರುವುದು ಇನ್ನೊಂದು ವಿಶೇಷ.



ಎಲ್ಲರಿಗೂ ಗೊತ್ತಿರುವಂತೆ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳು ನಮ್ಮಲ್ಲಿ ತೊಂಭತ್ತರ ದಶಕದಲ್ಲಿ ತಂದ ಜಾಗತೀಕರಣ ನೀತಿಗಳನ್ನು ಲ್ಯಾಟಿನ್ ಅಮೆರಿಕದಲ್ಲಿ ಎಪ್ಪತ್ತು-ಎಂಭತ್ತರ ದಶಕದಲ್ಲಿಯೇ ಜಾರಿ ಮಾಡಿದ್ದರು. ಪರಿಣಾಮವಾಗಿ, ವೆನುಜುಯೆಲಾವನ್ನು ಒಳಗೊಂಡಂತೆ ಇಡೀ ಲ್ಯಾಟಿನ್ ಅಮೆರಿಕ ಬಡತನ, ನಿರುದ್ಯೋಗ, ಅನಕ್ಷರತೆ, ದಾರಿದ್ರ್ಯಗಳಿಂದ ಬಡಕಲಾಗಿ ಹೋಗಿತ್ತು. ಅದೇ ಸಮಯದಲ್ಲಿ ಜಾಗತೀಕರಣವನ್ನು ಈ ದೇಶಗಳ ಮೇಲೆ ಒತ್ತಾಯಪೂರ್ವಕವಾಗಿ ಹೇರಿದ ಅಮೆರಿಕ ಮತ್ತು ಯೂರೋಪಿಯನ್ ಸಾಮ್ರಾಜ್ಯಶಾಹಿ ದೇಶಗಳು ಲ್ಯಾಟಿನ್ ಅಮೆರಿಕವನ್ನು ಲೂಟಿ ಹೊಡೆದು ಬಲಿಷ್ಠವಾಗಿ ಬೆಳೆದವು.

ಅಮೆರಿಕದಂಥ ದೈತ್ಯ ದೇಶಕ್ಕೆ ಸೆಡ್ಡು ಹೊಡೆದು ನಿಂತ ಲ್ಯಾಟಿನ್ ಅಮೆರಿಕದ ನಾಯಕರಲ್ಲಿ ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೋ ಮತ್ತು ವೆನುಜುಯೆಲಾದ ಚಾವೇಜ್ ಪ್ರಮುಖರು. ಈ ಇಬ್ಬರು ನಾಯಕರನ್ನು ಕೊಲ್ಲುವುದಕ್ಕಾಗಿ ಇದೇ ಅಮೆರಿಕ ನಡೆಸಿದ ತಂತ್ರ-ಕುತಂತ್ರಗಳು ಒಂದೇ ಎರಡೆ? ಕ್ಯಾಸ್ಟ್ರೋ ಅವರನ್ನು ಕೊಲ್ಲುವುದಕ್ಕಾಗಿ ಅಮೆರಿಕದ ಗೂಢಚರ್ಯ ಸಂಸ್ಥೆ ಸಿಐಎ ದಶಕಗಳಿಂದ ಪ್ರಯತ್ನಿಸಿತು. ಚಾವೇಜ್ ಅವರನ್ನು ಮಿಲಿಟರಿ ಕೂಪ್ ಮೂಲಕ ಪದಚ್ಯುತಗೊಳಿಸಿ ನಂತರ ಕೊಂದು ಹಾಕುವುದಕ್ಕೆ ಇದೇ ಅಮೆರಿಕ ಪ್ರಯತ್ನಿಸಿತ್ತು. ಕ್ಯೂಬಾದಂತಹ ದೇಶಗಳ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರಿ ಅವಶ್ಯ ವಸ್ತುಗಳು ಅಲ್ಲಿಗೆ ಸರಬರಾಜಾಗದಂತೆ ನೋಡಿಕೊಂಡಿತು. ಆದರೆ ಅದೆಲ್ಲವನ್ನೂ ಕ್ಯೂಬಾದ ಜನ ಮೆಟ್ಟಿ ನಿಂತರು. ಲ್ಯಾಟಿನ್ ಅಮೆರಿಕದ ಜನ ಅವರ ಬೆನ್ನಿಗಿದ್ದರು.


ಫಿದೆಲ್ ಕ್ಯಾಸ್ಟ್ರೋ



...ಹೊರತು ಆಕೆಯ ತಂದೆ-ತಾಯಿಗಳ ಸಂಬಂಧಿಕರಿಗಲ್ಲ ...ದು ತೀರ್ಪಿತ್ತಿದೆ!

ವಾಸ್ತವದಲ್ಲಿ ನ್ಯಾಯಾಲಯ ಇಂಥ ಅಮಾನವೀಯ ...ತ್ತು ಅನ್ಯಾಯಯುತ ತೀರ್ಪನ್ನು ಒಲ್ಲದ ಮನಸ್ಸಿ...ನದಲೇ ನೀಡಿತು. ಕಾನೂನೆಂಬ ಹಗ್ಗ ನ್ಯಾಯಾಲಯದ ...ಗನ್ನು ಕಟ್ಟಿರುವುದರ ಬಗೆಗಿನ ಆಕ್ರೋಶ ತೀರ್ಪಿನುದ್ದಕ್ಕೂ ...ಣುತ್ತಿತ್ತು. "ಇದೊಂದು ಕಠಿಣ ಪ್ರಕರಣ. ನಾರಾಯಣಿ ...ಮಕಿರುವ ತನ್ನ ಅತ್ತೆ-ಮಾವರ ಬಳಿ ಹೋಗಲೇ ...ಲ್ಲ, ಅವರಿಂದ ಯಾವುದೇ ರೀತಿಯ ಸಹಾಯ, ...ಪಕಾರಗಳನ್ನೂ ಪಡೆಯಲಿಲ್ಲ, ಆಕೆಗೆ ಸಹಾಯ ಮಾಡಿದ್ದು ...ನ್ನಗೆ ನಿಂತಿದ್ದು ಆಕೆಯ ತಂದೆತಾಯಿಗಳೇ. ಆದರೂ ...ಬದೂ ಉತ್ತರಾಧಿಕಾರ ಕಾಯಿದೆ ಸೆಕ್ಷನ್ 15 (1)ರ ...ಕಾರ ಆಕೆಯ ಆಸ್ತಿಯೆಲ್ಲವೂ ಆಕೆಯ ಅತ್ತೆ-ಮಾವಂದಿರ ...ಬಂಧಿಕರಿಗೆ ಸೇರಬೇಕೇ ಹೊರತು, ತಂದೆತಾಯಿ ...ಗಲ್ಲ, ನ್ಯಾಯಾಲಯ ಕಾನೂನಿನಪ್ರಕಾರ ತೀರ್ಪು ...ಡಬೇಕೇ ಹೊರತು ಭಾವನಾತ್ಮಕವಾಗಿ ತೀರ್ಪು ...ಡಲು ಬರುವುದಿಲ್ಲ" ಎಂದು ಎಸ್.ಬಿ.ಸಿನ್ಹಾ ಮತ್ತು ...ಮುಕುಂದಕಮ್ ಶರ್ಮಾ ಅವರನ್ನೊಳಗೊಂಡ ಪೀಠ ...ರ್ಪಿನಲ್ಲಿ ಹೇಳಿದೆ.

ಮೇಲ್ನೋಟಕ್ಕೇ ಕಾಣುವಂತೆ ನ್ಯಾಯಾಲಯ ...ನೂನನ್ನು ಎತ್ತಿಹಿಡಿಯಿತೇ ಹೊರತು ನ್ಯಾಯವನ್ನಲ್ಲ. ...ಯದ ಬದಲು ಅನ್ಯಾಯವನ್ನು ಕೊಟ್ಟಿತು. ನಮ್ಮ ...ರ್ಪಗಳಿಗೆ ಎಲ್ಲದಕ್ಕೂ ಸಮಯವಿರುತ್ತದೆ. ಕಾಲಕಾಲಕ್ಕೆ ...ಂತೆ ಇಂಥ ಕಾನೂನುಗಳನ್ನು ಮಾರ್ಪಡಿಸುವುದಕ್ಕೆ ...ಮಯವಿರುವುದಿಲ್ಲ.

ಒಬಾಮಾ ಅವರ ಇಚ್ಛೆಯನ್ನು ಕ್ಯೂಬಾ ಕ್ರಾಂತಿಯ ...ಯಕಾರ ಫಿಡೆಲ್ ಕ್ಯಾಸ್ಟ್ರೋ ಮೆಚ್ಚಿಕೊಂಡಿದ್ದಾರಾದರೂ ...ಬಾದ ಮೇಲೆ ಅಮೆರಿಕ ಹಾಕಿರುವ ಆರ್ಥಿಕ ...ಬಂಧನದ ಬಗ್ಗೆ ಒಂದು ಮಾತನ್ನೂ ಆಡದಿರುವ ...ಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕ್ಯೂಬಾ ದೇಶಕ್ಕೆ ...ಲಿನ ಉತ್ಪನ್ನಗಳನ್ನು ರಫ್ತು ಮಾಡಿದ ಕಾರಣಕ್ಕೆ ...ಚ್ ಕಂಪನಿಯೊಂದಕ್ಕೆ ಅಮೆರಿಕ ದಂಡ ವಿಧಿಸಿತ್ತು. ...ದು ಎಂದೋ ನಡೆದ ಘಟನೆಯೇನಲ್ಲ, ಒಬಾಮಾ ...ವರು ಅಧ್ಯಕ್ಷರಾಗಿ ಅಧಿಕಾರಕ್ಕೇರಿದ ಮೇಲೆ ನಡೆದ ...ಟನೆ. ಇಂತಹ ಅಸಮಾಧಾನಗಳಿವೆಯಾದರೂ ...ಟಿನ್ ಅಮೆರಿಕವನ್ನು ಸುಲಿದು ಹಾಕಿದ ಬಿಲ್ ...ಂಟನ್ ಮತ್ತು ಜಾರ್ಜ್ ಡಬ್ಲ್ಯೂ ಬುಷ್‌ರಂಥ ...ರ ಅಧ್ಯಕ್ಷರೆದುರು ಒಬಾಮಾ ಪ್ರಾಮಾಣಿಕವಾಗಿಯೇ ...ಣುತ್ತಿದ್ದಾರೆ.

ಮೊನ್ನಿನ ಶೃಂಗಸಭೆ ಮುಕ್ತಾಯವಾದ ಮೇಲೆ ...ಜುಯೆಲಾದ ಅಧ್ಯಕ್ಷ ಹ್ಯೂಗೋ ಚಾವೇಜ್ ...ದೋರ್ ಗಲಿಯಾನೋ ಅವರು ಬರೆದಿರುವ **...pen Veins of Latin America: Five ...enturies of the Pillage of a ...ontinent** ಎಂಬ ಪುಸ್ತಕವನ್ನು ಒಬಾಮಾ ...ವರಿಗೆ ಉಡುಗೊರೆಯಾಗಿ ಕೊಟ್ಟಿದ್ದಾರೆ. ಸ್ಪೇನ್‌ನಿಂದ ...ಡು ಅಮೆರಿಕದ ತನಕ ಎಲ್ಲಾ ಬಲಿಷ್ಠ ರಾಷ್ಟ್ರಗಳು ...ಮಾನಗಳಿಂದ ಲ್ಯಾಟಿನ್ ಅಮೆರಿಕವನ್ನು ಹೇಗೆ ...ಟ ಹೊಡೆದಿದ್ದಾರೆ ಎಂಬುದನ್ನು ಗಲಿಯಾನೋ ...ವರು ಮನಮುಟ್ಟುವಂತೆ ಈ ಪುಸ್ತಕದಲ್ಲಿ ...ದಿದ್ದಾರೆ. ಮಾತ್ರವಲ್ಲ, ನಿರಂತರವಾಗಿ ಅದಕ್ಕೆ ಹೊಸ ...ಸ ವಿಚಾರಗಳನ್ನು ಸೇರಿಸುತ್ತಲೇ ಇದ್ದಾರೆ.


1990ರ ದಶಕದಲ್ಲಿ ಪ್ರಕಟವಾದ ಈ ಪುಸ್ತಕ ... ಲ್ಯಾಟಿನ್ ಅಮೆರಿಕದಾದ್ಯಂತ ಎಷ್ಟೊಂದು ...ಪ್ರಿಯವಾಗಿದೆಯೆಂದರೆ ಇಡೀ ಉಪಖಂಡದ ...ವುದೇ ಮೂಲೆಗೆ ಹೋದರೂ ನಿಮಗೆ ಆ ... ಸಿಗುತ್ತದೆ. ಅದು ವಿಶ್ವಪ್ರಸಿದ್ಧ ಪುಸ್ತಕವೂ ...ದೆ. ಒಬಾಮಾ ಅದನ್ನೊಮ್ಮೆ ಓದಲಿ ಎಂಬುದು ...ಟಿನ್ ಅಮೆರಿಕದ ಜನರ ಬಯಕೆ. ಜನ ತಮ್ಮ ...ಲಿಟ್ಟಿರುವ ಭರವಸೆ ಮತ್ತು ನಿರೀಕ್ಷೆಗಳನ್ನು ...ಬಾಮಾ ಹುಸಿ ಮಾಡದಿರಲಿ. ■

ಕಲ್ಕುಳಿ ವಿಠಲ ಹೆಗ್ಡೆಯವರ ಅಜ್ಞಾತವಾಸ

ಮಲೆನಾಡು ಪರಿಸರದಲ್ಲಿ ಅಕ್ರಮ ಗಣಿಗಾರಿಕೆ, ಕುದುರೆಮುಖದ ಅದಿರು ಅಗೆತ ಹಾಗೂ ಮಲೆನಾಡಿನ ಆದಿವಾಸಿಗಳನ್ನು ಅವರ ನೆಲೆಗಳಿಂದ ಎತ್ತಂಗಡಿ ಮಾಡುವ ಅರಣ್ಯ ಕಾಯ್ದೆಗಳ ವಿರುದ್ಧ ವಿಠಲ ಹೆಗ್ಡೆ ಹಲವು ವರ್ಷಗಳಿಂದ ಹೋರಾಟಗಳನ್ನು ನಡೆಸಿದ್ದಾರೆ. ಆದ್ದರಿಂದ ಈಗ ಸರ್ಕಾರದಿಂದ ಮತ್ತು ಪೊಲೀಸರಿಂದ ನಿರಂತರವಾದ ಕಿರುಕುಳ ಅನುಭವಿಸುತ್ತಿದ್ದಾರೆ. ಮಾನವ ಹಕ್ಕುಗಳ ಹೋರಾಟಗಾರರನ್ನು ಹೀಗೆ ವಿನಾಕಾರಣ ದಂಡಿಸುವ ಮೂಲಕ ಈ ವ್ಯವಸ್ಥೆ ಪ್ರಜೆಗಳಿಗೆ ಪ್ರಜಾಸತ್ತಾತ್ಮಕ ಚಳವಳಿಗಳಿಂದ ದೂರವಿರಲು ಎಚ್ಚರಿಕೆ ಕೊಡುತ್ತಿದೆ.

ಇಷ್ಟು ನೆನಪಿರಲಿ
ಯಾರಿಗೂ ನಿನ್ನ ಸುಳಿಹು ಹತ್ತದಿರಲಿ
ಏನಾರು ಹೇಳಬೇಕಾಗಿ ಬಂದರೆ ಅದನ್ನ ಎರಡು ಸಾರಿ
ಹೇಳಬೇಡ
ನಿನ್ನ ಥರಾನೇ ಯೋಚಿಸೋರು ಸಿಕ್ಕರೆ
ನನಗದೇನೂ ಗೊತ್ತಿಲ್ಲ ಎಂದು ಬಿಡು
ತನ್ನ ಸಹಿಯನ್ನೇ ಹಾಕದವನನ್ನು
ತನ್ನ ಚಿತ್ರವೇ ಇಲ್ಲದವನನ್ನು
ಯಾರೂ ಅಲ್ಲದವನನ್ನು
ಹೇಗೆ ಹಿಡಿದಾರು ಹೇಳು
ನಿನ್ನ ಗುರುತುಗಳನ್ನೆಲ್ಲ ಒರೆಸಿ ಹಾಕು
ಇರಲೇ ಇಲ್ಲ ಎನ್ನುವ ಹಾಗೆ ಇದ್ದುಬಿಡು (ಅವರು ನನಗೆ ಕಲಿಸಿದ್ದು ಇದನ್ನು)

('ಅನಾಮಧೇಯ'-ಬರ್ಟೋಲ್ಟ್ ಬ್ರೆಕ್ಟ್-ಅನುವಾದ : ಯು.ಆರ್.ಅನಂತಮೂರ್ತಿ)




ವಿಠಲ್ ಹೆಗ್ಡೆ

ಜರ್ಮನಿಯಲ್ಲಿ ಫ್ಯಾಸಿಸಂ 'ಜನಪ್ರಿಯ'ವಾಗತೊಡಗಿದ ಕಾಲಘಟ್ಟದಲ್ಲಿ ಲೋಕಖ್ಯಾತ ಜರ್ಮನ್ ನಾಟಕಕಾರ ಹಾಗೂ ಕವಿ ಬರ್ಟೋಲ್ಟ್ ಬ್ರೆಕ್ಟ್ ಬರೆದ ಒಂದು ಪದ್ಯದ ಸಾಲುಗಳು ಇವು. ಮೊನ್ನೆ 2009 ಮೇ 5ರಂದು ಸೋಮವಾರ ಪಶ್ಚಿಮ ವಲಯ ಪೊಲೀಸು ಮಹಾನಿರೀಕ್ಷಕ ಗೋಪಾಲ ಹೊಸೂರ್ ಅವರಿಗೆ ಶೃಂಗೇರಿ ಪೊಲೀಸರು ತನ್ನ ವಿರುದ್ಧ ಸುಳ್ಳು ಕೇಸು ದಾಖಲಿಸಿ ಹಿಂಸೆ ನೀಡುತ್ತಿರುವುದರ ಬಗ್ಗೆ ಕಲ್ಕುಳಿ ವಿಠಲ ಹೆಗ್ಡೆ ಕೊಟ್ಟ ಮನವಿ ಬ್ರೆಕ್ಟ್‌ನ ಕವಿತೆಯನ್ನು ಮತ್ತೆ ನೆನಪಿಸಿತು. ಕಳೆದ ಒಂದು ತಿಂಗಳಿನಿಂದ ವಿಠಲ ಹೆಗ್ಡೆ ಶೃಂಗೇರಿ ಪೊಲೀಸರಿಂದ ತಲೆಮರೆಸಿಕೊಂಡು, ಊರೂರು ಸುತ್ತುತ್ತಿದ್ದಾರೆ. ಗೋಪಾಲ ಹೊಸೂರ್ ಅವರನ್ನು ವಿಠಲ ಹೆಗ್ಡೆ ಮುಖತಃ ಭೇಟಿಯಾಗಿ ತನ್ನ ಅಹವಾಲು ಸಲ್ಲಿಸಿದರೂ, ಅವರ ಕೈಕೆಳಗಿನ ಶೃಂಗೇರಿ ಪೊಲೀಸರಿಗೆ ಸದ್ರಿ ವಿಠಲ ಹೆಗ್ಡೆ ಅಫೀಷಿಯಲಿ 'ನಾಪತ್ತೆ'!

ಈಗಾಗಲೇ ವಿಠಲ ಹೆಗ್ಡೆ ಮೇಲೆ ಒಂದು ಸುಳ್ಳು ಅಟ್ರಾಸಿಟಿ ಕೇಸು ದಾಖಲಾಗಿದ್ದು, ಅದರಲ್ಲಿ ಅವರಿಗೆ ಜಾಮೀನು ದೊರೆತಿದೆ. ಆದರೆ ವಿಠಲ ಹೆಗ್ಡೆಯವರನ್ನು "ಶಂಕಿತ ನಕ್ಸಲ್" ಎಂಬ ನೆಲೆಯಲ್ಲಿ ಬಂಧಿಸಲು ಶೃಂಗೇರಿ ಪೊಲೀಸರು ಮುಂದಾಗಿದ್ದಾರೆ ಎಂಬ ಸುಳಿವು ದೊರೆತಿದ್ದು, ಅವರು ಒಂದು ತಿಂಗಳಿನಿಂದ ತನ್ನ ಊರುಮನೆ ಕಡೆ ತಲೆಹಾಕಿಲ್ಲ. ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಮಠದ ಗದ್ದೆ ವಿಠಲ ಹೆಗ್ಡೆಯವರ ಊರು. ಆದರೆ ಮೊನ್ನೆ ಅವರು ಗೋಪಾಲ ಹೊಸೂರ್ ಅವರಿಗೆ ಸಲ್ಲಿಸಿದ ಮನವಿಯ "ಮಾನ್ಯರೇ, ಮೇಲ್ಕಂಡ ವಿಳಾಸದ ನಾನು ತಿಳಿಸುವುದೇನೆಂದರೆ....." ಎಂಬ ಸಾಲುಗಳು ಸದ್ಯಕ್ಕೆ ಅವರಿಗೆ ಒಂದು ವಿಳಾಸ ಇಲ್ಲದಿರುವುದನ್ನೇ ಹೇಳುವಂತಿದೆ. ತನ್ನ ಹಳ್ಳಿಯಲ್ಲಿ ಸಾಗುವಳಿ ಮಾಡಿಕೊಂಡಿದ್ದ ನಡುವಯಸ್ಸಿನ ಸಂಸಾರವಂದಿಗನೊಬ್ಬ ಯಾವ ಅಪರಾಧವನ್ನು ಮಾಡದೆ ಪೊಲೀಸರಿಂದ ತಲೆಮರೆಸಿಕೊಂಡು ಅಜ್ಞಾತವಾಸ ಅನುಭವಿಸುತ್ತಿರುವುದು, ಕರ್ನಾಟಕಕ್ಕೆ ಫ್ಯಾಸಿಸಂ ಪ್ರವೇಶಿಸಿರುವುದರ ಒಂದು ಸಣ್ಣ ಸೂಚನೆಯಾಗಿದೆ.

ವಿಠಲ ಹೆಗ್ಡೆ ಕಳೆದ ಹಲವು ವರ್ಷಗಳಿಂದ ನಿರಂತರವಾಗಿ ಸರಕಾರದಿಂದ ಕಿರುಕುಳ ಅನುಭವಿಸುತ್ತಿದ್ದಾರೆ. ಮಲೆನಾಡು ಪರಿಸರದಲ್ಲಿ ಅಕ್ರಮ ಗಣಿಗಾರಿಕೆ, ಕುದುರೆಮುಖದ ಅದಿರು ಅಗೆತ ಹಾಗೂ ಮಲೆನಾಡಿನ ಆದಿವಾಸಿಗಳನ್ನು ಅವರ ನೆಲೆಗಳಿಂದ ಎತ್ತಂಗಡಿ ಮಾಡುವ ಅರಣ್ಯ ಕಾಯ್ದೆಗಳ ವಿರುದ್ಧ ವಿಠಲ ಹೆಗ್ಡೆ ನಾಯಕತ್ವ ವಹಿಸಿ ನಡೆಸಿದ ಹೋರಾಟಗಳು ಅವರಿಗೆ ಆ ಪರಿಸರದಲ್ಲಿ ಸಾಕಷ್ಟು ವೈರಿಗಳನ್ನು ಸೃಷ್ಟಿಸಿದೆ. ಆದರೆ ಈ ವೈರಿಗಳಲ್ಲಿ ಯಾರೂ ಬಡಪಾಯಿಗಳಿಲ್ಲ, ಜಿಲ್ಲೆಯ ರೆವಿನ್ಯೂ ಅಧಿಕಾರಿಗಳು, ಶೃಂಗೇರಿಯ ಪೊಲೀಸರು ಹಾಗೂ ಅಲ್ಲಿನ ಮಠ... ಹೀಗೆ ವಿಠಲ ಹೆಗ್ಡೆ ತನ್ನ ಊರಿನಲ್ಲಿ ಎದುರು ಹಾಕಿಕೊಂಡವರೆಲ್ಲರೂ ಬಲಾಢ್ಯರೇ. ಇವರ ಜೊತೆ ಸಂಘಪರಿವಾರವೂ ವಿಠಲ ಹೆಗ್ಡೆಯವರನ್ನು ತನ್ನ ಹಿಟ್‌ಲಿಸ್ಟ್‌ನಲ್ಲಿ ಸೇರಿಸಿಕೊಂಡಿದೆ. ಅವರು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಲ್ಲೂ ಸಕ್ರಿಯವಾಗಿರುವುದರಿಂದ 'ಶಂಕಿತ ನಕ್ಸಲ್ ಭಯೋತ್ಪಾದಕ' ಎಂಬುದಕ್ಕೆ ಇನ್ನು ಯಾವ ಸಾಕ್ಷ್ಯಾಧಾರ ಬೇಕು? ಶೃಂಗೇರಿಯ ಪೊಲೀಸರು ಅವರನ್ನು ಬಂಧಿಸಿ ರಿಪೇರಿ ಮಾಡಲು ಯಾವತ್ತೋ ತೀರ್ಮಾನ ತೆಗೆದುಕೊಂಡಿದ್ದು, ಅದಕ್ಕೊಂದು ಸೂಕ್ತ ಕಾರಣಕ್ಕಾಗಿ ಅವರು ಕಾಯುತ್ತಿದ್ದಾರೆ. ಸದ್ಯಕ್ಕೆ ಕರ್ನಾಟಕದಲ್ಲಿ ಆರೋಪಿಗಳನ್ನು ಬಂಧಿಸಲು ಪೊಲೀಸರಿಗೆ - ಅದು ಪಿಳ್ಳೆ ನೆವವಾದರೂ ಸರಿಯೇ- ಒಂದು 'ಕಾರಣ'ವೆಂಬುದು ಬೇಕು. ರಾಜ್ಯ ಸರ್ಕಾರ ಜಾರಿಗೆ ತರಲು ಈಗ ತಯಾರಿ ನಡೆಸಿರುವ ಕೋಕಾ ಕಾಯ್ದೆಯಲ್ಲಿ ಪೊಲೀಸರಿಗೆ ಈ 'ಕಾರಣ' ಕೊಡುವ ತಲೆನೋವು ಇರುವುದಿಲ್ಲ, ಯಾವ ನ್ಯಾಯಾಲಯಕ್ಕೂ ಕಾರಣ ನೀಡದೆ, ಎಫ್‌ಐಆರ್ ಸಲ್ಲಿಸದೆ ಆರೋಪಿಯ ಮನೆಯವರಿಗೆ ಕೂಡಾ ಕಾರಣ ತಿಳಿಸದೆ, ಪೊಲೀಸರು ಯಾರನ್ನೇ ಆಗಲಿ 365 ದಿನ ಬಂಧನದಲ್ಲಿ ಇಡುವುದರ ಜೊತೆ ಅವನ ಆದಾಯ ಮೂಲವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲು ಈ ಕಾನೂನಿನ ಅಡಿಯಲ್ಲಿ ಅವಕಾಶವಿದೆ.

ಈ ಕೋಕಾ ಕಾನೂನು ಇನ್ನೂ ಜಾರಿಗೆ ಬಂದಿಲ್ಲವಾದ್ದರಿಂದ ಶೃಂಗೇರಿ ಪೊಲೀಸರು, ತಾಲ್ಲೂಕಿನ ತಹಸೀಲ್ದಾರ್ ಎಂಬ ರೆವಿನ್ಯೂ ಆಡಳಿತದ ಪಾಳೆಯಗಾರ ಅಧಿಕಾರಿಯ ನೆರವು ಪಡೆದುಕೊಂಡು ವಿಠಲ ಹೆಗ್ಡೆಯವರ ಮೇಲೆ ಅಟ್ರಾಸಿಟಿ ಕೇಸುಗಳನ್ನು ಜಡಿದಿದ್ದಾರೆ. ದಲಿತರಿಂದಲೇ ಆ ಬಗ್ಗೆ ದೂರುಗಳನ್ನು ದಾಖಲಿಸಿಕೊಂಡರೆ ಅದಕ್ಕೆ ಹೆಚ್ಚಿನ 'ಬಲ' ಬರುತ್ತದೆ ಎಂಬ ನಂಬಿಕೆಯಲ್ಲಿ ಅವರಿಂದಲೇ ದೂರು ಬರೆಸಿದ್ದಾರೆ. ಮೊದಲು ದಲಿತರಿಗೆ ಸೇರಿದ ಜಮೀನನ್ನು ವಿಠಲ ಹೆಗ್ಡೆ ಕಬಳಿಸಿದ್ದಾರೆ ಎಂದು ಆ ಊರಿನ ಕೆಲವು ದಲಿತರಿಂದ ದೂರು ಕೊಡಿಸಲಾಯಿತು. ವಿಠಲ ಹೆಗ್ಡೆ ನ್ಯಾಯಾಲಯದ ಎದುರು ಈ ದೂರು ನಿರಾಧಾರವಾದದ್ದು ಎಂದು ಸಾಬೀತುಪಡಿಸಿದರು. ನ್ಯಾಯಾಲಯ ಅವರ ವಾದವನ್ನು ಎತ್ತಿ ಹಿಡಿಯಿತು. ಈ ತೀರ್ಪಿನ ವಿರುದ್ಧ ದೂರುದಾರರು ನೀಡಿದ ಮೇಲ್ಮನವಿಯನ್ನೂ ನ್ಯಾಯಾಲಯ ತಿರಸ್ಕರಿಸಿತು. ಈ ನಡುವೆ "ವಿವಾದಿತ ಜಮೀನಿನ" ಕಾರಣದಲ್ಲಿ ರೆವಿನ್ಯೂ ಆಡಳಿತದ ಕಿರುಕುಳ ಮುಂದುವರೆದಿತ್ತು, ಇದೇ ಮಾರ್ಚ್ ತಿಂಗಳಲ್ಲಿ ವಿಠಲ ಹೆಗ್ಡೆಯವರ ಮೇಲೆ ಮತ್ತೊಂದು ಅಟ್ರಾಸಿಟಿ ಕೇಸು ದಾಖಲಾಯಿತು. ವಿಠಲ ಹೆಗ್ಡೆ ಕೋರ್ಟ್ ಬಾಗಿಲಲ್ಲಿ ಹೆಣಕಾದು, ದುಡ್ಡು ಖರ್ಚು ಮಾಡಿಕೊಂಡು ಈ ಕೇಸಿನಲ್ಲಿ ಜಾಮೀನು ಪಡೆದುಕೊಂಡರು. ಅಷ್ಟರಲ್ಲಿ ಅವರ ನೆತ್ತಿಯ ಮೇಲೆ ಪೊಲೀಸರ ಇನ್ನೊಂದು ಕತ್ತಿ ತೂಗಾಡತೊಡಗಿತು. ಕಳೆದವಾರ ಶೃಂಗೇರಿಗೆ ಸಮೀಪದ ಮೆಣಸಿನ ಹಾಡ್ಯ ಮತ್ತು ಆಸುಪಾಸಿನ ಹಳ್ಳಿಗಳ ಹಲವು ಮುಗ್ಧ ಗ್ರಾಮಸ್ಥರನ್ನು 'ಶಂಕಿತ ನಕ್ಸಲ್' ಎಂದು ಪೊಲೀಸರು ಬಂಧಿಸಿದ್ದಾರೆ. ಕೆಲವರನ್ನು 'ವರ್ಕ್' ಮಾಡಿಬಿಟ್ಟಿದ್ದಾರೆ. ಶೃಂಗೇರಿ ಪೊಲೀಸರು ವಿಠಲ ಹೆಗ್ಡೆಯವರನ್ನೂ ಬಂಧಿಸುವುದರಲ್ಲಿದ್ದಾರೆ ಎಂಬ ಸುಳಿವು ಸಿಕ್ಕಿ ಅವರು ಈಗ 'ತಲೆಮರೆಸಿಕೊಂಡು' ದಿನ ಕಳೆಯುತ್ತಿದ್ದಾರೆ.



ಬಿನಾಯಕ್ ಸೇನ್

ಪಶ್ಚಿಮವಲಯ ಪೊಲೀಸು ವರಿಷ್ಠಾಧಿಕಾರಿಗೆ ಸಲ್ಲಿಸಿದ ಮನವಿಯಲ್ಲಿ ವಿಠಲ ಹೆಗ್ಡೆ ತನಗೆ ಹಚ್ಚಲಾಗಿರುವ 'ಶಂಕಿತ ನಕ್ಸಲ್' ಹಣೆಪಟ್ಟಿಯ ಬಗ್ಗೆ ಹೀಗೆ ನಿವೇದಿಸಿಕೊಂಡಿದ್ದಾರೆ: "ನಕ್ಸಲೀಯರ ಹಿಂಸಾತ್ಮಕ ಹೋರಾಟದ ಬಗ್ಗೆ ಮೊದಲಿನಿಂದಲೂ ವಿರೋಧಿಸಿಕೊಂಡು ಬಂದ ನಾನು ಅವರೊಂದಿಗೆ ಯಾವುದೇ ರೀತಿಯ ಸಂಬಂಧ, ಸಹಮತ ಹೊಂದಿರುವುದಿಲ್ಲ, ಮಾತ್ರವಲ್ಲ, ನಕ್ಸಲೀಯರು ಕಾನೂನುಬಾಹಿರವಾಗಿ ಯಾವುದೇ ಕೃತ್ಯ ಮಾಡಿದಾಗಲೆಲ್ಲಾ ಖಂಡಿಸುತ್ತಲೇ ಬಂದಿದ್ದೇನೆ. ಹೀಗಿದ್ದೂ ಕೆಲವು ಸ್ಥಾಪಿತ ಹಿತಾಸಕ್ತಿಗಳು ನಕ್ಸಲೀಯ ಹಣೆಪಟ್ಟಿ ಕಟ್ಟಿ ಅಪಪ್ರಚಾರ ಮಾಡುತ್ತಿದ್ದಾರೆ. ಈ ಷಡ್ಯಂತ್ರಕ್ಕೆ ಹಾಗೂ ಸ್ಥಳೀಯ ಬಿಜೆಪಿ ಸಂಘಪರಿವಾರದವರ ಕುತಂತ್ರಕ್ಕೆ ಪೊಲೀಸರು ಸಹಕರಿಸುತ್ತಿದ್ದಾರೆ. ಪೊಲೀಸರನ್ನು ಪ್ರಚೋದಿಸಿ ನನ್ನ ಮೇಲೆ ಸುಳ್ಳು ಕೇಸು ದಾಖಲಿಸಿ ಜೈಲಿಗೆ ತಳ್ಳುವ ಪ್ರಯತ್ನ ಕಂಡುಬರುತ್ತಿದೆ."

ವಿಠಲ ಹೆಗ್ಡೆ ಮಲೆನಾಡಿನ ಕಾಡಿನಲ್ಲಿ ಅವಿತುಕೂತು ನಾಗರಿಕ ಪ್ರಪಂಚದ ವಿರುದ್ಧ ಯುದ್ಧ ಸಾರಿರುವ ಗೆರಿಲ್ಲಾ ಕಾಲಾಳು ಖಂಡಿತ ಅಲ್ಲ. ಕಳೆದ ಅನೇಕ ವರ್ಷಗಳಿಂದ ರಾಜ್ಯದ ಹಲವೆಡೆ ನಡೆದ ಚಳವಳಿ, ಪ್ರತಿಭಟನೆ, ಸಭೆ, ಮೆರವಣಿಗೆಗಳಲ್ಲಿ ಮುಖ್ಯ ಪಾತ್ರವಹಿಸಿ ಭಾಗವಹಿಸುತ್ತಿದ್ದಾರೆ. ಇಂತಹ ಸಾರ್ವಜನಿಕವೂ, ಪಾರದರ್ಶಕವೂ ಆದ ವ್ಯಕ್ತಿತ್ವವುಳ್ಳ ವಿಠಲ ಹೆಗ್ಡೆ, ರಾಜ್ಯದ ಹಿರಿಯ ಪೊಲೀಸು ಅಧಿಕಾರಿಯೊಬ್ಬರಿಗೆ ತನ್ನ ಕುರಿತು ಹೀಗೆ ನಿವೇದಿಸಿಕೊಳ್ಳುವುದರಲ್ಲಿ ಒಂದು ಅಸಹನೀಯ ವಿಪರ್ಯಾಸವಿದೆ.

ಈ ರಾಜ್ಯದಲ್ಲಿ ಪ್ರಜೆಯೊಬ್ಬನ ಮೇಲೆ ನಕ್ಸಲ್ ಭಯೋತ್ಪಾದಕ ಇತ್ಯಾದಿ ಆರೋಪಗಳನ್ನು ಹೊರಿಸಿ ಬಲಿಪಶು ಮಾಡಲು ನಮ್ಮ ಪೊಲೀಸು ಇಲಾಖೆಗೆ ಯಾವುದೇ ಸಾಕ್ಷ್ಯಾಧಾರವೂ ಬೇಕಿಲ್ಲ; ತಮ್ಮ ಆರೋಪಗಳಿಗೆ ನಂಬಿಕೆಗೆ ಯೋಗ್ಯವಾದ ಆಧಾರಗಳನ್ನು ಒದಗಿಸಬೇಕು ಎಂಬ ಬೌದ್ಧಿಕ ಶಿಸ್ತಾಗಲೀ, ನೈತಿಕ ನಿಯತ್ತಾಗಲೀ ನಮ್ಮ ಮಾಧ್ಯಮಗಳಿಗೂ ಇಲ್ಲ; ನಮ್ಮ ರಾಜಕೀಯ ಪಕ್ಷಗಳಿಗೂ ಇಲ್ಲ. ಕರ್ನಾಟಕದಲ್ಲಿ ನಕ್ಸಲೀಯ ಸಮಸ್ಯೆಯನ್ನು ಉತ್ಪ್ರೇಕ್ಷಿಸುವುದರಲ್ಲಿ ಪೊಲೀಸರ ಜೊತೆ ನಮ್ಮ ಇಡೀ ರಾಜಕೀಯ ವ್ಯವಸ್ಥೆ ಹಾಗೂ ಮಾಧ್ಯಮಗಳು ಕೈ ಜೋಡಿಸಿವೆ. ಭಿನ್ನಮತ ಹೊಂದಿದವರಿಗೆಲ್ಲ 'ನಕ್ಸಲೀಯ' ಎಂಬ ಲೇಬಲ್ಲು ತಾಗಿಸಿ ಅವರ ಶೇಪ್ ತೆಗೆಯುವುದರಲ್ಲಿ ಈಗ ಪೊಲೀಸರ ಜೊತೆ ಮಾಧ್ಯಮ ಹಾಗೂ ರಾಜಕೀಯ ಪಕ್ಷಗಳು ಸಹಕರಿಸುತ್ತಿವೆ.

ಕನ್ನಡದ ಪತ್ರಿಕೆಗಳ ಮಟ್ಟಿಗಂತೂ ನಮ್ಮ ಮಠಮಾನ್ಯಗಳನ್ನು, ಇಲ್ಲಿನ ಶ್ರೇಣೀಕೃತ ವ್ಯವಸ್ಥೆಯನ್ನು ಅಥವಾ ಸರ್ಕಾರ ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿಗಳನ್ನು ಪ್ರಶ್ನಿಸುವ ಎಲ್ಲರೂ ನಕ್ಸಲ್ ಪರರು. ಅಕ್ರಮ ಗಣಿಗಾರಿಕೆ, ಅದಿರು ಅಗೆತ, ಎಸ್‌ಇಝೆಡ್ ಮುಂತಾದವುಗಳ ವಿರುದ್ಧ ನಡೆಯುವ ಚಳವಳಿಗಳು ಹಾಗೂ ಕೋಮು ಸೌಹಾರ್ದ ವೇದಿಕೆಯಂತಹ ಸಂಘಟನೆಗಳು ನಕ್ಸಲ್ ಪ್ರೇರಿತ ಎಂದು ಬಲಪಂಥೀಯ ಬಿಜೆಪಿ ಹಾಗೂ ತನ್ನನ್ನು ಎಡಪಂಥೀಯ ಎಂದು ಕರೆದುಕೊಳ್ಳುವ ಸಿಪಿಎಂ ಒಮ್ಮತದ ಅಭಿಪ್ರಾಯ ಹೊಂದಿವೆ. ಇಸ್ಲಾಮಿಕ್ ಭಯೋತ್ಪಾದನೆಯ ಆರೋಪಕ್ಕೆ ಹೇಗೋ ಹಾಗೆಯೇ ನಕ್ಸಲ್ ಎಂಬ ಆರೋಪಕ್ಕೂ ನಿಮಗೆ ಹಾಗೆ ಸಂದೇಹ ಬಂತು ಎಂದಾದರೆ ಅದೇ ಒಂದು ಆಧಾರ, ಅಥವಾ ಕೋರ್ಟಿನ ಪರಿಭಾಷೆಯಲ್ಲಿ ಹೇಳುವುದಾದರೆ ಸಾಂದರ್ಭಿಕ ಸಾಕ್ಷ್ಯಾಧಾರ. ಅದು ಛತ್ತೀಸ್‌ಗಢದ ಧೀರೋದಾತ್ತ ಮಾನವ ಹಕ್ಕು ಹೋರಾಟಗಾರ ಬಿನಾಯಕ್ ಸೇನ್‌ರ ಮೇಲಿನ ಆರೋಪಕ್ಕಾದರೂ ಸರಿಯೇ ಕಲ್ಕುಳಿ ವಿಠಲ ಹೆಗ್ಡೆಯವರ ಮೇಲೆ ಶೃಂಗೇರಿ ಪೊಲೀಸರು ಹೊರಿಸಿದ ಆರೋಪಕ್ಕಾದರೂ ಸರಿಯೇ. ಸಂದೇಹವೇ ಅಂತಿಮ ತೀರ್ಪು; ದೂರುದಾರನೇ ನ್ಯಾಯಾಧೀಶ!

ಮಾನವ ಹಕ್ಕುಗಳ ಹೋರಾಟಗಾರರನ್ನು ಹೀಗೆ ವಿನಾಕಾರಣ ದಂಡಿಸುವ ಮೂಲಕ ಈ ವ್ಯವಸ್ಥೆ ಪ್ರಜೆಗಳಿಗೆ ಪ್ರಜಾಸತ್ತಾತ್ಮಕ ಚಳವಳಿಗಳಿಂದ ದೂರವಿರಲು ಎಚ್ಚರಿಕೆ ಕೊಡುತ್ತಿದೆ.

● ಜಿ.ರಾಜಶೇಖರ

ಶ್ರುತಿ ಪ್ರಿಯ ಚಂದ್ರಚೂಡನ ಚೋರ ಪುರಾಣ


ಶ್ರುತಿಯಂಥ ಪ್ರಬುದ್ಧ ವಿವಾಹಿತೆ, ಸಂಸಾರಸ್ಥ ನಟಿಯನ್ನೇ ಬುಟ್ಟಿಗೆ ಹಾಕಿಕೊಂಡ ಚಂದ್ರಚೂಡ್ ಉರ್ಫ್ ಚಂದ್ರಾಚಾರಿ ಅಲಿಯಾಸ್ ಚಂದ್ರಶೇಖರ್ ಯಾನೆ ಚಕ್ರವರ್ತಿ ಅರ್ಥಾತ್ ಮಹೇಶ್, ಸುರೇಶ್ ಇತ್ಯಾದಿ ಅಸಂಖ್ಯಾತ ಹೆಸರುಗಳುಳ್ಳ ಆಸಾಮಿಯ ಜಾತಕವೇ ವಿಚಿತ್ರ.

ಕೇವಲ ಶ್ರುತಿಗಷ್ಟೇ ಅಲ್ಲ ಇನ್ನೂ ಅನೇಕ ಹೆಣ್ಣು ಮಕ್ಕಳಿಗಿದು ಗೊತ್ತಿರಲಿ ಅಂತಲೇ ಆತನ ಜಾತಕದ ಎರಡನೇ ಕಂತನ್ನಿಲ್ಲಿ ಪ್ರಕಟಿಸುತ್ತಿದ್ದೇವೆ.

ತಾನೊಬ್ಬ ಪತ್ರಕರ್ತ, ನೀರಾವರಿ ತಜ್ಞ ಮತ್ತು ಜನಪರ ಹೋರಾಟದ ಹಿನ್ನೆಲೆಯಿಂದ ಬಂದವನು ಎಂದು ಕಂಡಕಂಡಲ್ಲಿ ರೈಲು ಬಿಡುವ ಚಂದ್ರಚೂಡ್‌ನಂಥ ವಂಚಕನನ್ನು ಶ್ರುತಿಯಂಥ ನಟಿಯೊಬ್ಬಳು ಹೆಚ್ಚೆಂದರೆ ಒಂದು ವರ್ಷಕಾಲ ಸಹಿಸಿಯಾಳು. ಅದಕ್ಕೂ ಹೆಚ್ಚುಕಾಲ ಆತನ ಜೊತೆಗಿದ್ದಳೆಂದರೆ ಅದು ಆಕೆಯ ಕರ್ಮವಷ್ಟೆ. ತಾನೇ ಪ್ರೀತಿಸಿ ಮದುವೆಯಾದವಳನ್ನು, ತನ್ನದೇ ಮಗುವನ್ನು ನಡುನೀರಿನಲ್ಲಿ ಕೈಬಿಟ್ಟು ಯಾರೋ ನಟಿ ಸಿಕ್ಕಳೆಂದು ಅವಳ ಜೊತೆ ಪೋಜು ಕೊಡುವ ಈತ ಮುಂದೊಮ್ಮೆ ಶ್ರುತಿಗಿಂತ ಲಾಯಕ್ಕಾದವಳೊಬ್ಬಳು ಸಿಕ್ಕರೆ ಶ್ರುತಿಗೆ ಕೈಕೊಡದೇ ಇರುತ್ತಾನಾ?

ಇದು ಚಂದ್ರಚೂಡನ ಜಾತಕ ಗೊತ್ತಿರುವ ಅನೇಕರು ಕೇಳುವ ಪ್ರಶ್ನೆ. ಹೆಂಡತಿ, ಅಕ್ಕ, ತಂಗಿಯರಿರುವ ಈತನ ಪರಿಚಿತರ್‍ಯಾರೂ ಚಂದ್ರಚೂಡನನ್ನು ತಮ್ಮ ಮನೆಗೆ ಕರೆಯುವ ದುಸ್ಸಾಹಸಕ್ಕೆ ಕೈಹಾಕುವುದಿಲ್ಲ, ಅದು ಆತನ ಹುಟ್ಟುಗುಣ. ಮೂಲತಃ ಹಾಸನ ಜಿಲ್ಲೆ ಅರಸೀಕೆರೆಯ ವಿಜಯ್‌ಕುಮಾರ್ ಆಚಾರ್ ಮತ್ತು ಸುಶೀಲಮ್ಮ ದಂಪತಿಗಳ ಹಿರಿಮಗನಾದ ಚಂದ್ರಶೇಖರ್ ಮೊದಲ ಬಾರಿಗೆ ಕುಖ್ಯಾತಿಗೆ ಬಂದದ್ದು ಅದೇ ಅರಸೀಕೆರೆಯ ಕಾಲೇಜು ವಿದ್ಯಾರ್ಥಿನಿ ಮಂಜುಳಾ ಎಂಬಾಕೆಯೊಂದಿಗೆ ಊರುಬಿಟ್ಟು ಪರಾರಿಯಾದಾಗ.


ಆನಂತರ ಹಾಸನಕ್ಕೆ ಬಂದವನು ತನ್ನ ಹೆಸರನ್ನು ಚಂದ್ರಚೂಡ್ ಎಂದಿಟ್ಟುಕೊಂಡ. ಯಾಕೆ ಹೆಸರನ್ನು ಬದಲಾಯಿಸಿಕೊಂಡೆ ಎಂದು ಯಾರಾದರು ಕೇಳಿದರೆ "ನನ್ನ ತಂಗಿ ಹೆಸರು ಚೂಡಾಮಣಿ. ಅವಳ ಬಗ್ಗೆ ನನಗೆ ತುಂಬಾ ಪ್ರೀತಿ. ಅದಕ್ಕೆ ಅವಳ ಹೆಸರ ಅರ್ಧ ಭಾಗವನ್ನು ನನ್ನ ಹೆಸರಿನ ಅರ್ಧ ಭಾಗಕ್ಕೆ ಸೇರಿಸಿಕೊಂಡಿದ್ದೇನೆ" ಎಂದೆಲ್ಲ ರೀಲು ಬಿಡುತ್ತಿದ್ದ ಚಂದ್ರಾಚಾರಿ. ಈತನ ಮಾತಿಗೆ ಮರುಳಾದ 'ಜನತಾ ಮಾಧ್ಯಮ' ಸಂಪಾದಕ ವೆಂಕಟೇಶ್ ಮೂರ್ತಿ ತಮ್ಮ 'ನೆಲ-ಜಲ' ಎಂಬ ಸಂಘಟನೆಗೆ ಸೇರಿಸಿಕೊಂಡರು. 'ಕೆರೆ ಉಳಿಸಿ' ಚಳವಳಿಯ ಫುಲ್‌ಟೈಂ ಕಾರ್ಯಕರ್ತನನ್ನಾಗಿ ನೇಮಿಸಿ, ನೀರಾವರಿ ಹೋರಾಟಕ್ಕೆ ಸಂಬಂಧಪಟ್ಟಂತೆ ಅಧ್ಯಯನಕ್ಕೆಂದು ರಾಜಸ್ತಾನಕ್ಕೆ ಕಳಿಸಿಕೊಟ್ಟರು. ಕಾಟಾಚಾರಕ್ಕೆ ರಾಜಸ್ತಾನ ಸುತ್ತಿ ಬಂದ ಚಂದ್ರಚೂಡ್ ಸಂಘಟನೆಯ ದುಡ್ಡು ತಿಂದು ಕಳ್ಳಲೆಕ್ಕ ಕೊಟ್ಟು ಸಿಕ್ಕಿಬಿದ್ದ. ವೆಂಕಟೇಶ ಮೂರ್ತಿಯವರಿಂದ ಲಾತಾ ತಿಂದು ಹೊರದಬ್ಬಿಸಿಕೊಂಡ.


ಚಂದ್ರ ಚೂಡ್

ಮುಂದೆ ಚಂದ್ರಚೂಡ್ ಗೋಚರಿಸಿದ್ದು ಕಮ್ಯುನಿಸ್ಟ್ ಪಕ್ಷದ ಡಿವೈಎಫ್‌ಐ ಸಂಘಟನೆಯಲ್ಲಿ. ತಾನು ಬ್ರಾಹ್ಮಣ ಎಂದು ಮಲ್ನಾಡ್ ಕಾಲೇಜಿನ ಪ್ರಿನ್ಸಿಪಾಲ್ ಸಿ.ಎಸ್. ಕೃಷ್ಣಸ್ವಾಮಿಯ ತಲೆ ತಿಕ್ಕಿ ಐವತ್ತು ಸಾವಿರ ರೂಪಾಯಿ ಕಿತ್ತ. ಅದೂ ಸಾವಿರ ಗಟ್ಟಲೇ ಸಸಿಗಳನ್ನು ನೆಡುತ್ತೇನೆಂದು ನಂಬಿಸಿದ್ದ. ಬ್ರಾಹ್ಮಣರ ಹುಡುಗ ಏನೋ ಸಮಾಜಸೇವೆ ಮಾಡ್ತಾನೆ ಎಂದು ದುಡ್ಡು ಕೊಟ್ಟ ಸಿಎಸ್‌ಕೆ ಇವತ್ತಿಗೂ ಶಾಪ ಹಾಕುತ್ತಿದ್ದಾರೆ. ಅದೇ ಹೊತ್ತಿಗೆ ರೈಲ್ವೇ ಕ್ವಾಟ್ರಸ್ಸಿನಲ್ಲಿದ್ದ ಅಧಿಕಾರಿಯೊಬ್ಬರ ಮಗನಿಗೆ ನೌಕರಿ ಕೊಡಿಸುತ್ತೇನೆಂದು ಎಪ್ಪತ್ತೈದು ಸಾವಿರ ರೂಪಾಯಿ ಮುಂಡಾಯಿಸಿದ್ದ. ಒಂದೆಡೆ ವಂಚನೆ. ಮತ್ತೊಂದೆಡೆ ಪತ್ರಕರ್ತನ ಸೋಗಿನಲ್ಲಿ ರೋಲ್‌ಕಾಲ್ ಶುರುಹಚ್ಚಿಕೊಂಡ ಚಂದ್ರಚೂಡ್ ಇದೆಲ್ಲಕ್ಕೂ ಗುರಾಣಿಯಾಗಿಟ್ಟುಕೊಂಡಿದ್ದು ಬಾಳ್ಳು ಗೋಪಾಲ್ ಸಂಪಾದಕತ್ವದ 'ನಾಡಸಹ್ಯಾದ್ರಿ' ಎಂಬ ಪತ್ರಿಕೆಯನ್ನು. 'ಯಾವುದೋ ಕಾಲಕ್ಕೆ ಆ ಪತ್ರಿಕೆಗೆ ಮತ್ತೆ ಜೀವಕೊಡುತ್ತೇನೆಂದು ಸಕಲೇಶಪುರದ ಮಲ್ನಾಡ್ ಮೆಹಬೂಬ್ ಎಂಬಾತನ ಜೊತೆ ಚಂದಾ ವಸೂಲಿಗೆ ಬಿದ್ದ. ಆಗಿನ್ನೂ ಹಾಸನ ನಗರಸಭೆಗೆ ಆಯುಕ್ತರಾಗಿದ್ದ ಬಿ.ಎ. ಪರಮೇಶ್ ಎಂಬ ಅಧಿಕಾರಿಯನ್ನು ತನ್ನ ಅಡ್ಡೆಗೇ ಕರೆಸಿಕೊಂಡು ದುಡ್ಡು ಕೀಳುತ್ತಿದ್ದ. ಹೀಗೆ ಯಾರ್‍ಯಾರು ಈತನನ್ನು ನಂಬಿ ಅನ್ನ ನೀರು ಕೊಟ್ಟರೋ ಅವರೆಲ್ಲರನ್ನೂ ಮುಂಡಾಯಿಸಿದ್ದಲ್ಲದೇ ಅಂಥವರ ಅಕ್ಕ, ತಂಗಿ, ಹೆಂಡತಿ, ಮಗಳ ಬಗ್ಗೆ ಇಲ್ಲಸಲ್ಲದ ಗುಲ್ಲೆಬ್ಬಿಸುತ್ತಿದ್ದ. ಇಂಥವರ ಮಗಳು ನನ್ನನ್ನು ಪ್ರೀತಿಸ್ತೀನಿ ಅಂದ್ಲು, ಇಂಥವನ ಹೆಂಡತಿ ಜೊತೆ ನನಗೆ ಸಂಬಂಧವಿದೆ. ಇಂಥವನ ತಂಗಿ ಪ್ರತಿನಿತ್ಯ ನನ್ನ ತಲೆ ತಿಂತಾಳೆ ಎಂದು ಹಾವಳಿಯಿಡುತ್ತಿದ್ದ ಈತನ ವಿಕೃತಿ ಕಂಡು ಈತನ ಪ್ರಾಣಸ್ನೇಹಿತನಂತಿದ್ದ ಕಸ್ತೂರಹಳ್ಳಿ ಮಹೇಶನೇ ಅಟ್ಟಾಡಿಸಿ ಹೊಡೆದ.

ಬಹುಶಃ ಹಾಸನದ ಮಟ್ಟಿಗೆ ಈತನ ಪಾಪದ ಕೊಡ ತುಂಬಿ ಬಂದಿತ್ತೇನೋ. ಅನ್ನ ಕೊಟ್ಟವನ ಮನೆ ಹೆಣ್ಣುಮಕ್ಕಳ ಬಗ್ಗೆಯೇ ಕೀಳು ಪ್ರಚಾರಕ್ಕಿಳಿದ ಚಂದ್ರಚೂಡ್ ವಿರುದ್ಧ ಆತನಿಗೆ ಆಸರೆ ಕೊಟ್ಟ ಮಹೇಶನೇ ತಿರುಗಿಬೀಳುತ್ತಿದ್ದಂತೆ, ರೈಲ್ವೇ ನೌಕರನ ಮಗನಿಗೆ ಕೆಲಸ ಕೊಡಿಸುತ್ತೇನೆಂದು ಎಪ್ಪತ್ತೈದು ಸಾವಿರ ರೂಪಾಯಿ ಮುಂಡಾಯಿಸಿದ ಬಗ್ಗೆ ಹಾಸನದ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪೋರ್‌ಟ್ವೆಂಟ್ಟಿ ಕೇಸು ದಾಖಲಾಯಿತು. ಇಂಥದ್ದೇ ಇನ್ನೆರಡು ಕೇಸುಗಳು ಹಾಸನದ ಬೇರೆಬೇರೆ ಪೊಲೀಸ್ ಠಾಣೆಗಳಲ್ಲಿ ದಾಖಲಾದವು. ಅಲ್ಲಿಗೆ ಹಾಸನದಿಂದ ಪರಾರಿಯಾದ ಚಂದ್ರಚೂಡ್ ಕೊನೆಗೆ ಚಿಕ್ಕಮಗಳೂರಿನಿಂದ ವಕೀಲರನ್ನು ಕರೆತಂದು ಜಾಮೀನು ಗಿಟ್ಟಿಸಿದ್ದ. ಈತನ ಪರ ವಕಾಲತ್ತು ಹಾಕಲು ಹಾಸನದ ಒಬ್ಬ ವಕೀಲನೂ ಬರಲಿಲ್ಲ, ಆ ಮಟ್ಟಿಗೆ ಹಾಸನದ ಜನ ಈತನ ವಿರುದ್ಧ ರೊಚ್ಚಿಗೆದ್ದಿದ್ದರು.

ಅಲ್ಲೇ ಇದ್ದಿದ್ದರೆ ತಾನು ಜೀವಂತ ಉಳಿಯೋದೇ ಕಷ್ಟ ಎಂಬುದನ್ನು ಚೆನ್ನಾಗೇ ಲೆಕ್ಕ ಹಾಕಿದ್ದ 'ಚೂಡ್' ಮುಂದೆ ವಕ್ಕರಿಸಿದ್ದು ಬೆಂಗಳೂರಿಗೆ. ಕೆಲ ದಿನಗಳ ಕಾಲ ಬ್ಲಾಕ್ ಅಂಡ್ ವೈಟ್ ಪತ್ರಿಕೆಯಲ್ಲಿದ್ದ, ಅಲ್ಲಿಂದ ದಬ್ಬಿಸಿಕೊಂಡವನು ಲಂಕೇಶ್ ಪತ್ರಿಕೆಯ ಸಿನಿಮಾ ರಿಪೋರ್ಟರ್ ಎಂದು ಓಡಾಡಿಕೊಂಡಿದ್ದ. ಸಿನಿಮಾದಲ್ಲಿ ಛಾನ್ಸ್ ಕೊಡಿಸ್ತೀನಿ ಎಂದು ಕೆಲ ಹುಡುಗಿಯರನ್ನು ವಂಚಿಸಿದ್ದು ಗೊತ್ತಾಗಿ ಇಂದ್ರಜಿತ್ ಲಂಕೇಶ್ ಉಗಿದಟ್ಟಿದ್ದಾರೆ. ಇನ್ನು ಪತ್ರಕರ್ತನಾಗಿ ಉಳಿಯುವುದು ಕಷ್ಟ ಎಂದು ಗೊತ್ತಾಗಿ ಆನೇಕಲ್ ಬಾಲರಾಜ್ ಕಾಲಿಗೆ ಬಿದ್ದು ಇನ್ನೂ ಜನ್ಮ ಕಾಣದ 'ಜನ್ನ' ಎಂಬ ಚಿತ್ರಕ್ಕೆ ಚಂದ್ರಚೂಡ್ ಸ್ವಯಂಘೋಷಿತ ನಿರ್ದೇಶಕನಾದ.


ಶ್ರುತಿ

ಪತ್ರಕರ್ತನಾಗಿ ಎಲ್ಲೂ ಸಲ್ಲಲಿಲ್ಲ, ನೆಟ್ಟಗೊಂದು ಸಿನಿಮಾ ಕೂಡ ನಿರ್ದೇಶಿಸಿಲ್ಲ, ಅಲ್ಲೊಂದು ಇಲ್ಲೊಂದು ಜನಪರ ಸಂಘಟನೆಯಲ್ಲಿ ಈತ ಕಾಣಿಸಿಕೊಂಡರೂ ಅದು ತನ್ನ ವಂಚನೆಯನ್ನು ಮುಚ್ಚಿಕೊಳ್ಳುವುದಕ್ಕೇ ಹೊರತು ಬೇರೆ ಕಾರಣವಿಲ್ಲ. 'ಚಂದ್ರಚೂಡ್ ಕೆರೆ ಕಟ್ಟಿಸಿದ್ದಾರೆ, ಪುಸ್ತಕ ಬರೆದಿದ್ದಾರೆ. ಒಳ್ಳೆಯವ್ರು, ನಾಲ್ಕು ಡಿಗ್ರಿ ಪಡೆದಿದ್ದಾರೆ. ನನಗೆ ಬಾಲ್ಯದ ಗೆಳೆಯ, ಸಹಪಾಠಿಯಾಗಿದ್ದ, ಕಷ್ಟಕ್ಕೆ ನೆರವಾದ....' ಇತ್ಯಾದಿಯಾಗಿ ಶ್ರುತಿ ಏನೇ ಬಡಬಡಿಸಿದರೂ ಅದಕ್ಕೆ ಸಮರ್ಥನೆಯಾಗಲಿ, ಸಾಕ್ಷಿಯಾಗಲಿ ಇಲ್ಲ.

ಚಂದ್ರಚೂಡ್ ಬಗ್ಗೆ ಶ್ರುತಿ ಹೇಳುತ್ತಿರುವುದೆಲ್ಲ ಸುಳ್ಳೆಂದು ಎಂಥವರಿಗೂ ಗೊತ್ತಾಗಿಬಿಡುತ್ತದೆ. ಅಸಲಿಗೆ ಚಂದ್ರಚೂಡ್ ಶ್ರುತಿಯ ರಾಶಿಗೆ ಪ್ರವೇಶಿಸಿದ್ದೇ ಮಹೇಂದರ್ ಶಿಷ್ಯನಾಗಿ. "ನಾನೂ ಸಿನಿಮಾ ಡೈರೆಕ್ಟರು" ಎಂದು ಪೋಜು ಕೊಡಲಾರಂಭಿಸಿದ ಚಂದ್ರಚೂಡ್‌ನನ್ನು ಇಂದ್ರಜಿತ್ ಲಂಕೇಶ್ ಹೊರದಬ್ಬಿದ ನಂತರ ಕೆಲದಿನಗಳ ಕಾಲ 'ಹುಚ್ಚ' ಖ್ಯಾತಿಯ ಓಂಪ್ರಕಾಶ್ ರಾವ್‌ಗೆ ಚೇಲಾ ಆಗಿದ್ದ. ಚಂದ್ರಚೂಡ್ ತನ್ನ ಹುಟ್ಟುಬುದ್ಧಿಗೆ ತಕ್ಕಂತೆ ಓಂಪ್ರಕಾಶ್ ರಾವ್‌ನ ಮೂರನೇ ಪತ್ನಿಯ ಬಗ್ಗೆ ಕುಚೇಷ್ಟೆಗಿಳಿದ.

ಇನ್ನೇನು ಓಂಪ್ರಕಾಶ್ ರಾವ್ ಲಾತಾ ಕೊಡುವುದು ಗ್ಯಾರಂಟಿ ಅನ್ನಿಸಿದಾಗ ಮತ್ತೊಬ್ಬ ನಿರ್ಮಾಪಕ ಧನರಾಜ್‌ಗೆ ಮಸ್ಕಾ ಹೊಡೆದು ಒಂದಷ್ಟು ದುಡ್ಡು ಕಿತ್ತ ಕ್ರಮೇಣ ಸಿನಿಮಾ ನಿರ್ಮಾಪಕರಾದ ಲಲ್ಲೇಶ್ ರೆಡ್ಡಿ, ಗೋವರ್ಧನಮೂರ್ತಿಗೂ ಟೋಪಿ ಇಟ್ಟ.

▶▶▶

ಮತ್ತೆ ಬಂದೇ ಬರುತ್ತಾನೆ.....


ಚಂದ್ರಚೂಡ್-ಮಂಜುಳಾ

ಚಂದ್ರಚೂಡ್ ಧರ್ಮಪತ್ನಿ ಮಂಜುಳಾ ಪ್ರಕಾರ ಇವತ್ತಲ್ಲ ನಾಳೆ ಆತ ಹಳೇ ಪತ್ನಿಯ ಬಳಿಗೇ ಬರುತ್ತಾನಂತೆ. ಹಾಗಂತ ಆಕೆಯೇ ಬಾಯಿಬಿಟ್ಟು ಹೇಳುತ್ತಾಳೆ. "ನೋಡಿ ಸಾರ್; ಇವತ್ತಲ್ಲ ನಾಳೆ ಅವನು ಬಂದೇಬರ್ತಾನೆ ಅನ್ನೋ ವಿಶ್ವಾಸ ನನಗಿದೆ. ಈ ರೀತಿ ಆತ ಯಾರ್‍ಯಾರೋ ಹೆಂಗಸರ ಖಯಾಲಿಗೆ ಬಿದ್ದು ಹೋಗುತ್ತಿರುವುದು ಇದೇ ಮೊದಲೇನಲ್ಲ. ಶ್ರುತಿಯ ಅಧಿಕಾರ ಅಂತಸ್ತು ನೋಡಿ ಬುಟ್ಟಿಗೆ ಬಿದ್ದಿದ್ದಾನೆ. ಎಷ್ಟು ದಿನಾ ಅಂತ ಅಧಿಕಾರದಲ್ಲಿರ್ತಾಳೆ? ಪೊಲೀಸ್ ಕಂಪ್ಲೇಂಟು ಕೊಡು ಅಂತ ಅನೇಕರು ಹೇಳಿದ್ದಾರೆ. ಮಹಿಳಾ ಆಯೋಗಕ್ಕೆ ದೂರನ್ನೂ ಕೊಡಬಹುದು. ಇದೇ ಕಾರಣಕ್ಕೆ ಚಂದ್ರಚೂಡ್ ನನ್ನ ಮೇಲೆ ಜಿದ್ದಿಗೆ ಬಿದ್ದರೆ?

ನನಗಾದರೂ ನನ್ನವರು ಅಂತ ಯಾರಿದ್ದಾರೆ? ಈಗ ಅಕ್ಷರಶಃ ಬೀದಿಗೆ ಬಿದ್ದಿದ್ದೇನೆ. ನನ್ನ ಟಾರ್ಗೆಟ್ ಏನಿದ್ದರೂ ಶ್ರುತಿನೇ. ಆಕೆಯ ದುರ್ಬುದ್ಧಿಯ ವಿರುದ್ಧ ಬಿಜೆಪಿ ನಾಯಕರಿಗೆ ದೂರು ಕೊಡುತ್ತೇನೆ. ನನ್ನಂಥ ಹೆಣ್ಣುಮಗಳಿಗಾದ ಅನ್ಯಾಯಕ್ಕೆ ಬಿಜೆಪಿ ನಾಯಕರು ನ್ಯಾಯ ಕೊಟ್ಟೇ ಕೊಡ್ತಾರೆ ಅನ್ನೋ ವಿಶ್ವಾಸ ನನಗಿದೆ. ಆಕೆಯ ಅಧಿಕಾರ ಹೋಯ್ತು ಅಂದ್ರೆ ಚಂದ್ರಚೂಡ್ ಖಂಡಿತಾ ನನ್ನಲ್ಲಿಗೇ ವಾಪಸ್ಸಾಗ್ತಾನೆ ಅನ್ನೋ ಭರವಸೆ ನನಗಿದೆ-"

ಇದು ಚಂದ್ರಚೂಡ್ ಪತ್ನಿ ಮಂಜುಳಾ ಬಾಯಿಂದ ಹೊರಬಿದ್ದ ಶಬ್ದಾವಳಿ. ಒಂದೆಡೆ ತನ್ನಲ್ಲಿಗೆ ಮತ್ತೆ ಬರುತ್ತಾನೆಂದು ಕಾದು ಕುಂತ ಕೈಹಿಡಿದ ಮಡದಿ. ಮತ್ತೊಂದೆಡೆ ಅವಳನ್ನು ಬಿಡಿಸಿ ತನ್ನ ವಶಮಾಡಿಕೊಳ್ಳಲು ಹವಣಿಸುತ್ತಿರುವ ಶ್ರುತಿ. ಅದೂ ಚಂದ್ರಚೂಡ್ ಎಂಬ ಜೋಡ್ ಗುರುವಿಗೆ. ಇದೊಂದು ಕಾಮಿಡಿ ಚಿತ್ರದಂತಿಲ್ಲವೇ?

"ಇಲ್ಲಿಗೆ ಕೇವಲ ಎರಡು ವರ್ಷದ ಹಿಂದಿನ ಕತೆಯಿದು. ಆಗಿನ್ನೂ ಸಿನಿಮಾ ರಿಪೋರ್ಟರ್ ಆಗಿದ್ದ ಚಂದ್ರಚೂಡ್ 'ಇಷ್ಟರಲ್ಲೇ ನಾನೂ ಒಂದು ಸಿನಿಮಾ ಡೈರೆಕ್ಟ್ ಮಾಡ್ತೀನಿ' ಎಂದು ಬಂಡಲ್ ಬಿಡುತ್ತಲೇ ಮತ್ತೊಂದು ಕುಚೇಷ್ಟೆಗೆ ಕೈಹಾಕಿದ್ದ. ಅದು ನಟಿ ರಮ್ಯ ತನ್ನನ್ನು ಲವ್ ಮಾಡ್ತಿದ್ದಾಳೆ ಎಂಬ ಹಸೀ ಸುಳ್ಳು!

ರಮ್ಯನ್ನ ಲವ್ ಮಾಡ್ತೀನಿ ಎಂದಿದ್ದ

ಯಾವುದೋ ಹುಡುಗಿಯೊಬ್ಬಳು ಕಳಿಸುತ್ತಿದ್ದ ಅಶ್ಲೀಲ ಎಸ್ಸೆಮ್ಮೆಸ್‌ಗಳನ್ನು ತೋರಿಸಿ 'ನೋಡಿ ಈಗಷ್ಟೇ ರಮ್ಯ ನನಗೆ ಈ ರೀತಿ ಮೆಸೇಜ್ ಕಳಿಸಿದ್ದಾಳೆ' ಎಂದು ಯಾರ್‍ಯಾರಿಗೋ ತೋರಿಸುತ್ತಿದ್ದ. ಯಾವುದೇ ಮೊಬೈಲ್ ನಂಬರಿಗೆ ತನ್ನ ಮೊಬೈಲಿನಲ್ಲಿ ರಮ್ಯ ಎಂದು ಹೆಸರು ಫೀಡ್ ಮಾಡಿಟ್ಟುಕೊಂಡರೆ ನಂಬರಿನ ಬದಲು ಆ ಹೆಸರೇ ಬರುತ್ತದೆ. ಇದು ಮೊಬೈಲ್ ಬಳಸುವ ಪುಟ್ಟ ಬಾಲಕನಿಗೂ ಗೊತ್ತಿರುವ ಸತ್ಯ. ಆದರೆ ಚೋರ ಚಂದ್ರಾಚಾರಿ ಮಾತ್ರ ಜನ ತನ್ನನ್ನು ಗೇಲಿ ಮಾಡಿ ಯಾರು ಎಂಬುದನ್ನೂ ಲೆಕ್ಕಿಸದೇ 'ಇಷ್ಟರಲ್ಲೇ ನಾನು ರಮ್ಯನ್ನ ಮದುವೆಯಾಗ್ತೀನಿ. ರಮ್ಯಾಳ ತಂದೆ ಕಡೆಯವರೊಬ್ಬರು ನನ್ನನ್ನು ಕರೆಸಿ ನಿನ್ನ ಹೆಂಡ್ತಿಗೆ ಡೈವೋರ್ಸ್ ಕೊಡು ಅಂದ್ರು...!' ಎಂದು ಬೋಡು ಬಿಡುತ್ತಿದ್ದ. ಎಲ್ಲಿಯ ರಮ್ಯ ಎಲ್ಲಿಯ ಚಂದ್ರಾಚಾರಿ. ಅದೇ ಹೊತ್ತಿಗೆ ಗಾಯಕನೊಬ್ಬನ ಪತ್ನಿಯ ಜೊತೆ ಚಂದ್ರಚೂಡ್ ಡಿಂಗ್‌ಡಾಂಗ್ ಶುರು ಹಚ್ಚಿಕೊಂಡಿದ್ದ. ಆಕೆಯನ್ನು ಇನ್ನಿಲ್ಲದಂತೆ ಸುಲಿದ ನಂತರ ಸಿನಿಮಾದಲ್ಲಿ ಛಾನ್ಸ್ ಕೊಡಿಸ್ತೀನಿ ಎಂದು ಟೀವಿ ನಟಿಯೊಬ್ಬಳ ರಾಶಿಗೆ ನೆಗೆದಿದ್ದ. ಮುಂದೆ 'ಜನ್ನ' ಚಿತ್ರದ ಶೂಟಿಂಗ್ ಶುರುವಾದರೆ ಮೊದಲು ಕೇರಳದ ಅರ್ಚನಾ ಎಂಬಾಕೆಯನ್ನು ಹೀರೋಯಿನ್ ಮಾಡಿದ್ದ. ತನಗೆ ತಕ್ಕಂತೆ ಆಕೆ ಕುಣಿಯಲಿಲ್ಲ ಎಂದು ಮಲ್ಲೇಶ್ವರದ ಮೀನಾಕ್ಷಿ ಎಂಬಾಕೆಗೆ ಹೀರೋಯಿನ್ ಪಟ್ಟ ಕಟ್ಟಿ ಅರ್ಚನಾಳನ್ನು ಕೈಬಿಟ್ಟ.

ನಿರ್ಮಾಪಕ ಆನೇಕಲ್ ಬಾಲರಾಜ್‌ಗಿದು ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು. ಐವತ್ತು ಲಕ್ಷದ 'ಜನ್ನ' ಬಜೆಟ್ಟು ಒಂದು ಕೋಟಿಯಾದರೂ ಇನ್ನೂ ಅರ್ಧ ಸಿನಿಮಾ ಮುಗಿದಿಲ್ಲ. 'ಜನ್ನ' ಆದರ ಜನ್ಮಾಪಿ ಬಿಡುಗಡೆಯಾಗುವ ಲಕ್ಷಣಗಳಿಲ್ಲ. ಕೊನೆಕೊನೆಗೆ ಚಂದ್ರಚೂಡ್ ಯಾವ ಮಟ್ಟಕ್ಕಿಳಿದನೆಂದರೆ 'ಜನ್ನ'ದ ಸಹ ನಿರ್ದೇಶಕ ಪಿ. ಮಂಜು ಮತ್ತು ಕಲಾವಿದ ನಾಗರಾಜ್‌ರ ಬೈಕನ್ನೇ ಗಿರವಿಗಿಟ್ಟು ದುಡ್ಡು ತಿಂದ. ಬೈಕನ್ನು ಕಳಕೊಂಡ ಅವರಿಬ್ಬರೂ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಬಂದು ಚಂದ್ರಚೂಡ್ ವಿರುದ್ಧ ದೂರು ಕೊಡುವ ಮಟ್ಟಕ್ಕೆ ಬರಬೇಕಾಯಿತು.



ಚಂದ್ರಚೂಡ್‌ಗೆ ವಂಚನೆ ಬಿಟ್ಟರೆ ಸಿನಿಮಾದ ಕಾಗುಣಿತವೇ ಗೊತ್ತಿಲ್ಲ. ಆನೇಕಲ್ ಬಾಲರಾಜ್‌ಗೆ ಸಿನಿಮಾನೇ ಮುಖ್ಯ ಕಸುಬೇನಲ್ಲ. ಅದು ಬಿಟ್ಟರೆ ಚಂದ್ರಚೂಡ್ ಮತ್ತೊಂದು ಸಿನಿಮಾಕ್ಕೆ ಕೈಇಟ್ಟ ಸುಳಿವಿಲ್ಲ. ತನ್ನ ತಮ್ಮ ಭರತ್ ಎಂಬಾತನನ್ನೇ ಹೀರೋ ಮಾಡ್ತೀನಿ ಎಂದು ಮೂರು ವರ್ಷಗಳ ಕಾಲ ಆತನಿಂದ ಚಾಕರಿ ಮಾಡಿಸಿಕೊಂಡು ಮನೆಯಿಂದ ಹೊರಗಟ್ಟಿದ್ದಾನೆ ಚಂದ್ರಚೂಡ್. ಒಡಹುಟ್ಟಿದ ತಮ್ಮನನ್ನೇ ವಂಚಿಸಿದವನಿಗೆ ಗೆಳೆಯರೇನು ಲೆಕ್ಕ? ಕೈಹಿಡಿದವಳೇನು ಲೆಕ್ಕ?

ತನ್ನ ವಿಕೃತಿಯನ್ನು ಮುಚ್ಚಿಕೊಳ್ಳಲು ಶ್ರುತಿ "ಚಂದ್ರಚೂಡ್ ತನ್ನ ಬಾಲ್ಯದ ಗೆಳೆಯ" ಎನ್ನುತ್ತಿದ್ದಾಳೆಯೇ ಹೊರತು ಆಕೆಗೆ ಈತ ಪರಿಚಯವಾಗಿದ್ದೇ ನಿನ್ನೆ ಮೊನ್ನೆ. ಅದೂ ಪತಿ ಮಹೇಂದರ್‌ಗೆ ಚೇಲಾ ಆಗಿದ್ದು ಡೈರೆಕ್ಷನ್ ಕಲಿಯಲು ಬಂದವನೊಬ್ಬ ತನ್ನ ಗುರುವನ್ನೇ ಮನೆಯಿಂದ ಹೊರದಬ್ಬಿ ಆತನ ಪತ್ನಿಗೇ ಗಂಡನಾಗುತ್ತಾನೆಂದರೆ ಚಂದ್ರಚೂಡ್ ಇನ್ನೆಂಥಾ ಖಾಖಂದಿ?

ಶ್ರುತಿಗಿದು ಖಂಡಿತಾ ಅರ್ಥವಾಗಲಿದೆ. ಅಂಥಾ ಮಹೇಂದರ್‌ನನ್ನೇ ತೊರೆದವಳಿಗೆ ಚಂದ್ರಚೂಡನಂಥ ಖಟಿಂಗನನ್ನು ಉಗಿದಟ್ಟುವುದು ಎಷ್ಟು ಹೊತ್ತು?


ಸದಾನಂದಗೌಡರೆ.... ಇದು ಅವಮಾನ ಅಲ್ಲವಾ?

ಮೂರೂ ಬಿಟ್ಟೋರು ...ರಿಗೆ ದೊಡ್ಡೋರು ಅನ್ನೋ ...ತು ಈ ಬಜೆಪಿಗಳಿಗೆ ...ಳಿಮಾಡಿಸಿದಂತಿದೆ.

... ಶ್ರುತಿ ಡೈವೋರ್ಸ್ ಬಗ್ಗೆ ...ಕ್ರಿಯೆ ಕೊಡುತ್ತಾ ಬಜೆಪಿ ...ಕ್ಷ ಸದಾನಂದಗೌಡ ...ರಿಂದ ಪಕ್ಷದ ಘನತೆಗೆ ಪೆಟ್ಟು ...ಸುತ್ತದೆ, ನಾವು ಶ್ರುತಿಯನ್ನು ...ಂದ ಹೊರಹಾಕುತ್ತೇವೆ" ...ಮ ವಾರ್ನಿಂಗ್ ಕೂಡ ...ಟ್ಟಿದ್ದಾರೆ. ಆಮೇಲೆ ಯಾವಾಗ ... ಯದ್ವಾತದ್ವಾ ಉಗಿಯಲು ...ಮಾಡಿದರೋ ಸಮತಾ ...ಸ್ಕೃತಿಕ ಸಂಸ್ಥೆಯ ಎಂ.ಟಿ. ...ಷ್ಕಂದ್ರ ಪ್ರತಿಭಟಿಸುವ ಬೆದರಿಕೆ ...ಕಿದರೋ ಆಗ ಗೌಡರಿಗೆ ...ಯೋದಯವಾಗಿ "ಇದು ...ಯ ವೈಯಕ್ತಿಕ ವಿಚಾರ" ...ಮ ಜಾರಿಕೊಂಡಿದ್ದಾರೆ.


ರೇಣುಕಾ-ಜಯಲಕ್ಷ್ಮಿ


ಯಡ್ಡಿ-ಮೈತ್ರಾದೇವಿ


ಪದ್ಮಪ್ರಿಯಾ-ರಘುಪತಿಭಟ್

ಆದರೂ ಇಲ್ಲಿ ಕೇಳಬೇಕಾದ ಪ್ರಶ್ನೆ ಏನೆಂದರೆ

ಪಕ್ಷದ ಒಬ್ಬಾಕೆ ಗಂಡನಿಗೆ ಡೈವೋರ್ಸ್ ಕೊಡುವುದೇ ಅಪಚಾರ ಎನ್ನುವುದಾದರೆ ಅದೇ ಬಜೆಪಿಯ ಗಂಡಸರು ಹಾದರ ಮಾಡುವುದು ಹೆಮ್ಮೆಯಾ ಅಂತ?

ಈಗ ಮೂರು ಲೋಕಕ್ಕೂ ಗೊತ್ತಿರುವ ನರ್ಸ್ ರೇಣುಕನ ಹೆಣ್ಣುಬಾಕತನದ ಬಗ್ಗೆ ಇದೇ ಬಜೆಪಿಗಳು ಯಾವ ಶಿಸ್ತಿನ ಕ್ರಮ ತೆಗೆದುಕೊಂಡಿದ್ದರು?

ನರ್ಸ್ ಜಯಲಕ್ಷ್ಮಿ ಜೊತೆ ಅರೆಬೆತ್ತಲಾಗಿ ಫೋಟೋ ತೆಗೆಸಿಕೊಂಡು ಸಿಕ್ಕಿಬಿದ್ದರೂ ಬಜೆಪಿಗಳು ಚೂರೂ ತಲೆ ಕೆಡಿಸಿಕೊಳ್ಳದೆ ಅದೇ ಕಚ್ಚೇಹರುಕನನ್ನು ಈಗ ಹಟ್ಟಿ ಚಿನ್ನದ ಗಣಿ ಚೇರ್ಮನ್ ಮಾಡಿದ್ದಾರೆ.

ಪದ್ಮಪ್ರಿಯಳನ್ನು ಕೊಂದ ಉಡುಪಿ ಶಾಸಕ ಭಟ್ಟನಿಗೆ ಊರು ತುಂಬಾ ಹೆಂಗಸರ ಸಂಬಂಧವಿದ್ದರೂ ಆಗ ಯಾವ ರಾಮ ಭಕ್ತನೂ ಶಿಸ್ತಿನ ವಿಚಾರ ಎತ್ತಿರಲಿಲ್ಲ, ಸ್ವತಃ ಯಡಿಯೂರಪ್ಪನ ಪತ್ನಿ ಮೈತ್ರಾದೇವಿ ನಿಗೂಢವಾಗಿ ಸತ್ತರೂ ಈಗ ಆತನ ಅಂತಃಪುರದಲ್ಲಿ ಕೆಲ ಮಹಿಳಾಮಣಿಗಳು ಕಾಣಿಸಿಕೊಳ್ಳುತ್ತಿದ್ದಾಗಲೂ ಇವರಿಗೆ ಶಿಸ್ತು ನೆನಪಾಗಲಿಲ್ಲವೇಕೆ?

ಬಜೆಪಿಯ ರಿಯಲ್ ಎಸ್ಟೇಟ್ ಕುಳ ಬಿಟಿಎಂ ಲೇಔಟಿನ ಪ್ರಸಾದ್ ರೆಡ್ಡಿ ಮೊನ್ನೆ ತಾನೆ ನಟಿಯೊಬ್ಬಳ ಜೊತೆ ಸಿಂಗಪೂರ್‌ಗೆ ಹೋಗಿ ಡಿಂಗ್‌ಡಾಂಗ್ ನಡೆಸಿ ಬಂದಿದ್ದಾನೆ. "ಅವಳಿಗೆ ಒಂದು ವಾರಕ್ಕೆ 12 ಲಕ್ಷ ಕೊಟ್ಟೆ" ಎಂದು ಮೀಸೆ ತಿರುವುತ್ತಾ ಹೇಳಿಕೊಳ್ಳುತ್ತಿದ್ದಾನೆ.

ಇದು ಬಜೆಪಿಗಳಿಗೆ ಅವಮಾನ ಅನ್ನಿಸುತ್ತಿಲ್ಲ.

ಸದಾನಂದಗೌಡರು ಮಾತಿಗೆ ಮುಂಚೆ ಹಲ್ಲು ಕಿರಿಯುತ್ತಾ ಶಿಸ್ತು ಘನತೆ ಎಂದು ಬೊಗಳೆ ಮಾತಾಡುವ ಬದಲಾಗಿ ಅವರ ಪಾರ್ಟಿಯ ಕೆಲ ಶಾಸಕ ಮಂತ್ರಿಗಳು ಬೆಂಗಳೂರಿನಲ್ಲಿ, ಹುಬ್ಬಳ್ಳಿಯ ಐಬಿಯಲ್ಲಿ ಯಾವ್ಯಾವ ನಟಿಯರು, ಮಾಡೆಲ್‌ಗಳೊಂದಿಗೆ ಹೈಟೆಕ್ ವೇಶ್ಯಾಜಾಲದೊಂದಿಗೆ ವ್ಯವಹಾರ ನಡೆಸುತ್ತಿದ್ದಾರೆಂಬುದನ್ನು ಮೊದಲು ನೋಡಲಿ.

ಈ ಬಜೆಪಿಗಳ ತಟ್ಟೆಯಲ್ಲಿ ಕತ್ತೆಯೇ ಸತ್ತು ಬಿದ್ದಿದ್ದರೂ ಶ್ರುತಿ ತಟ್ಟೆಯಲ್ಲಿನ ನೊಣದ ಬಗ್ಗೆ ಮಾತ್ರ ಮಾತಾಡಿದರೆ ಜನ ನಗುವುದಿಲ್ಲವಾ ಅಂತ? ●

... ಪ್ರಚಾರ ಕೊಡಿಸ್ತೀನಿ ಎಂದು ಜೆಡಿಎಸ್ ನಾಯಕ ... ಬಾಬು ಬಳಿ ದುಡ್ಡು ಕಿತ್ತ, ತನ್ನ ಜಾತಿಯವನು ...ೇ ಕಾರಣಕ್ಕೆ ತಮ್ಮ ನಾಗರಬಾವಿಯ ಮನೆಯನ್ನೇ ...ಕೊಟ್ಟ ನಂಜುಂಡಿಗೆ 'ನಾನೇ ನಿಂತು ನಿಮ್ಮ ...ರ್ಮ ಪತ್ರಿಕೆ ಮಾಡಿಕೊಡ್ತಿನಿ' ಎಂದು ಚಂದ್ರಚೂಡ್ ...ಸಿದ್ದ. ಬಾಡಿಗೆಯನ್ನೂ ಕೊಡದೆ ಇತ್ತ ಪತ್ರಿಕೆಯನ್ನೂ ...ದೇ ಅಂಡಲೆದುಕೊಂಡಿದ್ದ ಈತನನ್ನು ಮನೆ ಖಾಲಿ ...ಸಲು ನಂಜುಂಡಿಯೇ ನಿಂತು ಈತನ ಮನೆಯ ... ಕುರ್ಚಿಗಳನ್ನೆಲ್ಲ ಲಾರಿಗೆ ತುಂಬಿಸಿದ್ದ.

...ೂನೆಗೂ ಒಂದಷ್ಟು ಬಾಡಿಗೆ ಕೊಟ್ಟು ಅಡ್ವಾನ್ಸಿಲ್ಲದ ...ಂಡಿಯ ಮನೆಗೇ ಗಂಟುಬಿದ್ದವನು ಚೋರ ...ಮಣಿ ಚಂದ್ರಚೂಡ.

...ವತ್ತಿಗೂ ಈತನ ಮನೆ ಖರ್ಚು ನೋಡಿಕೊಳ್ಳುತ್ತಿರು... ಈತನ ಪತ್ನಿ ಮಂಜುಳಾಳೇ ಹೊರತು ಈತನಕ ...ಪೈಸೆ ಕೊಟ್ಟವನಲ್ಲ, ಶ್ರುತಿಯ ಪತಿ ಮಹೇಂದರ್‌ಗೆ ...ಲಿಸಿದರೆ ರೂಪದಲ್ಲಾಗಲಿ, ಘನತೆಯಲ್ಲಾಗಲಿ, ...ನಲ್ಲಾಗಲಿ, ವ್ಯಕ್ತಿತ್ವದಲ್ಲಾಗಲಿ, ಅವರ ಪಾದ ಧೂಳಿಗೂ ...ಚೂಡ್ ಸಮನಲ್ಲ. ಅಂಥವನನ್ನು ತನ್ನ ಬಾಲ್ಯದ ..., ಕೆರೆ ಕಟ್ಟಿಸಿದ್ದಾನೆ, ಕಷ್ಟಕ್ಕೆ ನೆರವಾದ ಎಂದು ...ಹೇಳುತ್ತಿದ್ದಾಳಲ್ಲ; ಅದರಲ್ಲಾದರೂ ಸತ್ಯವಿದೆಯೆ?

...ಾಸ್ತವವೆಂದರೆ ಈತ ಶ್ರುತಿಗೆ ಪರಿಚಯವಾಗಿದ್ದೇ ...ಂದರ್ ಮೂಲಕ. ಆನೇಕಲ್ ಬಾಲರಾಜ್ ಮಗನನ್ನು ...ೀ ಮಾಡಿ 'ಜನ್ಮ' ಎಂಬ ಚಿತ್ರಕ್ಕೆ ಈತ ವಕ್ಕರಿಸುವ ...ಮುನ್ನ ತನಗೆ ವಿದ್ಯೆ ಕಲಿಸಿ ಎಂದು ಮಹೇಂದರ್‌ಗೆ ...ಬಿದ್ದ. ಏನೋ ವಿದ್ಯೆ ಕಲಿಯುವ ಆಶೆಯಿಂದ ...ರೆಯುತ್ತಿದ್ದಾನೆ ಎಂದು ಮಹೇಂದರ್ ಜೊತೆಗಿಟ್ಟು...ಂಡಿದ್ದಾರೆ. ತಮ್ಮ 'ಅಕ್ಕತಂಗಿ' ಚಿತ್ರದುದ್ದಕ್ಕೂ ಈತನನ್ನು ... ಹಾಕಿಕೊಂಡೇ ಸಿನಿಮಾ ಮುಗಿಸಿದ್ದಾರೆ.

...ದರೆ ಚಂದ್ರಚೂಡ್ ಈ ಹೊತ್ತಿಗಾಗಲೇ ...ರ್ಯಯಾಗಿ ಗೆಟಪ್ಪು ಬದಲಿಸಿದ್ದ. ನಂಬಿಕಸ್ತ ಚೇಲಾನಂತೆ ನಟಿಸುತ್ತಲೇ ಗುರುವಿನ ಪತ್ನಿಯ ಮೇಲೇ ಕಣ್ಣು ಹಾಕಿದ. 'ನಾನೂ ಕೂಡ ವಿಶ್ವಕರ್ಮದ ಜಾತಿಯವನೇ. ನಿಮ್ಮ ಸ್ಟಾರ್ ವ್ಯಾಲ್ಯೂ ನೋಡೇ ಬಜೆಪಿಯವರು ಬೆಲೆ ಕೊಡುತ್ತಿದ್ದಾರೆಯೇ ಹೊರತು ಮಹೇಂದರ್ ಲೆಕ್ಕಕ್ಕಿಲ್ಲ. ಮಹೇಂದರ್ ಏನಿದ್ದರೂ ನಿಮ್ಮ ಹೆಸರಲ್ಲಿ ಬದುಕಬೇಕೇ ಹೊರತು ಆತನ ಬಳಿ ಏನಿದೆ? ದುಡ್ಡಿದೆಯಾ? ಪ್ರತಿಭೆ ಇದೆಯಾ?' ಎಂದು ಶ್ರುತಿಯ ತಲೆ ಕೆಡಿಸಿದ್ದಾನೆ.

ಅದೇ ಹೊತ್ತಿಗೆ ತಾನೊಬ್ಬ ಗ್ರೇಟ್ ಡೈರೆಕ್ಟರ್‌ನಂತೆ ಪೋಜು ಕೊಟ್ಟಿದ್ದಾನೆ. ತಾನು ಹಾಸನದಲ್ಲಿ ಕೆರೆ ಕಟ್ಟಿಸಿದ್ದೀನಿ, ಪುಸ್ತಕ ಬರೆದಿದ್ದೀನಿ, ಸಾವಿರಾರು ಜನರನ್ನು ಸೇರಿಸಿ ಹೋರಾಟ ಮಾಡಿದ್ದೀನಿ ಎಂದೆಲ್ಲ ನಂಬಿಸಿದ್ದಾನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೊಳ್ಳೇಗಾಲದಿಂದ ಬಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಹೇಂದರ್ ದೌರ್ಭಾಗ್ಯವೆಂಬಂತೆ ಸೋತಿದ್ದಾರೆ. ಕೂಡಿಟ್ಟಿದ್ದ ದುಡ್ಡೂ ಕೈಬಿಟ್ಟಿದೆ. ತುಂಬ ನಿರೀಕ್ಷೆಯಿಟ್ಟು ಮಾಡಿದ 'ಅಕ್ಕತಂಗಿ' ಚಿತ್ರವೂ ನೆಲಕಚ್ಚಿದೆ. ಇಷ್ಟಾಗುತ್ತಿದ್ದಂತೆ ಶ್ರುತಿಯ ಲಕ್ಕು ಕುದುರಿದೆ. ಮಂತ್ರಿ ಆರ್. ಅಶೋಕ್ ಶ್ರೀರಕ್ಷೆ ಮೊದಲೇ ಇತ್ತಾದ್ದರಿಂದ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷೆಯಾಗಿದ್ದಾಳೆ. ಚಂದ್ರಚೂಡ್ ಅಲಿಯಾಸ್ ಚಕ್ರವರ್ತಿಯೇ ಶ್ರುತಿಯ ಪಾಲಿಗೆ ಪತ್ರಿಕಾ ಕಾರ್ಯದರ್ಶಿ, ಪಿಎ, ಬಲಗೈ ಬಂಟ ಎಲ್ಲವೂ ಆಗಿಬಿಟ್ಟ. ಅಲ್ಲಿಂದಲೇ ಮಹೇಂದರ್‌ಗೆ ಗುಮಾನಿ ಶುರುವಾಗಿದೆ.

ಈ ಮಧ್ಯೆ ಶ್ರುತಿ-ಚಂದ್ರಚೂಡ್ ಮಾಡಿಕೊಂಡ ಯಡವಟ್ಟೆಂದರೆ ಮೊನ್ನೆಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪರ ಪ್ರಚಾರಕ್ಕೆಂದು ಹೊಂಟವರು ಕಾರಿನೊಳಕ್ಕೆ ಇಳಕೊಂಡಿದ್ದು ಲಾಡ್ಜು ಎಲ್ಲೆಂದರಲ್ಲಿ ಚಕ್ಕಂದ ಶುರು ಹಚ್ಚಿಕೊಂಡಿದ್ದು. ಇದನ್ನೆಲ್ಲ ರಹಸ್ಯವಾಗಿ ಹಿಂಬಾಲಿಸುತ್ತಿದ್ದ ಆಸಾಮಿಯೊಬ್ಬ ತನ್ನ ಸೆಲ್‌ಫೋನಿನ ಕ್ಯಾಮೆರಾದಲ್ಲಿ ಸೆರೆಹಿಡಿದುಬಿಟ್ಟ. ಅದನ್ನು ಒಂದಿಬ್ಬರು ವರದಿಗಾರರಿಗೂ ಕೊಟ್ಟ. ಆ ವರದಿಗಾರರು ನೇರವಾಗೇ ಶ್ರುತಿಯನ್ನು ಕೆಣಕಿದ್ದಾರೆ. ಇನ್ನೆಲ್ಲಿ ತಮ್ಮ ಸರಸ-ಸಲ್ಲಾಪದ ಫೋಟೋಗಳು ಪತ್ರಿಕೆಗಳಲ್ಲಿ ಅಚ್ಚಾಗುತ್ತದೋ ಎಂದು ಹೆದರಿದ ಶ್ರುತಿ ಅವಸರವಸರವಾಗಿ ಡೈವೋರ್ಸ್ ಅರ್ಜಿ ಹಾಕಿದ್ದಾಳೆ. ಅದನ್ನೇ ಪತ್ರಿಕೆಗಳಲ್ಲಿ ಸುದ್ದಿಯಾಗುವಂತೆ ಮಾಡಿದ್ದಾಳೆ. ಅಷ್ಟೇ ಗಾಬರಿಯಲ್ಲಿ ತಾನು ಚಕ್ರವರ್ತಿ ಉರ್ಫ್ ಚಂದ್ರಚೂಡ್‌ನನ್ನು ತಿರುಪತಿಯಲ್ಲಿ ಮದುವೆಯಾಗಿದ್ದೇನೆಂದು ಪುಕಾರೆಬ್ಬಿಸಿದ್ದಾಳೆ.

ಶ್ರುತಿ ಆತುರಾತುರವಾಗಿ ಹಾಕಿದ ಡೈವೋರ್ಸ್ ಅರ್ಜಿ, ಮಹೇಂದರ್ ವಿರುದ್ಧ ಆಕೆ ಕೊಟ್ಟ ಕಾರಣಗಳು ಅಷ್ಟೇ ಆತುರಕ್ಕೆ ಬಿದ್ದು ಮದುವೆಯಾದ ರೀತಿಯನ್ನು ಲೆಕ್ಕ ಹಾಕಿದರೆ; ಅದು ತನ್ನ ಮತ್ತು ಚಂದ್ರಚೂಡ್ ಚಕ್ಕಂದದ ಫೋಟೋಗಳು ಅಚ್ಚಾಗದಂತೆ ತಡೆಗಟ್ಟುವ ಪಾಪಪ್ರಜ್ಞೆಯೇ ಹೊರತು ಬೇರೆ ಕಾರಣ ಗೋಚರಿಸುತ್ತಿಲ್ಲ.

ಹಾಗೊಮ್ಮೆ ಮಹೇಂದರ್ ದುಡ್ಡೂಕಾಸಿನ ತಾಪತ್ರಯಕ್ಕೆ ಬಿದ್ದಿದ್ದೇ ಆಗಿದ್ದರೆ ಅದೊಂದೇ ಕಾರಣಕ್ಕೆ ಅಂಥ ಗಂಡನನ್ನು ತೊರೆದು ಬಿಡುವುದಾ? ಶ್ರುತಿ-ಮಹೇಂದರ್ ಸಂಬಂಧ ಕೇವಲ ದುಡ್ಡೂಕಾಸಿನ ಪ್ರಶ್ನೆಯಾಗಿತ್ತಾ? ಯಾರೇ ಪತಿಯೊಬ್ಬ ಕಷ್ಟಕ್ಕೆ ಸಿಲುಕಿದ್ದಾನೆಂಬ ಒಂದೇ ಕಾರಣಕ್ಕೆ ಪತ್ನಿಯಾದವಳು ಬೇರೊಬ್ಬನ ಸಂಗಕ್ಕೆ ಬೀಳುವುದು ನ್ಯಾಯವಾ? ತಮಾಷೆಯೆಂದರೆ ಯಾವ ಮಹೇಂದರ್ ಕೈಯಲ್ಲಿ ಕಾಸಿಲ್ಲವೆಂದು ಶ್ರುತಿ ಆತನನ್ನು ಪರಿತ್ಯಜಿಸುತ್ತಾಳೋ; ಈಗ ಗಂಟುಬಿದ್ದ ಚಂದ್ರಚೂಡನಾದರೂ ಎಂಥವನು? ನೆಟ್ಟಗೆ ಮನೆ ಬಾಡಿಗೆಯನ್ನೂ ಕಟ್ಟಲಾಗದ ಛಪ್ಪರ್ ಗಿರಾಕಿ. ಶ್ರುತಿಯಂಥ ನಟಿಯೊಬ್ಬಳು ಸಿಕ್ಕಳೆಂದು ತಾನೇ ಪ್ರೀತಿಸಿ ಮದುವೆಯಾದ ಪತ್ನಿಯನ್ನು ನಡುನೀರಿನಲ್ಲಿ ಕೈಬಿಡುವವನು. ತನ್ನದೇ ಸ್ವಂತ ಮಗುವನ್ನು ತೊರೆದು ಇನ್ನಾರದೋ ಮೋಹಕ್ಕೆ ಈಡಾದವನು ಇನ್ನು ಶ್ರುತಿಯ ಮಗಳನ್ನು ಪ್ರೀತಿಸುವುದುಂಟಾ?

ಕಷ್ಟಕ್ಕೆ ಸಿಲುಕಿದನೆಂಬ ಒಂದೇ ಕಾರಣಕ್ಕೆ ಗಂಡನನ್ನು ಪರಿತ್ಯಜಿಸುವ ಶ್ರುತಿ, ನಟಿಯೊಬ್ಬಳು ಸಿಕ್ಕಳೆಂದು ತಾನೇ ಪ್ರೀತಿಸಿ ಮದುವೆಯಾದ ಮಡದಿ ಮತ್ತು ಮಗುವನ್ನು ಬೀದಿಗೆ ಹಾಕುವ ಚಂದ್ರಚೂಡ್; ಇಬ್ಬರೂ ಮನುಷ್ಯ ಸ್ವಾರ್ಥದ ಪ್ರತಿಬಿಂಬಗಳಂತಿಲ್ಲವೆ?

■ ಸಾವಂತ್ರಿ

ಶ್ರುತಿ, ಮಗು ಗೌರಿ ಮತ್ತು ತಂದೆ-ತಾಯಿಯರೊಂದಿಗೆ.....



ಇಲ್ಲಿ ಕಣ್ಣೀರು ಅಲ್ಲಿ ಹನಿಮೂನು!

ಶ್ರುತಿ ವಿಚ್ಛೇದನ ಅರ್ಜಿಯನ್ನು ಕೋರ್ಟ್‌ಗೆ ಸಲ್ಲಿಸಿದ ನಂತರ ಆಕೆಯ ಅಣ್ಣ ಶರಣ್ ಆಗಲೀ, ತಂದೆ ಮತ್ತು ಇಬ್ಬರು ತಾಯಂದಿರಾಗಲೀ ಯಾಕೆ ಎಲ್ಲೂ ಏನೂ ಪ್ರತಿಕ್ರಿಯೆಗಳನ್ನು ನೀಡಿಲ್ಲ? ಶ್ರುತಿಯ ಈ ನಿರ್ಧಾರವನ್ನು ಆಕೆಯ ತಂದೆ-ತಾಯಂದಿರು ಬೆಂಬಲಿಸಿದ್ದಾರೆಯೇ? ಅಥವಾ ಮಗಳಿಗೆ ಬುದ್ಧಿವಾದ ಹೇಳಿದ್ದಾರೆಯೇ? ಎಂಬೆಲ್ಲ ಪ್ರಶ್ನೆಗಳ ಬಗ್ಗೆ ಅನೇಕರಿಗೆ ಒಂದು ರೀತಿಯ ಕೆಟ್ಟ ಕುತೂಹಲವಿತ್ತು.

ಒಂದು ಮೂಲದ ಪ್ರಕಾರ ಶ್ರುತಿಯ ಡೈವರ್ಸ್ ಸುದ್ದಿ ಕೇಳಿ ಆಕೆಯ ತಂದೆ ಮತ್ತು ಇಬ್ಬರು ತಾಯಂದಿರು ಶಾಕ್ ಆದರಂತೆ. ಟಿವಿಯಲ್ಲಿ ಬರುತ್ತಿದ್ದ ಸುದ್ದಿ ಮತ್ತು ಸಂದರ್ಶನಗಳನ್ನು ನೋಡುತ್ತಾ ಒಂದೇ ಸಮನೆ ಅಳುತ್ತಿದ್ದರಂತೆ. ಈ ದುಃಖದಿಂದಾಗಿ ಎಲ್ಲಿ ಅವರ ಆರೋಗ್ಯ ಕೆಡುತ್ತದೋ ಎಂದು ಹೆದರಿದ ಶರಣ್ ಕೂಡಲೇ ಅವರೆಲ್ಲ ಇರುವ ಮನೆಗೆ ಹೋಗಿ ಅಪ್ಪ-ಅಮ್ಮಂದಿರ ಆರೋಗ್ಯದ ಜವಾಬ್ದಾರಿಯನ್ನು ವಹಿಸಿಕೊಂಡರಂತೆ. ಮೂರು ದಿನಗಳ ಕಾಲ ಅವರ ಮೇಲೆ ಶರಣ್ ಕಣ್ಣಿಟ್ಟಿದ್ದರಂತೆ. ಆ ವೃದ್ಧರು ಈ ಸುದ್ದಿಯಿಂದ ಸುಧಾರಿಸಿಕೊಂಡ ನಂತರವೇ ಶರಣ್ ಮತ್ತೆ ತಮ್ಮ ಕೆಲಸಕ್ಕೆ ಹಿಂದಿರುಗಿದರಂತೆ.

ಆದರೆ ಶ್ರುತಿಯ ಪ್ರಕಾರ ತನ್ನ ಈ ನಿರ್ಧಾರದೊಂದಿಗೆ ತನ್ನ ತಂದೆ, ತಾಯಿ, ಅಣ್ಣ ಮತ್ತು ತಂಗಿಯ ಸಮ್ಮತಿ ಇದೆ.

ಇನ್ನು ಆಕೆ ತೊರೆದಿರುವ ಮಹೇಂದರ್ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಶ್ರುತಿ-ಮಹೇಂದರ್ ವಿಚ್ಛೇದನದ ಸುದ್ದಿ ಟಿವಿಯಲ್ಲಿ ಬಂದಾಕ್ಷಣ ಮಹೇಂದರ್ ತಾಯಿ ತೀವ್ರ ಅನಾರೋಗ್ಯಕ್ಕೆ ಬಿದ್ದುಬಿಟ್ಟರು. ಇದು ಗೊತ್ತಾದ ಕೂಡಲೇ ಮುತ್ತು ಕೊಟ್ಟವಳು ಓಡಿಹೋದಳು; ತುತ್ತು ಕೊಟ್ಟವಳನ್ನಾದರೂ ಉಳಿಸೋಣ ಎಂದು ಮಹೇಂದರ್ ಕೊಳ್ಳೇಗಾಲದ ತನ್ನ ಹಳ್ಳಿಗೆ ಹೋಗಿ ತಾಯಿಯ ಸೇವೆಗೆ ನಿಂತರು. ವಿಚ್ಛೇದನೆಯಿಂದಾಗಿ ತನ್ನ ಮಗ ಎಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೋ ಎಂಬ ಆತಂಕದಲ್ಲಿದ್ದ ಆ ತಾಯಿ ತನ್ನ ಮಗನನ್ನು ನೋಡಿದ ನಂತರ ಚೇತರಿಸಿಕೊಂಡರಂತೆ.

ಹೀಗೆ ಎರಡೂ ಮನೆಯಲ್ಲಿ ಮೂರು ಹಿರಿಯ ಜೀವಗಳು ಒದ್ದಾಡುತ್ತಿದ್ದಾಗ ಶ್ರುತಿ ಮಾತ್ರ ತನ್ನ ಎರಡನೇ ಹನಿಮೂನ್ ಪ್ರವಾಸದಲ್ಲಿದ್ದಳು. ●


...ಚೂಡನ 'ಉತ್ತರ'ಕ್ಕೆ ಶ್ರುತಿ ಮುನ್ನುಡಿ!

ಕಳೆದೆರಡು ವಾರಗಳಿಂದ ಮಾಧ್ಯಮಗಳ ಕೇಂದ್ರಬಿಂದುವಾಗಿರುವ ನಟಿ ಶ್ರುತಿ ಮತ್ತಾಕೆಯ ಚೋದ್ ಪ್ರಿಯಕರ ...ದ್ರಚೂಡ್ ಈಗೇನು ಮಾಡುತ್ತಿದ್ದಾರೆ? ಈ ಪ್ರಶ್ನೆಯನ್ನು ಚಕ್ರವರ್ತಿ ಅಲಿಯಾಸ್ ಚಂದ್ರಚೂಡನನ್ನೇ ...ಳಿದರೆ ಆತ "ಪುಸ್ತಕ ಬರೀತಿದ್ದೀನಿ" ಅಂತ ಉತ್ತರ ಕೊಡುತ್ತಿದ್ದಾನೆ.

ಮಹೇಂದರ್‌ಗೆ ಸೋಡಾ ಚೀಟಿ ನೀಡಿದ್ದರಿಂದ ಈಗ ಕೆಲವರು ಶ್ರುತಿ ಬಗ್ಗೆ ಇಲ್ಲಸಲ್ಲದ್ದನ್ನು ...ತನಾಡುತ್ತಿದ್ದಾರೆ, ಇದೆಲ್ಲ ಆಕೆಯ ಸಾಮಾಜಿಕ ಇಮೇಜ್‌ಗೆ ಧಕ್ಕೆ ತರುತ್ತದೆ, ಆಕೆಯ ವೃತ್ತಿ ...ದುಕಿನ ಮೇಲೆ ಪರಿಣಾಮ ಬೀರಲಿದೆ, ಇದು ಹೀಗೇ ಮುಂದುವರಿದರೆ ಸಮಾಜದಲ್ಲಿ ಶ್ರುತಿಗೆ ...ಾಸೆಯ ಮರ್ಯಾದೆಯೂ ದೊರೆಯುವುದಿಲ್ಲ ಎಂದು ಚಂದ್ರಚೂಡ್ ಆತಂಕಗೊಂಡಿದ್ದಾನೆ. ...ದ್ದರಿಂದ ಹೀಗಾಗಿ ಶ್ರುತಿಯ ಬದುಕಿನಲ್ಲಿ ಆದದ್ದನ್ನು, ಆಕೆಯ ಸಾಂಸಾರಿಕ ಬದುಕಿನ ಒಳಗುಟ್ಟುಗಳನ್ನು ...ಮಾಸ ಪುಸ್ತಕವೊಂದನ್ನು (ಕುಖ್ಯಾತ) ಲೇಖಕನೂ ಆಗಿರುವ ಶ್ರೀಮಾನ್ ಚೂಡ್ ಚಕ್ರವರ್ತಿಗಳು ...ರೆಸಲಿದ್ದಾರಂತೆ.

ಅರೇಬಿಕ್ ಸಾಹಿತ್ಯ ಶೈಲಿಯಲ್ಲಿ ರೂಪುಗೊಳ್ಳಲಿರುವ ಈ ಪುಸ್ತಕದ ಗದ್ಯದ ಮಧ್ಯೆ ಚೂಡ್ ...ರುವ ಹುಬ್ಬಾರು ಶಾಯರಿಗಳೂ ಇರುತ್ತವಂತೆ. ಕೂಸು ಹುಟ್ಟುವ ಮೊದಲೇ ಕುಲಾವಿ ...ಲಿದ ಹಾಗೆ ಈ ಮಹಾನ್ ಗ್ರಂಥಕ್ಕೆ 'ಜಗತ್ತಿಗೊಂದು ಉತ್ತರ' ಎಂಬ ಶಿರೋನಾಮೆಯನ್ನೂ ...ಡೆ ಚೂಡ್‌ಚಕ್ರಿ.

ಇಷ್ಟೇ ಅಲ್ಲ, ಈ ಕೃತಿಗೆ ಸ್ವತಃ ಶ್ರುತಿ ಮೇಡಂ ಅವರೇ ಮುನ್ನುಡಿಯನ್ನೂ ಬರೆಯಲಿದ್ದಾರಂತೆ! ...ತನ ಇಂಥ ತರಹೇವಾರಿ ಹುಟ್ಟುಗಳನ್ನು ಕಂಡೂ 'ಹಗಲು ಕಂಡ ಬಾವಿಗೆ ರಾತ್ರಿ ಬೀಳಲು' ಹೊರಟಿರುವ ... ಶ್ರುತಿಗೆ ಭಗವಂತನಿಂದಲೂ ಬುದ್ಧಿ ಹೇಳಲು ಸಾಧ್ಯವಿಲ್ಲ! ●



ಡೊಂಕು ಬಾಲಕ್ಕೆ ಚೆತ್ತ!


"ಶ್ರುತಿಯನ್ನೇ ನನ್ನ ಅರ್ಧಾಂಗಿಯಾಗಿ ಸ್ವೀಕರಿಸಬೇಕೆಂಬುದು ನನ್ನ ದೃಢ ನಿಶ್ಚಯ. ನಾನು ಮೊದಲಿಗಿಂತ ಬಹಳ ಪ್ರಬುದ್ಧನಾಗಿರುವುದರಿಂದಲೇ ನಾನು ಈ ತೀರ್ಮಾನವನ್ನು ಸ್ವೀಕರಿಸಿದ್ದೇನೆ...." ಹೀಗೆ ಥೇಟು ಯೂನಿವರ್ಸಿಟಿ ಪ್ರೊಫೆಸರನ ಹಾಗೆ ಪಾಠ ಒಪ್ಪಿಸುವ ಚಂದ್ರಚೂಡನಿಗೆ ಶ್ರುತಿಯನ್ನು ಅರ್ಧಾಂಗಿಯಾಗಿ ಸ್ವೀಕರಿಸುವ ಯೋಗ್ಯತೆಯಿರಲಿ, ತನ್ನ ಮೈಮುಚ್ಚಿಕೊಳ್ಳುವ ಅಂಗಿಯನ್ನೂ ಖರೀದಿಸುವ ಸಣ್ಣ ತಾಕತ್ತೂ ಇಲ್ಲ.

ಮೊನ್ನೆ 'ಈ ಟಿವಿ'ಯ ಕಾರ್ಯಕ್ರಮಕ್ಕೆಂದು ಶ್ರುತಿ ಮತ್ತು ಚೂಡ್ ಸ್ಟುಡಿಯೋಗೆ ಹೋದಾಗ ಚಂದ್ರಚೂಡನ ಮೈಮೇಲೆ ಅದೆಂಥಾ ಕೊಳಕು ಬಟ್ಟೆಯಿತ್ತೆಂದರೆ, ಕಣ್ಣುಮುಂಗೇ ಅಷ್ಟು ಗಬ್ಬೆದ್ದಿದ್ದ ಆ ಅಂಗಿಯಲ್ಲಿ ಆತನನ್ನು ಟೀವಿ ಮುಂದೆ ಕಾಣಿಸುವ ಪ್ರಮೇಯವೇ ಇರಲಿಲ್ಲ, ಅದಾಗಲೇ ರಾತ್ರಿ ಹತ್ತು ಗಂಟೆ ಆಗಿದ್ದರಿಂದ ಅದೆಲ್ಲಿಂದ ಇವನಿಗೆ ಹೊಂದುವಂತಹ ಅಂಗಿಯನ್ನು ಹೊಂಚುವುದು? ಕಡೆಗೆ ಸ್ಟುಡಿಯೋದಲ್ಲಿದ್ದ ಸಂಚಿಕೆ ನಿರ್ದೇಶಕನ ಅಂಗಿಯನ್ನೇ ಬಿಚ್ಚಿ ಚೂಡನಿಗೆ ತೊಡಿಸಿ ಸಂದರ್ಶನವನ್ನು ನಡೆಸಲಾಯಿತು.

ಈ ನಾಲಾಯಕ್ಕು ಚಂದ್ರನೊಂದಿಗೆ ದೊಂಬರಾಟದವರಂತೆ ಚಾನೆಲ್‌ನಿಂದ ಚಾನೆಲ್‌ಗೆ ಬೋಳಿ ತಿರುಗುತ್ತಾ ಸಂದರ್ಶನಗಳನ್ನು ನೀಡುತ್ತಿರುವ ಶ್ರುತಿಗೆ ಈಗಾಗಲೇ ಚೂಡನ ಖಯಾಲಿಗಳು ರೇಜಿಗೆ ಹುಟ್ಟಿಸಿದಂತೆ ಕಾಣುತ್ತಿದೆ. ಆತ ಆಡುವ ಒಂದೊಂದು ಕಪಟೀಕ್ಯಗಳನ್ನು ವಿರೋಧಿಸಿ ಹಲ್ಲು ಮಸೆಯುತ್ತಾ, ತೊಡೆ ಗಿಲ್ಲುತ್ತಾ ಆತನ ಡೊಂಕು ಬಾಲಕ್ಕೆ ಬೆತ್ತ ಕಟ್ಟಲು ಹೊರಟಿರುವ ಶ್ರುತಿಯನ್ನು ನೋಡಿದರೆ ನಿಜಕ್ಕೂ ಅನುಕಂಪ ಹುಟ್ಟುತ್ತದೆ. ●

ಹುಬ್ಬಳ್ಳಿ ಅಂಜುಮನ್ ಎಲೆಕ್ಷನ್

ಮನೆದಾರಿ ಹಿಡಿಯಲಿರುವ ಹೊನ್ನಳ್ಳಿ


ಜಬ್ಬಾರ್ ಖಾನ್

ನೂರಾ ಆರು ವರ್ಷಗಳ ಇತಿಹಾಸ ಹೊಂದಿರುವ ಹುಬ್ಬಳ್ಳಿಯ ಅಂಜುಮನ್-ಎ-ಇಸ್ಲಾಂ ಸಂಘಟನೆಗೆ ಇದೇ ಮೇ 24ರಂದು ಚುನಾವಣೆ ನಿಗದಿಯಾಗಿದೆ. ಇಲ್ಲಿಯತನಕ ಮಾಡಬಾರದ ಕೆಲಸಗಳನ್ನು ಮಾಡುತ್ತಾ ಮುಸ್ಲಿಮ್ ಸಮುದಾಯಕ್ಕೆ ದ್ರೋಹ ಬಗೆಯುತ್ತಾ ಬಂದಿರುವ ಶಾಸಕ ಜಬ್ಬಾರ್‌ಖಾನ್ ಹೊನ್ನಳ್ಳಿ ತಾನು ಮತ್ತೆ ಗೆದ್ದೇ ಗೆಲ್ಲುತ್ತೇನೆಂಬ ಉಮೇದಿನಿಂದ ತೊಡೆತಟ್ಟಿ ಕಣಕ್ಕಿಳಿದಿದ್ದಾನೆ. ಇವನ ಹಿಟ್ಲರ್‌ಶಾಹಿ ಆಡಳಿತದಿಂದ ಬೇಸತ್ತಿರುವ ಎಂ.ಆರ್.ಮುಲ್ಲಾ ವಕೀಲ ಹಾಗೂ ಮಾಜಿ ಶಾಸಕ ಇಸ್ಮಾಯಿಲ್ ಕಾಲೆಬುಡ್ಡೆ ಅವನಿಗೆ ಗುಡ್‌ಬೈ ಹೇಳಿ ದೂರ ಸರಿದಿದ್ದಾರೆ.

"ಶಾದಿ ಮಹಲ್" ಅವ್ಯವಹಾರ ಮತ್ತು ಅಂಜುಮನ್ ಶಿಕ್ಷಣ ಸಂಸ್ಥೆಗಳಲ್ಲಿನ ಮನೆಮುರುಕ ಡೊನೇಷನ್ ಅವ್ಯವಹಾರಗಳನ್ನೂ ಒಳಗೊಂಡಂತೆ ಜಬ್ಬಾರ್‌ಖಾನ್ ಗ್ಯಾಂಗು ಇಲ್ಲಿಯತನಕ ನಡೆಸಿರುವ ಕರ್ಮಕಾಂಡಗಳನ್ನು ಬಯಲಿಗೆಳೆಯುವುದಕ್ಕಾಗಿ ಮಾಜಿ ಪ್ರಧಾನ ಕಾರ್ಯದರ್ಶಿ ಮೊಹ್ಮದ್ ಯೂಸೂಫ್ ಸವಣೂರ, ವಕೀಲರಾದ ನದೀಮ್ ಮುಲ್ಲಾ ದೊಡ್ಡ ಸಂಖ್ಯೆಯ ವಿದ್ಯಾವಂತ ಮುಸ್ಲಿಮ್ ಯುವಕರ ದಂಡು ಕಟ್ಟಿಕೊಂಡು ರಣರಂಗಕ್ಕೆ ನುಗ್ಗಿದ್ದಾರೆ.

ಇನ್ನೊಂದೆಡೆ ಹಿಂಡಸಗೇರಿ ಗ್ಯಾಂಗ್ ಕೂಡ ಹೊನ್ನಳ್ಳಿ ವಿರುದ್ಧ ಸೇಡು ತೀರಿಸಿಕೊಳ್ಳುವುದಕ್ಕಾಗಿ ಮೊಹ್ಮದ್ ಯೂಸೂಫ್ ಬಣಕ್ಕೆ ಒಳಗಿಂದೊಳಗೇ ಸಹಾಯ ಮಾಡುತ್ತಿದೆ. ಇದರಿಂದಾಗಿ ಹೊನ್ನಳ್ಳಿಗೆ ರಾತ್ರಿ ನಿದ್ದೆ ಬಾರದ ಪರಿಸ್ಥಿತಿ ಉಂಟಾಗಿದೆ. ಹುಬ್ಬಳ್ಳಿ ಶಹರ ಸಾಮಾನ್ಯ ಕ್ಷೇತ್ರವಾಗಿದ್ದಾಗ ಎಮ್ಮೆಲ್ಲೆ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಅಂಜುಮನ್ ಸಂಸ್ಥೆಯ ಚುನಾವಣೆಯಲ್ಲಿ ಹಿಂಡಸಗೇರಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಯಾವಾಗ ಹುಬ್ಬಳ್ಳಿ ಶಹರ ಕ್ಷೇತ್ರ ಎಸ್‌ಸಿ ಮೀಸಲು ಕ್ಷೇತ್ರವಾಯಿತೋ ಹಿಂಡಸಗೇರಿ ಚುನಾವಣೆಗೆ ನಿಲ್ಲುವುದಕ್ಕೂ ಕಲ್ಲು ಬಿತ್ತು. ಹಾಗಾಗಿ, ಅಂಜುಮನ್ ಎಲೆಕ್ಷನ್‌ನಲ್ಲಿ ಅವರಿಗೆ ನಿಲ್ಲುವುದಕ್ಕೆ ಕಾರಣವಿಲ್ಲದೆ ದೂರ ಸರಿದಿದ್ದಾರೆ. ಜೊತೆಗೆ ಹೊನ್ನಳ್ಳಿಯನ್ನು ಮುಗಿಸುವುದಕ್ಕೂ ಪಣತೊಟ್ಟಿದ್ದಾರೆ.


ಹಿಂಡಸಗೇರಿ



ಸಂಸ್ಥೆಯನ್ನು ಕೊಳ್ಳೆ ಹೊಡೆದಿದ್ದಾರು?

ಅಂಜುಮನ್ ಇಸ್ಲಾಂ ಸಂಸ್ಥೆಗೆ ಚುನಾವಣೆ ಎದುರಾಗಿರುವ ಈ ಹೊತ್ತಿನಲ್ಲಿ ಎಲ್ಲರೂ ಕೇಳುತ್ತಿರುವ ಪ್ರಶ್ನೆಯಿದು. ಬಡ ಮುಸ್ಲಿಮರ ಅಭಿವೃದ್ಧಿಗೆಂದೇ 1903ರಲ್ಲಿ ಅಂದಿನ ನವಾಬ ಸರದಾರ ಮೆಹಬೂಬ್ ಅಲಿಖಾನ್ ಶಾವಲಿ ಅಲ್ ಶಾಖಾರಿ, ಹುಸೇನ್ ಬೇಗ್ ಸಾಬ್ ಫೌಜದಾರ್ ಶಾಬ್ದಿ ಅವರು ಈ ಸಂಸ್ಥೆಯನ್ನು ಹುಟ್ಟುಹಾಕಿದ್ದರು. ಹಾಗೇ ನೋಡಿದರೆ ಇದು ಈ ಹೊತ್ತು ಬರೊಬ್ಬರಿ 106 ವರ್ಷಗಳನ್ನು ಯಶಸ್ವಿಯಾಗಿ ಮುಗಿಸಿರುವ ಪುರಾತನ ಸಂಸ್ಥೆ. 1983ರ ತನಕ ಇದಕ್ಕೆ ರಾಜಕೀಯವೆಂಬ ಕೆಸರು ಮೆತ್ತಿಕೊಂಡಿರಲಿಲ್ಲ. ಬಡ ಮುಸ್ಲಿಮರ ಉದ್ಧಾರವೇ ಅದರ ಪರಮ ಧ್ಯೇಯವಾಗಿತ್ತು.

ನಂತರದಲ್ಲಿ ಹುಬ್ಬಳ್ಳಿಯ ಅಂಜುಮನ್ ಎಂದರೆ ಕಾಂಗ್ರೆಸ್, ಕಾಂಗ್ರೆಸ್ ಎಂದರೆ ಅಂಜುಮನ್ ಎಂಬಂತಹ ಸ್ಥಿತಿ ಬಹಳ ವರ್ಷಗಳ ಕಾಲ ಇತ್ತು. ಒಂದು ರೀತಿಯಲ್ಲಿ ರಾಜ್ಯ ವಿಧಾನಸಭೆಗೆ, ವಿಧಾನಪರಿಷತ್ತಿಗೆ, ಮಹಾನಗರ ಸಭೆಗೆ ಆಯ್ಕೆಯಾಗಿ ಹೋಗುವುದಕ್ಕೆ ಈ ಸಂಸ್ಥೆಯೇ ಸೇತುವೆಯಾಗಿತ್ತು. ಯಾರು ಅಂಜುಮನ್ ಸಂಸ್ಥೆಯ ಅಧ್ಯಕ್ಷರಾಗುತ್ತಾರೋ ಅವರೇ ಹುಬ್ಬಳ್ಳಿ ಶಹರದ ಶಾಸಕರಾಗುತ್ತಾರೆ ಎಂಬುದು ಗ್ಯಾರಂಟಿಯಾಗಿತ್ತು. ಈ ಕಾರಣಕ್ಕಾಗಿಯೇ ಇದರ ಅಧ್ಯಕ್ಷ ಕುರ್ಚಿಗೇರಲು, ಅರ್ಥಾತ್ ಹುಬ್ಬಳ್ಳಿ ಶಹರದ ಎಮ್ಮೆಲ್ಲೆಯಾಗಲು ಜಬ್ಬಾರ್‌ಖಾನ್ ಹೊನ್ನಳ್ಳಿ ಮತ್ತು ಹಿಂಡಸಗೇರಿಗಳ ನಡುವೆ ದೊಡ್ಡ ಕದನವೇ ನಡೆಯುತ್ತಿತ್ತು. 1983ರಲ್ಲಿ ಹಿಂಡಸಗೇರಿ ಇದರ ಅಧ್ಯಕ್ಷರಾಗಿದ್ದಾಗ ಎಂ.ಜೆ.ಮುಧೋಳ್ ಎಂಬ ಕಮ್ಯೂನಿಸ್ಟ್ ನಾಯಕರೂ ಇದರ ಉಪಾಧ್ಯಕ್ಷರಾಗಿದ್ದರು. ನಂತರ ಅಂಜುಮನ್ ಒಳಗಿನ ಅಸಹ್ಯ ರಾಜಕಾರಣದಿಂದ ಬೇಸತ್ತು ರಾಜೀನಾಮೆ ಬಿಸಾಕಿ ಹೊರನಡೆದಿದ್ದರು.



ಅಂಜುಮನ್ ಸಂಸ್ಥೆ ಕೇವಲ ಕಾಂಗ್ರೆಸ್‌ಗೆ ಮಾತ್ರ ಜೀವ ಕೊಟ್ಟಿಲ್ಲ, ಅದರ ಬದ್ಧ ವೈರಿ ಬಿಜೆಪಿಯೂ ಇದರಿಂದಲೇ ಪ್ರವರ್ಧಮಾನಕ್ಕೆ ಬಂದಿದೆ. ಅಂಜುಮನ್ ಸಂಸ್ಥೆಯ ಒಡೆತನದಲ್ಲಿರುವ ಈದ್ಗಾ ಮೈದಾನ ಹಿಂಡಸಗೇರಿ ಮತ್ತು ಜಬ್ಬಾರ್‌ಖಾನ್ ಹೊನ್ನಳ್ಳಿಯನ್ನು ಎಷ್ಟರಮಟ್ಟಿಗೆ ರಾಜಕೀಯವಾಗಿ ಬೆಳೆಸಿತೋ ಅದೇ ಈದ್ಗಾ ಮೈದಾನ ಅಶೋಕ್ ಕಾಟವೆ, ಪ್ರಹ್ಲಾದ್ ಜೋಶಿಯಂಥ ಬಿಜೆಪಿ ನಾಯಕರನ್ನೂ ಬೆಳೆಸಿತು. ಅಷ್ಟೇ ಏಕೆ, ಉಮಾ ಭಾರತಿಯನ್ನು ಮಧ್ಯಪ್ರದೇಶದ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದೂ ಕೂಡ ಇದೇ ಈದ್ಗಾ ಮೈದಾನ.

ಈ ಹೊತ್ತು ಅಂಜುಮನ್ ಸಂಸ್ಥೆಯಲ್ಲಿ 9400 ಜನ ಮೆಂಬರ್‌ಗಳಿದ್ದಾರೆ. ಇದರಲ್ಲಿ 107 ಜನ ಮುತವಲ್ಲಿಗಳು (ಓಣಿಯ ಸರಪಂಚ್) ಮತ ಚಲಾಯಿಸಲಿದ್ದಾರೆ. ಈ ಹಿಂದೆ ಕೋಯಿನ್ ರೋಡ್‌ನಲ್ಲಿ ಕೇವಲ ಹೈಸ್ಕೂಲ್, ಕಾಲೇಜ್ ನಡೆಸುತ್ತಿದ್ದ ಈ ಸಂಸ್ಥೆ ಈಗ ಅದೆಷ್ಟು ಬೆಳೆದಿದೆಯೆಂದರೆ ಅನೇಕ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ, ಕಾಲೇಜು, ಡಿಪ್ಲೋಮಾ ಕಾಲೇಜುಗಳನ್ನು, ಟಿಸಿಹೆಚ್ ಸಂಸ್ಥೆಗಳನ್ನು ನಡೆಸುತ್ತಿದೆ. ಈ ಸಂಸ್ಥೆಗೆ ಹಜರುದ್ದೀನ್ ದರ್ಗಾ, ಪಿಬಿ ರೋಡಿಗೆ ಹೊಂದಿಕೊಂಡಂತೆ ಇರುವ 100 ಗುಂಟೆ ಜಾಗ ಒಳಗೊಂಡಂತೆ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಯಿದೆ. ಅದೂ ಅಲ್ಲದೇ, ಕಳೆದ ವರ್ಷವಷ್ಟೇ ಮುಕ್ತಾಯಗೊಂಡಿರುವ ಶಾದಿ ಮಹಲ್ ಕೂಡ ಅಂಜುಮನ್ ಸಂಸ್ಥೆಯ ಒಡೆತನದಲ್ಲಿದೆ. ಅದರ ನಿರ್ಮಾಣದಲ್ಲಿ ಜಬ್ಬಾರ್ ಖಾನ್ ಹೊನ್ನಳ್ಳಿ ಹೇರಾಫೇರಿ ಮಾಡಿ ಕಂಠಮಟ್ಟ ತಿಂದು ತೇಗಿದ್ದಾರೆಂದು ಸಂಸ್ಥೆಯ ಉಪಾಧ್ಯಕ್ಷರಾಗಿದ್ದ ಎಂ.ಆರ್.ಮುಲ್ಲಾ ವಕೀಲರು ರಾಜೀನಾಮೆ ಕೊಟ್ಟು ಹೊರಬಂದಿದ್ದರು. ಹೊನ್ನಳ್ಳಿ ಮಾತ್ರ ಯಾವುದಕ್ಕೂ ಜಗ್ಗದೇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿದ್ದುಕೊಂಡು ರಬ್ಬರ್ ಸ್ಟಾಂಪ್ ಅಧ್ಯಕ್ಷರಾಗಿದ್ದ ಗದಗಕರನನ್ನು ಮುಂದಿಟ್ಟುಕೊಂಡು ಮಾಡಬೇಕಾದ ಅವ್ಯವಹಾರಗಳೆಲ್ಲವನ್ನೂ ಮಾಡಿ ಮುಗಿಸಿದ್ದರು.

1996ರಲ್ಲಿ ಅಂಜುಮನ್ ಸಂಸ್ಥೆಯ ಆದಾಯ ಕೇವಲ ಎರಡೂವರೆ ಲಕ್ಷ ಇತ್ತು, ಈ ಹೊತ್ತು ಏನಿಲ್ಲವೆಂದರೂ ಅದು ಹಲವಾರು ಕೋಟಿಗಳಷ್ಟಿದೆ. ಅಂಜುಮನ್ ಶಿಕ್ಷಣ ಸಂಸ್ಥೆಗಳಲ್ಲಿ ಓದಬೇಕೆಂದರೆ ಎಷ್ಟೇ ಬಡ ವಿದ್ಯಾರ್ಥಿಯಾಗಿದ್ದರೂ 50 ಸಾವಿರದಿಂದ 60 ಸಾವಿರದ ತನಕ ಡೊನೇಷನ್ ಕಕ್ಕಲೇಬೇಕು. ಅಂಜುಮನ್ ಸಂಸ್ಥೆಯ ಆಸ್ಪತ್ರೆಯ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಹೀಗೆ ಬಡ ಮುಸ್ಲಿಮರ ಉದ್ಧಾರಕ್ಕಾಗಿ ಸ್ಥಾಪನೆಗೊಂಡ ಈ ಸಂಸ್ಥೆಯನ್ನು ಬಡ ಮುಸ್ಲಿಮರನ್ನು ಸುಲಿಯುವ, ರಕ್ತ ಹೀರುವ ಸಂಸ್ಥೆಯನ್ನಾಗಿ ಮಾರ್ಪಡಿಸಿದ್ದರಲ್ಲಿ ಜಬ್ಬಾರ್‌ಖಾನ್ ಹೊನ್ನಳ್ಳಿಯ ಪಾತ್ರ ಬಹಳ ದೊಡ್ಡದಿದೆ.

ಇದನ್ನೆಲ್ಲಾ ಅರ್ಥಮಾಡಿಕೊಳ್ಳದಷ್ಟು ಹುಂಬರಲ್ಲ ಮುಸ್ಲಿಮರು. ಆದ್ದರಿಂದಲೇ ಹೊನ್ನಳ್ಳಿಯನ್ನು ಮನೆಗೆ ಕಳುಹಿಸಲು ಅವರೆಲ್ಲಾ ತಯಾರಿ ಮಾಡಿಕೊಂಡಿದ್ದಾರೆ.

● ಹುಬ್ಬಳ್ಳಿಯಾಂವ

ಮಂಗಳೂರು: ಪಾಂಡು ಪೈ ಮುಗಿಸಿದವ ಪ್ರದೀಪ್ ಮೆಂಡನ್

ಮಂಗಳೂರು ಮಾಫಿಯಾ ಜಗತ್ತಿನಿಂದ ಇನ್ನೊಬ್ಬ ನಟೋರಿಯಸ್ ಎಲಿಮೆಂಟು ಪಾಂಡು ಪೈ ನಿಖಾಲಿಯಾಗಿದ್ದಾನೆ. ಪಾಂಡುನನ್ನು ಎತ್ತೊಯ್ದು ಕೈಹಿಂದಕ್ಕೆ ಕಟ್ಟಿಹಾಕಿ ಕುತ್ತಿಗೆ ಕತ್ತರಿಸಿ ಕೊಲೆ ಮಾಡಿದವನು ಅವನ ಒಂದು ಕಾಲದ ಬಂಟ ಪ್ರದೀಪ್ ಮೆಂಡನ್ ಎಂದು ಕರಾವಳಿ ಪೊಲೀಸರು ಖಚಿತಪಡಿಸಿಕೊಂಡಿದ್ದಾರೆ.

ಒಂದು ಕಾಲದಲ್ಲಿ ಡಾನ್ ರವಿ ಪೂಜಾರಿಯ ಎಡಗೈ-ಬಲಗೈ ಬಂಟರಂತೆ ಇದ್ದ ಪಾಂಡು ಹಾಗೂ ಪ್ರದೀಪ್ ನಂತರ ಶತ್ರುಗಳಾಗಿದ್ದರು. ಪರಸ್ಪರರ ಕೊಲೆಗೆ ಸ್ಕೆಚ್ ಹಾಕುತ್ತಲೂ ಇದ್ದರು. ಆ ಗ್ಯಾಂಗ್‌ವಾರ್‌ನ ಹೊಸ ಎಪಿಸೋಡೇ ಈಗಿನ ಪಾಂಡುರಂಗ ಪೈ ಯಾನೆ ಪಾಂಡು ಪೈ ಹತ್ಯೆ. ಮಂಗಳೂರಿನ ಕೊಂಚಾಡಿಯವನಾಗಿದ್ದ ಪಾಂಡು ಹೀಗೆ ಬರ್ಬರವಾಗಿ ಹತ್ಯೆಯಾಗುವಷ್ಟರಲ್ಲಿ ಡಜನ್ ಕೊಲೆ, ಅಸಂಖ್ಯಾತ, ಬೆದರಿಸಿ ಹಣ ವಸೂಲಿ ಕೇಸ್‌ಗಳನ್ನು ಮೈಮೇಲೆಳೆದುಕೊಂಡಿದ್ದ. ಒಮ್ಮೆ ಮುಂಬೈಯಲ್ಲೇ ಚೋಟಾ ರಾಜನ್ ವಿರೋಧಿಗಳ ಕೈಗೆ ಸಿಕ್ಕು ಪ್ರಾಣವೇ ಹೋಯಿತು ಎನ್ನುವಷ್ಟು ಏಟು ತಿಂದು ಉಳಿದುಕೊಂಡಿದ್ದ. ಕೆಲ ವರ್ಷಗಳಿಂದ ಯಾರ ಕಣ್ಣಿಗೂ ಬೀಳದಂತೆ ಭೂಗತನಾಗಿ ದಂಧೆ ನಡೆಸುತ್ತಿದ್ದ ಪಾಂಡುಗೆ ಕೊನೆಗೂ ಸಾವು ಬಂದೇ ಬಂತು. ಅದೂ ಭಯಾನಕವಾಗಿ ಬಂದಿದೆ. ಮೊನ್ನೆ ಮಂಗಳವಾರ ಬೆಳಗ್ಗೆ ಕಂಕನಾಡಿ ರೈಲು ನಿಲ್ದಾಣದಾಚೆಗೆ ಬಿದ್ದಿದ್ದ ಪಾಂಡು ಹೆಣ ನೋಡಿದವರಿಗೆ ಕೊಲೆಗಾರರ ನಿಷ್ಕರುಣೆ ಹಾಗೂ ಪಾಂಡು ಎಷ್ಟು ಅಸಹಾಯಕನಾಗಿ ತನ್ನ ಸಾವನ್ನು ಬರಮಾಡಿಕೊಂಡಿರಬಹುದೆಂಬುದು ಗೊತ್ತಾಗುತ್ತಿತ್ತು. ಆದರೆ ಪಾಂಡುಗೆ ಹೀಗಲ್ಲದೆ ಬೇರೆ ರೀತಿಯ ಅಂತ್ಯ ಸಾಧ್ಯವಿರಲಿಲ್ಲ. ಏಕೆಂದರೆ ಅವನ ಚರಿತ್ರೆಯೇ ಹಾಗಿದೆ.

ಸಾಧು ಶೆಟ್ಟಿ ಕೊಟ್ಟ ದೀಕ್ಷೆ

ಇದು ಒಂದೂವರೆ ದಶಕದ ಹಿಂದಿನ ಮಾತು. ಅಂದು ಮಂಗಳೂರಿನಲ್ಲಿ ಚೇತೂ-ಎದ್ದು ಗ್ಯಾಂಗ್‌ಗಳದ್ದೇ ಕಾರುಬಾರು, ಹೊಡೆದಾಟಗಳು ನಡೆಯುತ್ತಿದ್ದ ಕಾಲ.


ಆಗೊಮ್ಮೆ ಮುಂಬೈನಲ್ಲಿದ್ದ ಸಾಧು ಶೆಟ್ಟಿ ಪರಿಚಿತರ ಮದುವೆಗೆಂದು ಕರಾವಳಿಗೆ ಬಂದ. ಅವತ್ತು ಶೆಟ್ಟಿಗೆ ಸಿಕ್ಕ ವಿಶೇಷ ಮರ್ಯಾದೆ, ಗೌರವಗಳನ್ನು ನೋಡಿ ಅವನ್ಯಾರೆಂದು ಗೊತ್ತಿರದಿದ್ದ ಕೆಲ ಲೋಕಲ್ ರೌಡಿಗಳು ಕೆರಳಿ ಜಗಳಕ್ಕೆ ಬಿದ್ದಿದ್ದರು. ಈ ಸಾಧುಶೆಟ್ಟಿ ಎಂಥ ಹುಂಬನೆಂದರೆ ಹಿಂದೆಮುಂದೆ ನೋಡದೆ ರಿವಾಲ್ವರ್ ತೆಗೆದು ನಾಗು





ಎಂಬುವನ ಕಾಲಿಗೆ ಗುಂಡು ಹಾರಿಸಿದ್ದ. ಕೊನೆಗದು ಪೊಲೀಸರಿಗೂ ಗೊತ್ತಾಗಿ ಸಾಧು ಶೆಟ್ಟಿ ಮತ್ತಿತರರನ್ನು ಹಿಡಿದು ಬಂಟ್ವಾಳ ಜೈಲಿಗೆ ತುಂಬಿದ್ದರು. ಆಮೇಲೆ ಶೆಟ್ಟಿ ಹೊರಬಂದನಾದರೂ ಮತ್ತೆ ಮುಂಬೈಗೆ ಹೊರಡುವ ಮೊದಲು ರವಿ ಪೂಜಾರಿ ಗ್ಯಾಂಗಿನಲ್ಲಿ ಸೇರಿಕೊಳ್ಳಲು ಅದೇ ಜೈಲಿನಲ್ಲಿದ್ದ ಕೆಲವರನ್ನು ರೆಡಿ ಮಾಡಿಯೇ ಹೋದ.

ಅವತ್ತು ಹೀಗೆ ಜೊತೆಯಾದವರೇ ಚೇತು ಗ್ಯಾಂಗಿನ ವಾಮಂಜರ್ ರೋಹಿ, ಮುಕೇಶ್ ರೋಹಿ, ಮೂಲ್ಕಿ ರಫೀಕ, ಪಾಂಡು ಪೈ, ಕೀರ್ತಿ, ಕಿರಣ ಮುಂತಾದವರು. ಮುಂದೆ ಅದೇನಾಯಿತೋ ಏನೋ ಈ ಗ್ಯಾಂಗಿನಲ್ಲಿ ಒಳಜಗಳ ಬೆಳೆದು ಕೀರ್ತಿ ಕಿರಣನನ್ನು ಕೊಂದ. ಅದರ ಸೇಡು ತೀರಿಸಲು ರೋಹಿ, ಪಾಂಡು ಪೈ, ರಫೀಕ್, ಚೇತು ಸೇರಿಕೊಂಡು ಕೀರ್ತಿಗೆ ಸ್ಕೆಚ್ ಹಾಕಿದರು. 1996ರ ವೇಳೆಗೆ ಈ ಗ್ಯಾಂಗ್‌ವಾರ್‌ನ ಬಿಸಿ ಎಷ್ಟಾಯಿತೆಂದರೆ ಕೆಲವರು ಹೆದರಿ ಬಾಂಬೆಗೆ ಪರಾರಿಯಾದರು. ಅವರಲ್ಲಿ ಪಾಂಡು ಪೈ ಕೂಡ ಒಬ್ಬನಾಗಿದ್ದ. ಮುಂಬೈ ಸೇರಿದ ಪಾಂಡು ಚೋಟಾ ರಾಜನ್ ಗ್ಯಾಂಗ್‌ನಲ್ಲಿ ಕಾಣಿಸಿಕೊಂಡ. ಒಂದು ಸಾರಿ ರಾಜನ್ ವಿರೋಧಿ ಗ್ಯಾಂಗ್‌ನವರ ಕೈಗೆ ಸಿಕ್ಕು ಸಾಯುವಷ್ಟು ಒದೆ ತಿಂದ. ಇವನು ಸತ್ತನೆಂದು ಅವರು ಚರಂಡಿಗೆ ಎಸೆದು ಹೋದರಾದರೂ ಅದೂ ಹೇಗೋ ಬದುಕಿಕೊಂಡ ಪೈ ಸೀದಾ ಸಾಧು ಶೆಟ್ಟಿ ಹತ್ತಿರ ಹೋಗಿ ಸೇರಿ ಅವನಿಗೆ ಕೆಲಸ ಮಾಡತೊಡಗಿದ. ನಂತರ ರವಿ ಪೂಜಾರಿ ಆದೇಶದಂತೆ ಮಂಗಳೂರು ದಂಧೆ ನೋಡಿಕೊಳ್ಳಲು 2002 ರ ಸುಮಾರಿಗೆ ಉಡುಪಿಗೆ ಬಂದಾಗ ಅಲ್ಲಾಗಲೇ ಪ್ರದೀಪ್ ಮೆಂಡನ್ ಇದ್ದ. ಮೂಲ್ಕಿ ರಫೀಕ್ ಸುಪಾರಿ ದಂಧೆ ಚಾಲು ಮಾಡಿಕೊಂಡಿದ್ದ. ಅಲ್ಲಿ ಪೈ ಹಾಗೂ ಪ್ರದೀಪ್ ಜೊತೆಗೆ ಕ್ರಿಮಿನಲ್ ಕೆಲಸ ನಡೆಸುತ್ತಿದ್ದಾಗ ಮಾಫಿಯಾದೊಳಗೇ ಹಿಂದೂ-ಮುಸ್ಲಿಂ ಜಗಳ ಬಂತು. ಅಂದು ದಾವೂದ್ ಇಬ್ರಾಹಿಂ ಹಾಗೂ



ಚೋಟಾ ರಾಜನ್ ನಡುವೆ ಹುಟ್ಟಿಕೊಂಡ ಜಗಳವೇ ಮಂಗಳೂರಿನಲ್ಲೂ ಪ್ರತಿಫಲನವಾಗಿತ್ತು. ಅಷ್ಟರಲ್ಲಿ ಅಂದರೆ ಪೈ ಮಂಗಳೂರಿಗೆ ಕಾಲಿಡುವಷ್ಟರಲ್ಲಿ ಗುಜರಾತ್, ಮುಂಬೈಗಳಲ್ಲಿ ಒಂದು ದಜನ್‌ನಷ್ಟು ಮರ್ಡರ್ ಕೇಸ್‌ಗಳಲ್ಲಿ ಪೊಲೀಸರಿಗೆ ವಾಂಟೆಡ್ ಆಗಿದ್ದ. ಆದರೆ ಆಶ್ಚರ್ಯ ಅಂದರೆ ಇಂಥ ಮೋಸ್ಟ್ ವಾಂಟೆಡ್ ಕ್ರಿಮಿನಲ್ ಪೈ 2006 ರಲ್ಲೊಮ್ಮೆ ಮಡಿಕೇರಿಯಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಆಗ ಪೊಲೀಸರಿಗೆ ಇವನ ಚರಿತ್ರೆ ಗೊತ್ತಿರದಿದ್ದ ಕಾರಣ ಬೇಗನೆ ಬಿಡುಗಡೆಯೂ ಆದ. ಆಗಲೂ ಪ್ರದೀಪ್ ಮೆಂಡನ್ ಜೊತೆಗೆ ಪೈ ವ್ಯವಹಾರ ಸಲೀಸಾಗೆ ನಡೆದಿತ್ತು. ಆಗೊಮ್ಮೆ ಪೊಲೀಸರಿಗೆ ಸಿಕ್ಕು ಅರೆಸ್ಟಾಗಿದ್ದ ಇನ್ನೊಬ್ಬ ಪಾತಕಿ ರೋಹಿ ಪರಾರಿಗೂ ಪಾಂಡು ನೆರವಾಗಲು ಯತ್ನಿಸಿದ್ದ.

ಹೀಗಿದ್ದಾಗ ಪ್ರದೀಪ-ಪೈ ನಡುವೆ ವಕೀಲ ನೌಶಾದ್ ಕೊಲೆ ಸಂಬಂಧ ಜಗಳವಾಯಿತೆಂದು ಪೊಲೀಸರು ಶಂಕಿಸುತ್ತಿದ್ದಾರೆ. ಇದಕ್ಕೊಂದು ಹಿಂದೂ-ಮುಸ್ಲಿಂ ಮಾಫಿಯಾ ಜಗಳದ ಆಯಾಮವನ್ನು ಪೊಲೀಸರು ತೇಲಿಬಿಟ್ಟಿದ್ದಾರಲ್ಲವೆ. ಹಾಗೆ ಶುರುವಾದ ಜಗಳ ಬೇಗನೆ ಪಾಂಡು-ಪ್ರದೀಪನ ನಡುವೆ ವೈಮನಸ್ಸು ತಂದು ಹಾಕಿತು.

ಬೆಂಗಳೂರಿನ ತಿಲಕ್‌ನಗರದ ಶಬನಂ ಡೆವಲಪರ್ಸ್ ಮೇಲಿನ ಸುಫಾರಿಯನ್ನೂ ಮೊದಲಿಗೆ ಪಾಂಡು ಪೈಗೇ ಕೊಟ್ಟಿದ್ದ ರವಿ ಪೂಜಾರಿ. ಆದರೆ ಪೈ ಅದರಲ್ಲಿ ಫೇಲಾದ. ಕೊನೆಗೆ ಈ ಡೀಲ್ ಚೋಟಾ ರಾಜನ್ ಗ್ಯಾಂಗಿನ ಬೇರೊಬ್ಬರಿಗೆ ಹೋಯಿತು. ಇದರಿಂದ ಯಾಕೋ ಹೆದರಿಕೊಂಡಂತಾದ ಪೈ ಇದ್ದಕ್ಕಿದ್ದಂತೆ ಹುಷಾರಾದ. ಒಂದು ಕಡೆ ಪೊಲೀಸರು, ಇನ್ನೊಂದೆಡೆ ಪ್ರದೀಪ್ ಮೆಂಡನ್ ಭೀತಿಯಿಂದ ಕಂಗೆಟ್ಟು ತಲೆ ತಪ್ಪಿಸಿಕೊಂಡು ಓಡಾಡುತ್ತಿದ್ದ. ಪ್ರದೀಪನನ್ನು ಮುಗಿಸಿಬಿಡಲೂ ಒಂದೆರಡು ಬಾರಿ ವಿಫಲ ಯತ್ನ ನಡೆಸಿದ್ದ. 2006ರಲ್ಲೊಮ್ಮೆ ಪ್ರದೀಪ್ ಬಣದ ರೌಡಿ ನಾಗೇಶನನ್ನು ಮುಗಿಸಲು 2 ಲಕ್ಷಕ್ಕೆ ಸುಫಾರಿ ನೀಡಿ ಗಣೇಶ ಎಂಬುವವನನ್ನು ಕಳಿಸಿದ್ದ. ಗಣೇಶ ಪೊಲೀಸರಿಗೆ ಸಿಕ್ಕಿಬಿದ್ದ ಆದರೆ ಪ್ರದೀಪ ಕೈಗಳು ಪೈಗಿಂತ ಉದ್ದವಾಗಿವೆ. ಅವನೊಮ್ಮೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾಗ ಕರಾವಳಿಯ RSS ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟನೇ ರೆಕಮೆಂಡ್ ಮಾಡಿ ಬಿಡಿಸಿದ್ದ. ಹೀಗಿದ್ದ ಪ್ರದೀಪ ಉಪಾಯವಾಗಿ ಪಾಂಡು ಪೈಯನ್ನು ಯಾವುದೋ ನೆಪದಿಂದ ಕರೆಸಿಕೊಂಡು ತಣ್ಣಗೆ ಕೊಂದೆಸೆದು ಹೊರಟುಹೋಗಿದ್ದಾನೆ.

ಈ ಹತ್ಯೆ ಪೊಲೀಸರು ನಂಬಿರುವಂತೆ ಕೇವಲ ಲಾಯರ್ ನೌಶಾದ್ ಹತ್ಯೆಯ ಮುಂದುವರೆದ ಭಾಗ ಮಾತ್ರ ಅಲ್ಲ.

ಯಾಕೆ ಗೊತ್ತಾ?

ಪಾಂಡುರಂಗ ಪೈ ಹತ್ಯೆ ನಡೆದಿರುವುದು ಮೇ 11-12 ರ ರಾತ್ರಿ.

ಇದು ಸಾಧು ಶೆಟ್ಟಿ ಕೊಲೆಯಾದ ದಿನವೂ ಹೌದು. ■


ಎ ಲೆ ಕ್ಷ ನ್

ಬಾಜಿ ಕಟ್ಟಿ ನೋಡು ಬಾರಾ...!

ಇದೊಂಥರಾ ಸಾಂಕ್ರಾಮಿಕ ರೋಗ. ಚುನಾವಣೆ ಮುಗಿದು ಇನ್ನೇನು ಮತ ಎಣಿಕೆ ಸಮೀಪಿಸುತ್ತಿದೆ ಎನ್ನು ವಾಗಲೇ ಅಂಟುಜಾಡ್ಯದಂತೆ ಹಬ್ಬುತ್ತಿದೆ ಬೆಟ್ಟಿಂಗ್ ಹುಚ್ಚು. ...ಂಥಾ ಕ್ಷೇತ್ರದಲ್ಲಿ ಇಂಥದ್ದೇ ಪಕ್ಷದ ಅಭ್ಯರ್ಥಿ ...ಲ್ಲುತ್ತಾನೆ ಎಂಬುದರಿಂದ, ಶುರುವಾಗಿ ...ಂಥವನಿಗೆ ಠೇವಣಿ ಹುಟ್ಟಲ್ಲ, ಇಂಥವನು ...ಪ್ಪರ ಮೇಲೆ ಓಟುಗಿಟ್ಟಿಸೋಲ್ಲ; ಇತ್ಯಾದಿ ...ಾಗಿ ತರೇವಾರಿಯ ಬೆಟ್ಟಿಂಗ್ ಖಯಾಲಿಗೆ ...ರ್ರಾರು ಬಲಿಯಾಗುತ್ತಾರೆಂಬುದಷ್ಟೇ ...ಕಿಯಿರುವ ಸಸ್ಪೆನ್ಸು ಮತ್ತು ಕ್ಲೈಮ್ಯಾಕ್ಸು.


ಕೃಷ್ಣಬೈರೇಗೌಡ


ಸದ್ಯ ಬೆಟ್ಟಿಂಗ್ ಪಿಡುಗಿನ ರಾಜಧಾನಿ ...ತಿದ್ದರೆ ಅದು ಮಂಡ್ಯ. ಚಲುವರಾಯ ...ಮಿ ಗೆದ್ದೇ ಗೆಲ್ತಾನೆ ಅಂತ ನಂದೊಂದೆಕರೆ ...ದರೆ ನಿಂದೆರಡೆಕರೆಯ ಬತ್ತಾನಾ? ಎಂಬ ...ಗದೊಂದಿಗೆ ಶುರುವಾಗುತ್ತದೆ ಮಂಡ್ಯದ ...ಟ್ಟಿಂಗ್ ವ್ಯಾಮೋಹ. ಮಂಡ್ಯ ಪಕ್ಕದ ಇಂಡುವಾಳುವಿನ ...ಮ ಪಂಚಾಯ್ತಿಯ ಮಾಜಿ ಅಧ್ಯಕ್ಷನೊಬ್ಬ ಚಲುವ ...ಯಸ್ವಾಮಿಯೇ ಗೆಲ್ತಾರೆ ಎಂದು ಕಾಂಗ್ರೆಸ್ಸಿನ ಲೋಕಲ್ ...ಧಾರಿಯೊಬ್ಬನ ಬಳಿ ತನ್ನ ಎರಡೆಕರೆ ಆಸ್ತಿಯನ್ನೇ ...ಾಕ್ಕಿಟ್ಟಿದ್ದಾನೆ. ಮಂಡ್ಯದ ಲೆಕ್ಚರರ್ ಗೋವಿಂದಯ್ಯ ಎಂಬಾತ ...ನ್ನ ಸ್ನೇಹಿತ ಶಿವಣ್ಣನ ಜೊತೆ 5 ಲಕ್ಷ ಬಾಜಿ ಕಟ್ಟಿದ್ದು ...ಡ ಚಲುವರಾಯಸ್ವಾಮಿಯ ಪರವಾಗೇ.


ಅಂಬರೀಶ್

ಅದೇನೋ ಈ ಬಾರಿ ಹೆಚ್ಚು ಬೆಟ್ಟಿಂಗ್ ...ಡೆಯುತ್ತಿರುವುದು ಮಂಡ್ಯದ ಜೆಡಿಎಸ್ ...ಳಯದಲ್ಲೇ. ಕಾಂಗ್ರೆಸ್ಸಿನ ಅಂಬರೀಷ್ ...ೀತು ಚಲುವರಾಯಸ್ವಾಮಿ ಗೆದ್ದೇ ಗೆಲ್ತಾರೆ ...ಂದು ಎಕರೆ ಗದ್ದೆಯಿಂದ ಶುರುವಾಗಿ ...ಕ್ಷ, ಐದು ಲಕ್ಷದ ತನಕ ಬೆಟ್ಟಿಂಗ್ ಇಲ್ಲಿ ...ರ್ವೇಸಾಮಾನ್ಯ. ತೀರ ದುಡ್ಡಿಲ್ಲದ ಸಾಮಾನ್ಯ ...ಾಪಿ ಕೂಡ ತನ್ನಲ್ಲಿದ್ದ ಸೈಕಲ್ಲು, ಎತ್ತಿನ ...ಡಿ, ಕೋಳಿ, ಕುರಿಗಳನ್ನು ಬಾಜಿ ಕಟ್ಟು ...ನೆ. ಮಳವಳ್ಳಿ, ಮದ್ದೂರು ಭಾಗದಲ್ಲಿ ...ಬಿ ಗೆಲ್ತಾರೆ ಎಂದು ಬಾಜಿ ಕಟ್ಟುವವರ ...ಚ್ಚು. ಹೆಚ್ಚಾದರೆ ಪಾಂಡವಪುರ ಮತ್ತು ...ದ್ಯದಂಥ ದಳದ ಪ್ರಾಬಲ್ಯದ ಏರಿಯಾಗಳಲ್ಲಿ ಜೆಡಿಎಸ್ ...ವಾಗಿ ನೋಡಿ ಬೆಟ್ಟಿಂಗ್ ಶುರುವಾಗಿದೆ.


ಸೋಡಿ ಬೆಟ್ಟಿಂಗ್ ಎಂದರೆ ಒಂದು ಕುರಿಗೆ ಪ್ರತಿಯಾಗಿ ...ತ್ತು ಕುರಿಗಳ ಪಣಕಟ್ಟುವುದು. ತೊಂಭತ್ತು ಪೈಸೆಗೆ ಒಂದು ರೂಪಾಯಿ, ಒಂದು ಎಕರೆಗೆ ತನ್ನ ಐದೆಕರೆ ಕೊಡುತ್ತೇನೆ ಎನ್ನುವುದು, ಒಂದು ಲಕ್ಷಕ್ಕೆ ತನ್ನದು ಎರಡು ಲಕ್ಷ ಎನ್ನುವುದು. ಅದು ಜಿದ್ದಾ ಜಿದ್ದಿಯ ಸಂಕೇತ.


ಮಂಡ್ಯ ಪಕ್ಕದ ಚಲ್ಲನಾಯಕನ ಹಳ್ಳಿಯ ಸುಂದರ್ ಎಂಬಾತ ಚಲುವರಾಯಸ್ವಾಮಿಯ ಪರವಾಗಿ ಒಂದಕ್ಕೆ ಐದು ಪಟ್ಟು ಸೋಡಿ ಬೆಟ್ಟಿಂಗ್‌ಗೆ ತೊಡೆ ತಟ್ಟುತ್ತಿದ್ದರೆ, ಕಲ್ಲಳ್ಳಿಯ ರವೀಂದ್ರ ಒಂದಕ್ಕೆ ದುಪ್ಪಟ್ಟು ಮಾತ್ರವಲ್ಲದೇ ಐದು ಪಟ್ಟುಬೇಕಾದರೂ ಬಾಜಿ ಕಟ್ಟಲು ರೆಡಿ.



ಜೆಡಿಎಸ್ ವೀರರ ಬೆಟ್ಟಿಂಗ್ ಆರ್ಭಟ ಕೊನೆಕೊನೆಗೆ ಅಂಬರೀಷ್ ಮೂರನೇ ಸ್ಥಾನಕ್ಕಾ ಅಥವಾ ಬಿಜೆಪಿಯ ಶಿವರಾಮೇಗೌಡ ಮೂರನೇ ಸ್ಥಾನಕ್ಕಾ? ಎಂಬಷ್ಟರಮಟ್ಟಿಗೆ ಉಲ್ಬಣಿಸಿದೆ. ಈಗಲೇ ಈಪಾಟಿ ಬೆಟ್ಟಿಂಗ್ ಹಾವಳಿಯಾದರೆ ಮತ ಎಣಿಕೆ ಸಮೀಪಿಸು ತ್ತಿದ್ದಂತೆ ಅದಿನ್ನು ಯಾವ ಮಟ್ಟಮುಟ್ಟುತ್ತೋ?

ಒಂದಂತೂ ಸತ್ಯ ಅಂಬಿ ಅಥವಾ ಚಲುವರಾಯಸ್ವಾಮಿ ಈ ಇಬ್ಬರಲ್ಲಿ ಯಾರೇ ಗೆದ್ದರೂ ಮಂಡ್ಯದ ಮಟ್ಟಿಗೆ ಸಾವಿರಾರು ಮನೆ ಮುಳುಗುವುದಂತೂ ಗ್ಯಾರಂಟಿ.



ಜಮೀರ್ ಅಹಮದ್


ಚಲುವರಾಯಸ್ವಾಮಿ

ಇದು ಮಂಡ್ಯದ ಕತೆಯಾದರೆ ಬೆಂಗಳೂರಿನ ಬೆಟ್ಟಿಂಗ್ ಇದಕ್ಕಿಂತ ಭಿನ್ನ. ಬೆಂಗಳೂರು ಸೆಂಟ್ರಲ್ಲಿಗೆ ಜಮೀರ್ ಅಹ್ಮದ್ ಗೆದ್ದೇ ಗೆಲ್ತಾರೆ ಎಂಬುದಕ್ಕೇ ಅತೀ ಹೆಚ್ಚು ಬಾಜಿ ನಡೆದಿದೆ. ಚಿಕ್ಕಪೇಟೆಯ ನಕಲಿ ಎಲೆಕ್ಟ್ರಿಕಲ್ಸ್ ಧಣಿ ಉಗಮ್ ರಾಜ್ ಒಬ್ಬನೇ ಪಿ.ಸಿ. ಪರವಾಗಿ ಒಂದು ಕೋಟಿಗೂ ಮೀರಿ ಬಾಜಿ ಕಟ್ಟಿದ್ದಾನೆ. ಹವಾಲಾ ಖದೀಮ ಶಾಂತಿಲಾಲ್ ವಿರುದ್ಧ ಹತ್ತು ಲಕ್ಷ, ರೇಷ್ಮೆ ಸ್ಮಗ್ಲರ್ ಪಟೇಲ್ ಅಂಗಾಡಿಯನ ಎದುರು ಇಪ್ಪತ್ತು ಲಕ್ಷ, ನಕಲಿ ಕಂಪ್ಯೂಟರ್ ಧೂರ್ತ ಸೂರಜ್ ಮಲ್ ವಿರುದ್ಧ ಇಪ್ಪತ್ತೈದು ಲಕ್ಷದ ಬಾಜಿ ಕಟ್ಟಿದ ಉಗಮ್‌ರಾಜ್ ಪಕ್ಕಾ ಬಿಜೆಪಿ ಭಕ್ತ. ಹಾಗಂತ ಜೆಡಿಎಸ್‌ನ ಜಮೀರ್ ಪರವಾಗಿ ಬೆಟ್ಟಿಂಗ್ ಕಟ್ಟುವವರ ಸಂಖ್ಯೆ ಯೇನೂ ಕಮ್ಮಿಯಲ್ಲ.

ವಿಶೇಷವೆಂದರೆ ಬಿಜೆಪಿಯ ಪಿ.ಸಿ. ಮೋಹನ್ ಮೂರನೇ ಸ್ಥಾನಕ್ಕೆ ನಿಲ್ಲುತ್ತಾರೆಂದೇ ಒಂದು ವರ್ಗದ ಬಾಜಿಕೋರರು ಹಠಕ್ಕೆ ಬಿದ್ದು ಬೆಟ್ ಮಾಡುತ್ತಿದ್ದಾರೆ.


ಒಂದು ಮೂಲದ ಪ್ರಕಾರ ಬೆಂಗಳೂರು ದಕ್ಷಿಣದಲ್ಲಿ ಕೃಷ್ಣ ಭೈರೇಗೌಡ ಗೆಲ್ಲುತ್ತಾರೋ ಸೋಲುತ್ತಾರೋ ಎಂದೇ ಸರಿಸುಮಾರು ಎಪ್ಪತ್ತು ಕೋಟಿ ರೂಪಾಯಿಗಳಷ್ಟು ಮೊತ್ತದ ಬೆಟ್ಟಿಂಗ್ ನಡೆದಿದೆಯಂತೆ. ನಿಜಕ್ಕೂ ನಂಬಲಾಗದ ಮಾತಿದು. ಬನಶಂಕರಿಯ ಟೀಚರ್ಸ್ ಕಾಲೋನಿಯ ಬಿಜೆಪಿ ನಾಯಕ ಎಮ್ಮಾರ್ ವೆಂಕಟೇಶ್ ಒಬ್ಬನೇ ಇಪ್ಪತ್ತೈದು ಲಕ್ಷದ ಬಾಜಿ ಕಟ್ಟಿದ್ದಾನೆ. ಅದೂ ಅನಂತ್ ಕುಮಾರ್ ಗೆಲ್ಲುತ್ತಾರೆ ಎಂದು. ಒಕ್ಕಲಿಗರ ಕೇಂದ್ರ ಕ್ರಿಯಾ ಸಮಿತಿಯ ಅಧ್ಯಕ್ಷನಾದ ಎಮ್ಮಾರ್ ವೆಂಕಟೇಶ್ ಪಕ್ಕಾ ಅನಂತಕುಮಾರ್ ಚೇಲಾ. ಹಿಂದೆ ಜೆಡಿಎಸ್‌ನಲ್ಲಿದ್ದ. ತಿಂಗಳ ಹಿಂದಷ್ಟೇ ಬಿಜೆಪಿಗೆ ಬಂದ. ಬಹುಶಃ ತನ್ನ ಅನಂತ ಭಕ್ತಿ ಯನ್ನು ಮೆರೆಯಲು ವೆಂಕ ಟೇಶ್ ಬೆಟ್ಟಿಂಗ್ ಗಿಮಿಕ್ಕಿಗೆ ಕೈಹಾಕಿರಬಹುದಾ? ಬೆಂಗ ಳೂರು ದಕ್ಷಿಣದ ಮಟ್ಟಿಗೆ ಬೆಟ್ಟಿಂಗ್ ಕಟ್ಟಿರುವ ಬಹುತೇಕ ಮಂದಿ ಕೃಷ್ಣ ಭೈರೇಗೌಡರ ಪರವಾಗಿ ಬಾಜಿ ಕಟ್ಟಿದ್ದಾರೆ. ಆದರಲ್ಲೂ ಕಾಮಾಕ್ಷಿಪಾಳ್ಯದ ಒಂದು ಗುಂಪು ಕೃಷ್ಣ ಭೈರೇಗೌಡ, ಜಮೀರ್ ಅಹ್ಮದ್, ಚಲುವರಾಯಸ್ವಾಮಿ ಪರವಾಗಿ ಸೈಟು, ಮನೆ ಅಂತಲೂ ನೋಡದೇ ಬೆಟ್ ಮಾಡಿದೆ.



'ಬಂ' ಪರ ಒಂದಕ್ಕೆರಡು

ಶಿವಮೊಗ್ಗದ ಚುನಾವಣಾ ಫಲಿತಾಂಶದ ಮುನ್ಸೂಚನೆಯೋ ಎಂಬಂತಿದೆ ಅಲ್ಲಿನ ಜೂಜುಕೋರರ ಮನಸ್ಥಿತಿ. ಇಲ್ಲಿನ ಇಡೀ ಬಾಜಿ ದಂಧೆಯ ಕೇಂದ್ರಬಿಂದುವೇ ಬಂಗಾರಪ್ಪ. ಅದರಲ್ಲೂ 'ಬಂ' ಪರ ಬೆಟ್ ಮಾಡುವ ಅನೇಕರು ಒಂದಕ್ಕೆರಡರ ಪ್ರಮಾಣದಲ್ಲಿ ಬಾಜಿಗಿಳಿದಿದ್ದಾರೆ. ವಿಚಿತ್ರವೆಂದರೆ ಸ್ವತಃ ಬಿಜೆಪಿಯ ಕೆಲ ನಾಯಕರೇ ಬಂಗಾರಪ್ಪ ಗೆಲ್ಲುತ್ತಾರೆಂದು ಬಾಜಿ ಕಟ್ಟುತ್ತಿದ್ದಾರೆ. ಯಾರೋ ಪುಢಾರಿಯೊಬ್ಬ ತನ್ನ ತೋಟವನ್ನೇ ಜೂಜಿಗಿಟ್ಟಿದ್ದು, ಮತ್ತೊಬ್ಬ ಮನೆಯನ್ನೇ ಪಣಕ್ಕಿಟ್ಟಿದ್ದು, ಮಗದೊಬ್ಬ ತನ್ನ ಐಷಾರಾಮಿ ಕಾರನ್ನು ಬೆಟ್ ಮಾಡಿದ್ದು 'ಬಂ' ಪರ ಎಂಥಾ ಅಲೆಯಿದೆ ಎಂಬುದಕ್ಕೆ ಉದಾಹರಣೆಯಷ್ಟೆ.

ಹಾಗಂತ ಯಡ್ಡಿ ಪಟಾಲಮ್ಮೇನೂ ಹಿಂದೆ ಬಿದ್ದಿಲ್ಲ. ಹಿಂದೆ ಬಿಜೆಪಿಯ ಮಾಧ್ಯಮ ಪ್ರಮುಖನಾಗಿದ್ದ ಪಾ.ರಾ. ಮಧುಸೂದನ ರಾಘು ಗೆಲ್ಲುತ್ತಾನೆಂದು ಎಷ್ಟು ಬೇಕಾದರೂ ಕಟ್ಟಲು ರೆಡಿಯಾಗಿದ್ದಾನಂತೆ. "ರಾಘು ವಿರುದ್ಧ ಎಷ್ಟು ಬೇಕಾದರೂ ತಗಂಬನ್ನಿ" ಎಂದು ಇಡೀ ಶಿವಮೊಗ್ಗಕ್ಕೇ ಸವಾಲೆಸೆದ ಚೆಡ್ಡಿ ಮಧುಸೂದನನ ಹಣೆಬರಹಕ್ಕೆ ಯಾರು ತಾನೇ ಏನು ಮಾಡಲು ಸಾಧ್ಯ?



ರಾಘವೇಂದ್ರ

ತುಮಕೂರಿನಲ್ಲಿ ನಡೆದ ಬೆಟ್ಟಿಂಗ್‌ನ ದೊಡ್ಡ ಪಾಲು ಜೆಡಿಎಸ್‌ನ ಮುದ್ದುಹನುಮೇಗೌಡರು ಗೆಲ್ಲುತ್ತಾರೆಂಬುದರ ಮೇಲಿದೆ. ಬೆಂಗಳೂರು ಉತ್ತರದ ವಿಷಯದಲ್ಲಿ ಅತೀ ಹೆಚ್ಚು ಬೆಟ್ ನಡೆದಿರುವುದು ಬಿಜೆಪಿಯ ಚಂದ್ರೇಗೌಡರ ಪರವಾಗಿ. ವಿಚಿತ್ರವೆಂದರೆ ಬೆಂಗಳೂರು ಗ್ರಾಮಾಂತರದಲ್ಲಿ ಬಿಜೆಪಿಯ ಯೋಗೀಶ್ವರ್ ಗೆಲ್ಲುತ್ತಾರೆಂದು ಶೇ. 70 ರಷ್ಟು ಬಾಜಿಯಿದ್ದರೆ ಕುಮಾರಣ್ಣನ ಪರವಿದ್ದದ್ದು ಶೇ. 30 ರಷ್ಟು ಮಾತ್ರ.

ಮತ ಎಣಿಕೆ ಸಮೀಪಿಸುತ್ತಿದ್ದಂತೆ ಬೆಟ್ಟಿಂಗ್ ಖಯಾಲಿ ಇನ್ನೆಂಥ ವಿಪರೀತಕ್ಕೇರುತ್ತೋ ಬಲ್ಲವರ್‍ಯಾರು?

● ರಾ. ಸೋ.

ಅಲ್ಲಂ, ಗೌತಮ್ ದಂಧೆಗಳು




'ಅಜ್ಜಿಗೆ ಅರಿವೆ ...ಂತೆಯಾದರೆ ಮೊಮ್ಮಗಳಿಗೆ ...ದೇನೊ ಚಿಂತೆಯಂತೆ' ಅನ್ನುವ ...ಾಗೆ ಈ ಬಾರಿ ಎಲೆಕ್ಷನ್ ...ಟ್ಟಿಂಗ್ ದಂಧೆಯವರು ...ರ್ಜರಿ ಬ್ಯುಸಿನೆಸ್' ...ಡೆಸುತ್ತಿದ್ದಾರೆ.

ಒಂದೆಡೆ ಎಲೆಕ್ಷನ್‌ಗೆ ...ಂತಿರುವ ಅಭ್ಯರ್ಥಿಗಳೇ 'ಹಾವು ...ಯ್ಯುತ್ತಿವಾ ಇಲ್ಲ, ಸೋಲು ...ದಿದೆಯಾ' ಎಂದು ಬಾಯಲ್ಲಿ ...ಪ್ರಾಣ ಹಾಕಿಕೊಂಡು ...ನಿಂದ ಕಾಯುತ್ತಿದ್ದಾರೆ. ಆದರೆ ಮತ್ತೊಂದೆಡೆ ... ರಾಜಕಾರಣಿಗಳ ಚೇಲಾಗಳು, ಪಕ್ಷದ ...ಗಳು ಕೂಡ ಈ ಬಾರಿ ಬೆಟ್ಟಿಂಗ್ ರಾಕೆಟ್‌ನಲ್ಲಿ ಸೇರಿದ್ದಾರೆ.

ಕರ್ನಾಟಕದ ರಾಜಕಾರಣಿಗಳ ಪೈಕಿ ಜೂಜುಕೋರರೆಂದೇ ಕುಖ್ಯಾತರಾದ ಕೆಲವರಿದ್ದಾರೆ. ಅವರಿಗಂತೂ ಈಗ ಹಬ್ಬ. ಇವರ ಪೈಕಿ ಕಾಂಗ್ರೆಸ್‌ನ ಅಲ್ಲಂ ವೀರಭದ್ರಪ್ಪ ಅಗ್ರಗಣ್ಯ. ಇಸ್ಪೀಟಿನಲ್ಲಿ ಡಬಲ್ ಡಿಗ್ರಿ ಗಳಿಸಿರುವ ಅಲ್ಲಂ ಈ ಬಾರಿ ಕೆಲವು ಕ್ಷೇತ್ರಗಳಲ್ಲಿ ಇಂತಿಂಥವರೇ ಗೆಲ್ಲುತ್ತಾರೆಂದು ಬೆಟ್ ಮಾಡಿದ್ದಾರಂತೆ.

ಅಲ್ಲಿ ಬೆಟ್ ಮಾಡಿರುವ ಒಟ್ಟು ಮೊತ್ತವೆಷ್ಟು ಗೊತ್ತಾ? ಮೂರು ಕೋಟಿ ರೂಪಾಯಿಗಳು.

ಅದೇ ರೀತಿ ರೆಡ್ಡಿ ವೀರಣ್ಣನೂ ಎಲೆಕ್ಷನ್ ಬೆಟ್ಟಿಂಗ್‌ನಲ್ಲಿ ಭಾರಿ ಹಣ ಪಣಕ್ಕಿಟ್ಟಿದ್ದಾರೆ. ಬಿಜೆಪಿಯ ಇಸ್ಪೀಟು ರಾಜರುಗಳಾದ ಮುರುಗೇಶ್ ನಿರಾಣಿ, ಸವದಿ, ರೇಣುಕಾಚಾರ್ಯ ಕೂಡ ತಲಾ ಇಪ್ಪತ್ತೈದು ಲಕ್ಷಕ್ಕಿಂತ ಜಾಸ್ತಿ ಹಣವನ್ನು ಜೂಜಿಗೊಡ್ಡಿದ್ದಾರೆ. ಎಚ್.ಡಿ. ಕುಮಾರಸ್ವಾಮಿಯ ಗೆಳೆಯ ವೀರಶೈವ ಮುಖಂಡ ವಾಗೀಶ್ ಪ್ರಸಾದ್ ಹಾಸನದಲ್ಲಿ ದೇವೇಗೌಡರು ಗೆಲ್ಲುತ್ತಾರೆಂದು ಹತ್ತು ಲಕ್ಷ ರೂಪಾಯಿ ಪಣಕ್ಕಿಟ್ಟಿದ್ದಾರೆಂಬ ಸುದ್ದಿಯಿದೆ.


ಅಲ್ಲಂ ವೀರಭದ್ರಪ್ಪ

ಹಾಗೆ ನೋಡಿದರೆ ಎಲೆಕ್ಷನ್ ಬೆಟ್ಟಿಂಗ್‌ನ ಬಿಸಿಬಿಸಿ ಅಖಾಡವೆಂದರೆ ಶಿವಮೊಗ್ಗ. ಅಲ್ಲಿ ಬಂಗಾರಪ್ಪ ಹಾಗೂ ರಾಘವೇಂದ್ರ ಇಬ್ಬರಿಗೂ ಗೆಲ್ಲುವ ಛಾನ್ಸ್ ಫಿಫ್ಟಿ-ಫಿಫ್ಟಿ ಇದೆ. ಶಿವಮೊಗ್ಗದ ಪ್ರಮುಖ ಕ್ರಿಕೆಟ್ ಬೆಟ್ಟಿಂಗ್ ರಾಕೆಟ್‌ನವರಿಗೆ, ಬುಕ್ಕಿಗಳಿಗೆ ಹವಾಲ ದಂಧೆಯವರಿಗೆ ಈಗ ಕೈತುಂಬಾ ಕೆಲಸ. ಅಲ್ಲಿನ ಪ್ರಮುಖ ಮಾರ್ವಾಡಿ ಸಾಹುಕಾರರಾದ ಗೌತಮ್ ಹೀರಾಚಂದ್ ಮುಂತಾದವರು ಬಂ ಅಥವಾ ರಾಘು ಪರ ಯಾರೇ ಬಂದರೂ 1:1 ರೇಟ್‌ನಲ್ಲಿ ಬೆಟ್ ಕಟ್ಟಿಸಿಕೊಳ್ಳುತ್ತಿದ್ದಾರೆ. ಹವಾಲ ಮೂಲಕವೇ ಶಿವಮೊಗ್ಗ ಕ್ಷೇತ್ರದ ಫಲಿತಾಂಶದ ಬಗ್ಗೆ ಕೋಟ್ಯಂತರ ರೂಪಾಯಿ ಬೆಟ್ಟಿಂಗ್ ನಡೆಯುತ್ತಿದೆ. ಬೆಂಗಳೂರಿನ ವಿನಯ್ ಭಂಡಾರಿ ಹೆಸರು ಇದರಲ್ಲೂ ಬಹಳ ಕೇಳಿಬರುತ್ತಿದೆ. ಈ ಭಂಡಾರಿ ಚುನಾವಣೆ ಟೈಂನಲ್ಲಿ ಬಂಗಾರಪ್ಪನವರ ಪಟಾಲಂಗೆ ಬೆಂಗಳೂರಿನ ಹವಾಲ ಲಿಂಕ್ ಮೂಲಕ ಶಿವಮೊಗ್ಗಕ್ಕೆ ಹಣ ಸರಬರಾಜು ಮಾಡಿಸಿದ ಮನುಷ್ಯ. ■

Play boy ಸೆಕ್ಸ್ ಪತ್ರಿಕೆಯು, ಮಿಲ್ಕ್‌ಶೇಕೂ ಮಾಲಿಬು ವೈನ್ ಡ್ರಿಂಕೂ.... ಹಾಗೂ ರಾಗವೇಶ್ವರನು




ಮೇ 6 ರಂದು ಮಲ್ಲಿಕಾ ಗೋಕರ್ಣಕ್ಕೆ ಬರುವ ಮೊದಲು ಅಮೆರಿಕದಲ್ಲಿ ಎಲ್ಲಿದ್ದಳು, ಏನು ಮಾಡುತ್ತಿದ್ದಳೆಂಬ ವಿವರ ಇಲ್ಲಿದೆ. ಅಮೆರಿಕದ ಕುಖ್ಯಾತ ಸೆಕ್ಸ್ ಪತ್ರಿಕೆಯಾದ ಪ್ಲೇಬಾಯ್‌ನವರು ತಮ್ಮ ಪರ್‌ಫ್ಯೂಮ್ ಲಾಂಚ್ ಮಾಡುವಂತೆ ಈಕೆಯನ್ನು ಕೇಳಿದ್ದರು. ಅದೇ ಹೊತ್ತಿಗೆ ಮಲ್ಲಿಕಾ ಹೆಸರಿನ ಮಿಲ್ಕ್‌ಶೇಕ್ ಒಂದನ್ನು ಅವಳು ಬಿಡುಗಡೆ ಮಾಡಿದ್ದಳು. ಗೋಕರ್ಣಕ್ಕೆ ಹೊರಡುವ ಮೊದಲು ಕ್ಯಾಲಿಫೋರ್ನಿಯಾದಲ್ಲಿ ಮಾಲಿಬು ವೈನ್ ಒಂದನ್ನು ಅರೆಬೆತ್ತಲೆ ನಿಂತು ಸ್ವತಃ ಕುಡಿದು ಮಾರ್ಕೆಟ್ಟಿಗೆ ಬಿಡುಗಡೆ ಮಾಡಿದ್ದಳು. ಇಂತಾ ಒಂದು ಆಕೃತಿಯನ್ನು ರಾಗವೇಶ್ವರ 'ಪರಿಶುದ್ಧ ಆತ್ಮ' (Pure soul) ಎಂದು ಹೊಗಳಿದ್ದಾನೆಂದರೆ ಹಿಂದೂ ಧರ್ಮದ ಗತಿ ಏನಾಗಬೇಡ? ಮಲ್ಲಿಕಾಳ ಲೈಫ್‌ಸ್ಟೈಲ್ ಬಹುತೇಕ ಹೀಗೆ ಇರುತ್ತವೆ. ಅದು ಅವಳ ಜಗತ್ತು, ಅವಳ ಸಿನಿಮಾಗಳೂ ಬಹುತೇಕ ಹೀಗೇ ಇರುತ್ತವೆ. 2003 ರಲ್ಲಿ ಬಂದ 'ಖ್ವಾಯಿಶ್' ಹಿಂದಿ ಸಿನಿಮಾದಲ್ಲಿ 17 ಕಿಸ್ ಸೀನ್‌ಗಳಲ್ಲಿ ಈಕೆ ಭಾಗಿಯಾಗಿ ದಾಖಲೆ ಸ್ಥಾಪಿಸಿದ್ದಳು. 2004 'ಮರ್ಡರ್' ಹಿಟ್ ಆಗಲು ಮಲ್ಲಿಕಾಳ ದೇಹ ಪ್ರದರ್ಶನ, ಸೆಕ್ಸ್ ಸೀನ್‌ಗಳೇ ಕಾರಣವಾಗಿದ್ದವು.

ಈಗಿನ 'ಹಿಸ್ಸ್.....' ಸಿನಿಮಾದಲ್ಲಿ ಮಲ್ಲಿಕಾಗೆ ಹಾವಿನ ಪಾತ್ರ, ಅದರಲ್ಲೂ ಹೇರಳ ಸೆಕ್ಸ್ ದೃಶ್ಯಗಳಿವೆಯಂತೆ.

ಬಹುಶಃ ರಾಗವೇಶ್ವರ ಸ್ವಾಮಿ ಈ ಸಿನಿಮಾಗಳನ್ನೆಲ್ಲಾ ಹತ್ತಾರು ಸಾರಿ ಕದ್ದುಕದ್ದು ನೋಡಿನೋಡಿ ಕೊನೆಗೆ ಅಭಿಮಾನ ತಡೆದುಕೊಳ್ಳಲಾಗದೆ ಅರ್ಜೆಂಟಾಗಿ ಮಲ್ಲಿಕಾಳನ್ನು ಕರೆಸಿಕೊಂಡಿರಬೇಕು ಎಂದು ಜನರೇ ಆಡಿಕೊಳ್ಳುತ್ತಿದ್ದಾರೆ.

"ಓ ಮಲ್ಲಿಕಾ..... ನಿನಗೇನು ಕೊಡಲಿ ಹೃದಯದಲ್ಲಿರುವ ಪ್ರೀತಿಯ ಹೊರತಾಗಿ" ಅಂದನಾ ರಾಗವೇಶ್ವರ ಸ್ವಾಮಿ



ಸಾರ್ವಜನಿಕರಿಗೆ, ಮೀಡಿಯಾಗಳಿಗೆ ಪ್ರವೇಶ ನಿಷೇಧಿಸಿದ್ದ ಮಲ್ಲಿಕಾ-ಕೌಬಾಯ್ ಸ್ವಾಮಿ ಭೇಟಿ ಸಂದರ್ಭದಲ್ಲಿ ಇದ್ದವರು ಬೆರಳೆಣಿಕೆಯಷ್ಟು ಜನ ಮಾತ್ರ. ಅವರಲ್ಲೊಬ್ಬನಿಗೆ ಅದೇನು ಅಸಹ್ಯ ಅನ್ನಿಸಿತೊ ಏನೋ ತನ್ನ ಮೊಬೈಲ್ ಕ್ಯಾಮರಾ ಬಳಸಿ ಈ ಹೋರಿ-ಪೋರಿಗಳ ಒಂದಷ್ಟು ಫೋಟೋ ತೆಗೆದಿಟ್ಟುಕೊಂಡ. (ನಮಗೆ ಸಿಕ್ಕಿರುವುದು ಅವೇ ಫೋಟೋಗಳು). ಇದು ಧಾರ್ಮಿಕ ಸಭೆಯಾಗಿದ್ದರೂ ಮಲ್ಲಿಕಾಳ ಮೈಮಾಟ, ಸಾಮೀಪ್ಯ, ಚಮಕ್ ಎಲ್ಲಾ ಸೇರಿ ಸ್ವಾಮಿ ಚಿತ್ತ ಕದಡಿಹೋಗಿರಬಹುದು ಹಾಗಾಗಿ ಒಬ್ಬ ಧರ್ಮಗುರುವಿಗಿರಬೇಕಾದ ಸಭ್ಯತೆಯನ್ನು ಮೀರಿ ಮಾತನಾಡಿದ್ದಾನೆ.

"ಓ ಮಲ್ಲಿಕಾ... ನಮಗಾಗಿ ನೀನಿಷ್ಟು ದೂರದಿಂದ ಬಂದಿರುವೆ, ನಿನಗಾಗಿ ನಾನೇನು ಕೊಡಲಿ, ನನ್ನ ಹೃದಯದಲ್ಲಿರುವ ಪ್ರೀತಿಯ ಹೊರತಾಗಿ" ಅಂತಂತೆ ಈ ಆಂಜನೇಯ ಭಕ್ತ ಸ್ವಾಮಿ.

ಇದಕ್ಕೆ ಆ ಪೋರಿ ಏನುತ್ತರಿಸಿದಳೋ ಏನೊ?

ಒಬ್ಬಳು ಸೆಕ್ಸ್ ಬಾಂಬ್!

ಇನ್ನೊಬ್ಬ ಮಠಾಧೀಶ!!

ಇವರಿಬ್ಬರೂ ಸೇರಿ ಆಂಜನೇಯನನ್ನು ಹುಟ್ಟಿಸಿದ ಘಟನೆ ಗೋಕರ್ಣದಲ್ಲಿ ನಡೆದಿದೆ!!!

ಹವ್ಯಕ ಬ್ರಾಹ್ಮಣರ ಜಗದ್ಗುರು ಹಾಗೂ ಕುಖ್ಯಾತ ಗೋತಳಿ ಸಂರಕ್ಷಕ ರಾಗವೇಶ್ವರ ಭಾರತೀ ಸ್ವಾಮಿ ಬೆದೆಗೆ ಬಂದ ಹೋರಿ ತರ ಆಡುತ್ತಿದ್ದಾನೆ. ಇದಕ್ಕೆ ಸಾಕ್ಷಿ ಎಂಬಂತೆ ಯಾರೂ ನಿರೀಕ್ಷಿಸಿರದ ತಿಕ್ಕಲು ಘಟನೆಯೊಂದು ಮೊನ್ನೆ ಮೇ 6ರಂದು ಗೋಕರ್ಣದಲ್ಲಿ ನಡೆದಿದೆ.


ಬಾಲಿವುಡ್‌ನ ಸೆಕ್ಸಿ ನಟಿ ಮಲ್ಲಿಕಾ ಶೆರಾವತಳನ್ನು ತನ್ನ ಬಳಿಗೆ ಕರೆಸಿಕೊಂಡು ಅವಳ ಸುತ್ತಾ ಆರುನೂರು ಕಮಲದ ಹೂ ಇರಿಸಿ, ಪೂಜೆ ಮಾಡಿಸಿ ಕಳಿಸಿಕೊಟ್ಟಿದ್ದಾನೆ ಈ ಕೌಬಾಯ್ ಸ್ವಾಮಿ. ಅಷ್ಟೇಅಲ್ಲ, ಈ ವಿಶೇಷ ಪೂಜೆಗೆಂದು ಮಂಗಳೂರು ಮತ್ತು ಕೇರಳದ ಹಲವಾರು ಪೂಜಾರಿಗಳನ್ನು ಈ ಸಗಣಿ ಸ್ವಾಮಿ ಕರೆಸಿದ್ದನಂತೆ.

ಈ ಮಲ್ಲಿಕಾ ಶೆರಾವತ್ ಯಾರೆಂದು ಬಹುತೇಕರಿಗೆ ಗೊತ್ತಿರುತ್ತದೆ.

ಹಿಂದಿ ಸಿನಿಮಾಗಳಲ್ಲಿ ದಿನಬೆಳಗಾದರೆ ಅರೆಬೆತ್ತಲೆಯಾಗಿ ನಟಿಸುವ ಈ ನಟಿ ಸೆಕ್ಸು ಪಕ್ಸು ಎಂದು ಭಿಡೆಯಿಲ್ಲದೆ ಮಾತಾಡುತ್ತಿರುತ್ತಾಳೆ. ಇವಳ ಯಾವುದೇ ಹತ್ತು ಫೋಟೋ ನೋಡಿದರೂ ಅದರಲ್ಲಿ ಒಂಬತ್ತು ಫೋಟೋಗಳಲ್ಲಿ ಬೆತ್ತಲೆಗೆ ಹತ್ತಿರದ ಪೋಸ್ ನೀಡಿರುತ್ತಾಳೆ.

ಇಂಥ ಮಲ್ಲಿಕಾಳೆಂಬ ಪೋರಿಯ ಜೊತೆ ಸೇರಿ ಈ ಕೌಬಾಯ್ ಹೋರಿ ಏನನ್ನು ಮಾಡಲು ಹೊರಟಿದೆ ಎಂಬುದೇ ಬಹಳ ಇಂಟರೆಸ್ಟಿಂಗ್ ಆದ ಪ್ರಹಸನ.

ಈ ತಿಕ್ಕಲು ರಾಗವೇಶ್ವರ ಸ್ವಾಮಿಗೆ ಅದ್ಯಾವ ಪಿತ್ತ ನೆತ್ತಿಗೇರಿತ್ತೋ, ಇಲ್ಲಾ ಯಾವ ಗಳಿಗೆಯಲ್ಲಿ ವಿಕಾರ ಯೋಚನೆ ತಲೆಯೆತ್ತಿತ್ತೋ ಏನೋ? ಜನ ಏನೆಂದು ಕೊಂಡಾರು ಎಂತಲೂ ಯೋಚಿಸದೆ ಅವತ್ತಿನ ಪೂಜಾ ಸಮಯದಲ್ಲಿ ಮಲ್ಲಿಕಾಗೆ "ನಾನು ನಿನಗೇನು ಕೊಡಲಿ, ನನ್ನ ಹೃದಯದಲ್ಲಿರುವ ಪ್ರೀತಿ ಹೊರತಾಗಿ" ಎಂತಲೂ ಬಡಬಡಿಸಿದ್ದಾನೆ.



ರಾಘವೇಶ್ವರ ಮಲ್ಲಿಕಾ ಜೊತೆ

ತಮ್ಮ ಜಾತಿಯ ಈ ಪಡ್ಡೆ ಸ್ವಾಮಿ ಗೋತಳಿ ರಕ್ಷಿಸುತ್ತೇನೆಂದು ಹೊರಟು ಹೀಗೆ ಸಿನಿಮಾ ನಟಿಯ ಮೋಹಕ್ಕೆ ಬಿದ್ದಿರುವುದನ್ನು ನೋಡಿ ಶಿವಮೊಗ್ಗದಿಂದ ಹಿಡಿದು ಗೋಕರ್ಣದವರೆಗೂ ಹವ್ಯಕ ಭಕ್ತರು ತಲೆ ಚಚ್ಚಿಕೊಳ್ಳುತ್ತಿದ್ದಾರೆ. ಈ ಕೌಬಾಯ್ ಸ್ವಾಮಿಗೆ ಗೋ ಸಂರಕ್ಷಣೆಗೆಂದು ಅನಾಮತ್ತು ನೂರು ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವ ಬಿಜೆಪಿಗಳು 'ಯಥಾ ರಾಜಾ ತಥಾ ಪ್ರಜಾ' ಅಂತಂದುಕೊಂಡು ಸುಮ್ಮನಾಗಿಬಿಟ್ಟಿದ್ದಾರೆ.

ಇಷ್ಟಕ್ಕೂ ರಾಗವೇಶ್ವರ ಸ್ವಾಮಿ ಮಲ್ಲಿಕಾ ಮೋಹಕ್ಕೆ ಬೀಳುವಂತಹ ಸಗಣಿ ತಿನ್ನುವ ಕೆಲಸ ಯಾಕೆ ಮಾಡಿದ ಅಂತಾ ಹುಡುಕಿದರೆ ನಿಮಗೆ ಅದರಲ್ಲೂ ಒಂದು ಹಣ ಎತ್ತುವ ಸ್ಕೀಂ ಕಾಣುತ್ತದೆ.

ಅದೇನೆಂದರೆ

ಆಂಜನೇಯ ಜನ್ಮ ಸ್ಥಾನ ಸಂಶೋಧನೆ ಮತ್ತು ವಿಗ್ರಹ ಸ್ಥಾಪನೆ!

● ಬಿಳಿದಾಳೆ ಈಶ

ಇದು ಅಂತಿಂಥಾ ಆಂಜನೇಯನಲ್ಲ, ವಿಶ್ವದಲ್ಲೇ ಅತೀ ಎತ್ತರದ ಆಂಜನೇಯ ವಿಗ್ರಹವಂತೆ. ಜೊತೆಗೆ ಹದಿನೈದು ಅಂತಸ್ತಿನ ದೇಗುಲವೂ ತಲೆ ಎತ್ತಲಿದೆಯಂತೆ. ಗೋಕರ್ಣದ ಪಕ್ಕದ ಕುಡ್ಲೆ ಬೀಚ್‌ನಲ್ಲಿ ಅಶೋಕೆ ಎಂಬ ಸ್ಥಳವಿದೆ. ಇದೇ ಆಂಜನೇಯ ಜನಿಸಿದ ಸ್ಥಳ ಎಂದ ರಾಗವೇಶ್ವರ ಕಂಡುಹಿಡಿದು ಈಗ ಪ್ರಚಾರ ಶುರುವಿಟ್ಟುಕೊಂಡಿದ್ದಾನೆ.

ಆಜನ್ಮ ಬ್ರಹ್ಮಚಾರಿ ಆಂಜನೇಯನ ಭಕ್ತನಂತೆ ಪೋಸು ಕೊಡುತ್ತಿರುವ ರಾಗವೇಶ್ವರನಿಗೆ ಈ ಮಲ್ಲಿಕಾ ಯಾವ ಹುಲ್ಲುಗಾವಲಿನಲ್ಲಿ ಹೇಗೆ ಸಿಕ್ಕಳೆಂಬುದನ್ನು ಆಮೇಲೆ ನೋಡೋಣ. ಅದಕ್ಕೂ ಮೊದಲು ಆಂಜನೇಯ ಜನ್ಮಸ್ಥಾನದ ಕತೆಗೆ ಬರುವುದಾದರೆ ....

ಹೊಸನಗರದ ರಾಮಚಂದ್ರಾಪುರ ಮಠದ ಪೀಠಾಧಿಪತಿಯಾಗಿ ಯಾವುದೇ ಇನ್‌ಕಮ್ ಇಲ್ಲದೆ ಬಡಕಲು ಹಸುವಿನಂತಿದ್ದ ರಾಗವೇಶ್ವರ ಸ್ವಾಮಿ ಕಳೆದೈದು ವರ್ಷಗಳಿಂದ ದಿಢೀರನೆ ಗೋರಕ್ಷಣೆ ಎಂದು ಚೀರಿಕೊಳ್ಳುತ್ತಾ ಸ್ವಲ್ಪ ಸುದ್ದಿಯಾಗಿದ್ದಾನೆ. ಒಂದಷ್ಟು ಹಣವೂ ಹರಿದಾಡುತ್ತಿದೆ. ಅಷ್ಟೇ ಅಲ್ಲದೆ, ಗೋಕರ್ಣ ದೇವಸ್ಥಾನವನ್ನು ಅಕ್ರಮವಾಗಿ ವಶಪಡಿಸಿಕೊಂಡು ಅದೀಗ ಹೈಕೋರ್ಟ್‌ನಲ್ಲಿ ವಿಚಾರಣೆಯಾಗುತ್ತಿದೆ.


ಈ ಮಧ್ಯೆ ಏನಾಯಿತೆಂದರೆ ರಾಗವೇಶ್ವರನ ಶೋಕಿಗಳಿಗೆ, ಖರ್ಚುಗಳಿಗೆ ದುಡ್ಡಿರದಂತಾಗಿ ಆ ಕೊರತೆ ನೀಗಿಸಿಕೊಳ್ಳಲು ಈಗ ಆಂಜನೇಯ ಜನ್ಮ ಸ್ಥಳದ ವಿಚಾರ ಹಾಗೂ ಬೃಹತ್ ವಿಗ್ರಹ ಸ್ಥಾಪನೆಗೆ ಚಾಲನೆ ಕೊಡುತ್ತಿದ್ದಾನೆಂಬ ಅನುಮಾನಗಳಿವೆ.

ಗೋಕರ್ಣದ ಕುಡ್ಲೆ ಬಳಿ ಹನುಮಂತ ಹುಟ್ಟಿದ್ದನೆಂಬ ಪ್ರತೀತಿ ಆಗಾಗ್ಗೆ ಕೇಳಿಬಂದಿರುವುದುಂಟು. ಈ ಹಿಂದೆ ಚಡ್ಡಿ ನಾಯಕ ಅಶೋಕ ಸಿಂಘಾಲ್ ಕೂಡ ಒಂದು ಸಾರಿ ಇಲ್ಲಿಗೆ ಬಂದು ಪೂಜೆ ಮಾಡಿ ಹೋಗಿದ್ದ. ಆದರೆ ಆಗ ಇದೂ ಒಂದು ವಿವಾದಕ್ಕೆ ಕಾರಣವಾಗುತ್ತಿದೆ.

▶▶▶18



ರಾಘವೇಶ್ವರ ಸ್ವಾಮಿ-ಮಲ್ಲಿಕಾ ಶೆರಾವತ್



ಪೋರಿ ಹಿಂದೆ ಹೋರಿ

ಕನ್ನಡಿಗರ ತೆರಿಗೆ ಹಣ ಮಲ್ಲಿಕಾ ಸ್ಕರ್ಟಿಗೆ!

ಈ ಬಾರಿಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅನಾಮತ್ತಾಗಿ ಒಂದು ನೂರು ಕೋಟಿ ರೂಪಾಯಿಗಳನ್ನು ಗೋ ತಳಿ ರಕ್ಷಣೆಗೆಂದು ರಾಗವೇಶ್ವರ ಸ್ವಾಮಿ ಪಾದಕ್ಕೆ ಕೊಟ್ಟಿದ್ದಾರೆ. ಆದರೆ ಇದರ ಖರ್ಚುಗಳ ಲೆಕ್ಕಾ ಬುಕ್ಕು ಕೇಳುವವರ್‍ಯಾರು?

ಮೊನ್ನೆ ಅಮೆರಿಕದಿಂದ ಗೋಕರ್ಣಕ್ಕೆ ಮಲ್ಲಿಕಾ ಬಂದುಹೋದ ಖರ್ಚೇ ಹತ್ತು ಲಕ್ಷ ಮೀರಿದೆ. ಅವಳ ವಿಮಾನದ ಖರ್ಚು, ಕಾರು, ರೆಸಾರ್ಟು ಬಾಡಿಗೆ..... ಎಷ್ಟಾಗಿರಬೇಡ? ಅಷ್ಟೇ ಅಲ್ಲ, ಈ ಸುಂದರಿಯ ಮೈ ಕುಲುಕಿ ನೋವಾಗಬಾರದೆಂದು ಗೋಕರ್ಣದಿಂದ ಕುಡ್ಲೆ ಬೀಚ್‌ವರೆಗೆ ನೀಟಾದ ಹೊಸ ರಸ್ತೆಯನ್ನೇ ನಿರ್ಮಿಸಲಾಯಿತು. ಜೊತೆಗೆ ಈ ಮಲ್ಲಿಕಾ ಎಂಥ ಚಮಕ್ ಹೆಂಗಸೆಂದರೆ ಅವಳು ಎಲ್ಲಿಗೇ ಹೋದರೂ ದಿನಕ್ಕಿಷ್ಟು ಫೀಸೆಂದು ವಸೂಲಿ ಮಾಡಿಕೊಳ್ಳುತ್ತಾಳೆ. ಅದು ಹತ್ತು ಲಕ್ಷಕ್ಕಿಂತ ಕಡಿಮೆ ಇರಲಾರದು.

ಇದನ್ನೆಲ್ಲಾ ಲೆಕ್ಕಾ ಹಾಕಿದರೆ ರಾಗವೇಶ್ವರ ಸ್ವಾಮಿಯು ಕನಿಷ್ಠ 25 ಲಕ್ಷ ರೂ.ಗಳನ್ನು ಮಲ್ಲಿಕಾ ಸ್ಕರ್ಟಿಗೆ ಸುರಿದಿರಲಿಕ್ಕೂ ಸಾಕು.

ಯಾರಪ್ಪನ ಮನೆ ದುಡ್ಡಿದು? ಕನ್ನಡಿಗರ ತೆರಿಗೆ ಹಣ ಅಲ್ಲವಾ.



ಇದು ಆಂಜನೇಯ ಹುಟ್ಟಿದ ಜಾಗವಂತೆ!

ದರ್ಶನ್ ಸೋದರರಿಂದ ತಾಯಿಯೇಕೆ ದೂರವಾದಳು?



ಮೊನ್ನೆಯಷ್ಟೇ ಇಡೀ ವಿಶ್ವ 'ತಾಯಂದಿರ ದಿನಾಚರಣೆ' ...ನ್ನು ಆಚರಿಸಿ ಆಕೆಯನ್ನು ಗೌರವಿಸಿತು. ಇದರ ಬೆನ್ನಿಗೇ ಕನ್ನಡದ ಖ್ಯಾತ ನಟನೊಬ್ಬ ತನ್ನ ಸಹೋದರ ...ಜತೆಗೂಡಿ ಹೆತ್ತ ತಾಯಿಯನ್ನೇ ದೂರ ಮಾಡಿಕೊಂಡ.

ತಮ್ಮನ್ನು ಜೀವಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದ, ಕಷ್ಟದ ...ಗಳಲ್ಲಿ ತಮಗೆ ಆಸರೆಯಾಗಿ, ತಮ್ಮ ಬೆನ್ನುತಟ್ಟಿ ...ತ್ಸಾಹಿಸಿದ ತಾಯಿಯನ್ನು ತೊರೆದು ಆಕೆಯಿಂದ ...ರವಾಗಿರುವುದು ಬೇರೆ ಯಾರೂ ಅಲ್ಲ; ಛಾಲೆಂಜಿಂಗ್ ...ಸ್ ದರ್ಶನ್ ಮತ್ತು ಆತನ ಸಹೋದರ ದಿನಕರ್.

ಎಂತೆಂಥಾ ಕಷ್ಟಕರ ದಿನಗಳಲ್ಲೂ, ಕ್ಲಿಷ್ಟಕರ ಸಂದರ್ಭ...ಲ್ಲೂ ಒಂದಾಗಿದ್ದ ಕುಟುಂಬದಲ್ಲಿ ಅನಿರೀಕ್ಷಿತವಾಗಿ ...ದುಬರುವ ಯಶಸ್ಸು, ಹಣ, ಕೀರ್ತಿಗಳು ಎಷ್ಟು ...ಗ ಒಡಕು ಮೂಡಿಸಿಬಿಡುತ್ತದೆ ಎಂಬುದಕ್ಕೆ ಈ ...ನೆ ಒಂದು ಜೀವಂತ ಸಾಕ್ಷಿ. 'ಮಕ್ಕಳೇ ನನ್ನ ಆಸ್ತಿ' ...ಮ ನಂಬಿ ಅವರ ಶ್ರೇಯೋಭಿವೃದ್ಧಿಗಾಗಿಯೇ, ಉತ್ತಮ ...ಷ್ಯಕ್ಕಾಗಿಯೇ ಜೀವ ತೇಯುವ ತಾಯಿ ಒಂದೆಡೆ ...ದರೆ, ಮತ್ತೊಂದೆಡೆ ಮಾರ್ಗ ಮಧ್ಯದಲ್ಲಿ ಎಲ್ಲಿಂದಲೋ ...ದು ಸೇರಿಕೊಂಡು ಸಂಸಾರದ ಭಾಗವಾಗುವ ...ಸೆಯಂದಿರು. ಈ ತಾಯಿ ಮತ್ತು ಸೊಸೆಯಂದಿರ ...ವಿನ ಚಿಕ್ಕಮಟ್ಟ ಕಲಹಗಳು, ಪೊಸೆಸಿವ್‌ನೆಸ್‌ಗಳು ...ಬು ಸಂಸಾರವೊಂದನ್ನು ಹೇಗೆ ಒಡೆದುಹಾಕುತ್ತವೆ ...ಬುದಕ್ಕೆ ಇದೊಂದು ನಿದರ್ಶನ.

ತಾಯಿಯೇ ದೇವರು!

...ಸಾಂಸಾರಿಕ ಕಲಹಗಳು, ಹೆತ್ತವರೊಂದಿಗೆ ಮನಸ್ತಾಪ ... ಯಾವ ಕುಟುಂಬದಲ್ಲಿರುವುದಿಲ್ಲ ಹೇಳಿ? ತಂದೆ, ...ಯಿ, ಗಂಡ, ಹೆಂಡತಿ, ಅತ್ತೆ, ಸೊಸೆ, ಮಕ್ಕಳು – ...ಗೆ ಎಲ್ಲರೂ ಒಟ್ಟುಗೂಡಿ ಒಂದೇ ಸೂರಿನಡಿ ಬದುಕು...ಗ ಚಿಕ್ಕಪುಟ್ಟ ಜಗಳಗಳು, ಮನಸ್ತಾಪಗಳು ಸ್ವಾಭಾವಿಕ. ...ತ್ತಿನ ಕಾಲದಲ್ಲಂತೂ ಅಂಥ ಪುಟ್ಟ ...ಳಗಳಿಲ್ಲದಿದ್ದರೆ ಅದು ಮನೆಯೇ ... ಎನ್ನುವಂತಿರುತ್ತದೆ.

ಆದರೆ ದರ್ಶನ್‌ನ ಮನೆಯ ಮನಸ್ತಾಪ ಇದಕ್ಕಿಂತ ...ದಿಷ್ಟು ಭಿನ್ನವಾದದ್ದು. ಆ ಭಿನ್ನತೆಯೇ ಇಂದು ...ಯಿ-ಮಕ್ಕಳನ್ನು ದೂರ ಮಾಡಿದೆ.

ಹಾಗೇ ನೋಡಿದರೆ ದರ್ಶನ್, ಆತನ ತಮ್ಮ ದಿನಕರ್ ...ಗು ಅವರಿಬ್ಬರ ತಾಯಿ ಮೀನಾ ಅವರ ನಡುವೆ ...ನೋ ವಿಶೇಷವಾದ ಪ್ರೀತಿ, ಮಮತೆಗಳಿದ್ದವು. ...ನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಮುಂದೊಂದು ದಿನ ...ರ ನಡುವೆ ಸಣ್ಣದೊಂದು ಮನಸ್ತಾಪ ಬರಬಹುದು ...ಬ ಸುಳಿವೂ ಇಲ್ಲದಂತಹ ಅನ್ಯೋನ್ಯ ಸಂಬಂಧವದು. ...ಸಂಬಂಧವನ್ನು ಸರಿಯಾಗಿ ಗ್ರಹಿಸಬೇಕೆಂದರೆ ದರ್ಶನ್ ...ಸ್ಟಾರ್ ಆಗಿ ಬೆಳೆದು ಬಂದ ದಾರಿಯನ್ನೊಮ್ಮೆ ...ಲೋಕಿಸಬೇಕು.

ಆಗಷ್ಟೇ ದರ್ಶನ್ ಇನ್ನೂ ಪ್ರೌಢಾವಸ್ಥೆಗೆ ಕಾಲಿಡುತ್ತಿದ್ದ



ತಂದೆ ತೂಗುದೀಪ ಶ್ರೀನಿವಾಸ್ ಅನಾರೋಗ್ಯಕ್ಕೆ ತುತ್ತಾಗಿ ಸಾವಿನಂಚಿಗೆ ಬಂದು ನಿಂತಿದ್ದರು. ಅವರ ಎರಡೂ ಕಿಡ್ನಿಗಳು ಫೇಲ್ ಆಗಿದ್ದವು. ತೂಗುದೀಪ್ ಶ್ರೀನಿವಾಸ್‌ರಂಥ ದೊಡ್ಡ ಕಲಾವಿದನೊಬ್ಬ ಹೀಗೆ ನಿಸ್ಸಹಾಯಕರಾಗಿ ಸಾವಿನಂಚಿಗೆ ಬಂದು ನಿಂತಾಗಲೂ ಅವರಿಗೆ ಯಾರ ಸಹಾಯವೂ ದೊರಕಲಿಲ್ಲ. ಗಂಡನನ್ನು ಹೇಗಾದರೂ ಸರಿ ಉಳಿಸಿಕೊಳ್ಳಬೇಕೆಂಬ ಹಠಕ್ಕೆ ಬಿದ್ದ ಮೀನಾ ತಮ್ಮ ಕಿಡ್ನಿಯೊಂದನ್ನು ಕೊಟ್ಟು ಗಂಡನನ್ನು ಬದುಕಿಸಿದ್ದರು. ತೂಗುದೀಪ ಅವರ ಚಿಕಿತ್ಸೆಗೆಂದು ಕೈಯಲ್ಲಿದ್ದ ಹಣವನ್ನು ವೆಚ್ಚಮಾಡಿದ್ದಲ್ಲದೆ, ಗೊತ್ತಿದ್ದವರಿಂದ ಮೈತುಂಬ ಸಾಲ ಮಾಡಿಕೊಂಡಿದ್ದರು. ಆದರೇನು ಬಂತು. ಕಡೆಗೊಂದು ದಿನ ಅನಾರೋಗ್ಯದಿಂದಲೇ ತೂಗುದೀಪ ಶ್ರೀನಿವಾಸ್ ಕಣ್ಮುಚ್ಚಿಕೊಂಡೇ ಬಿಟ್ಟರು.



ಅಷ್ಟುಹೊತ್ತಿಗಾಗಲೇ ತೂಗುದೀಪ ಸಂಪಾದಿಸಿದ್ದ ಮೈಸೂರಿನ ಮನೆ ಮತ್ತು ಹಳೇ ಮಾಡೆಲ್ ಕಾಂಟೆಸಾ ಕಾರು – ಈ ಎರಡನ್ನು ಬಿಟ್ಟರೆ ಅವರದ್ದು ಅಂತಹ ಬೇರೆ ಯಾವ ಆಸ್ತಿಯೂ ಉಳಿದಿರಲಿಲ್ಲ. ಒಮ್ಮೆ ಮಾಡಿಕೊಂಡಿದ್ದ ಸಾಲದ

ಬಡ್ಡಿಹಣ ಕಟ್ಟಲೂ ಕಾಸಿಲ್ಲದೆ ದರ್ಶನ್ ತಂದೆಯ ಕಾಂಟೆಸಾ ಕಾರನ್ನೇ ಅಡವಿಟ್ಟುಬಂದಿದ್ದರು. ಕಿತ್ತುತಿನ್ನುವ ಬಡತನದ ಜೊತೆಗೆ ಸಾಲದ ಬಾಧೆ ಅತಿಯಾಗಿದ್ದ ದಿನಗಳಲ್ಲೂ ಗಂಡ ಬಿಟ್ಟು ಹೋಗಿದ್ದ ಏಕೈಕ ಆಸ್ತಿಯಾದ ಮನೆಯನ್ನು ಮಾತ್ರ ಮೀನಾ ಎಂದಿಗೂ ಮಾರಲು ಮುಂದಾಗಲಿಲ್ಲ.

ತಂದೆಯ ನಿಧನದೊಂದಿಗೆ ದರ್ಶನ್ ಅಗಾಧವಾಗಿ ನೊಂದು ತತ್ತರಿಸಿಹೋಗಿದ್ದ; ಮನೆಯ ಜವಾಬ್ದಾರಿಗಳು, ಕಷ್ಟಗಳು ಒಮ್ಮೆಲೇ ಆತನ ಹೆಗಲೇರಿದ್ದವು. ಆತನಿಗೆ ಬದುಕು-ಭವಿಷ್ಯಗಳ ಬಗ್ಗೆ ಭರವಸೆಯೇ ಹೊರಟು ಹೋಗಿದ್ದವು. ಅಂಥ ಸಂದರ್ಭದಲ್ಲಿ ಅವನಿಗೆ ಬದುಕಿನ ಬಗ್ಗೆ ಭರವಸೆಯನ್ನು ಕೊಟ್ಟದ್ದು, ಅದನ್ನು ಸಾಧಿಸುವುದಕ್ಕೆ ಆತನಲ್ಲಿ ಆತ್ಮವಿಶ್ವಾಸವನ್ನು ತುಂಬಿದ್ದು ಆತನ ತಾಯಿ ಮೀನಾ.

ತಾಯಿ 'ದೇವತೆ'!

ಹೇಗಾದರೂ ಮಾಡಿ ತಮ್ಮ ಮಕ್ಕಳನ್ನೂ ಚಿತ್ರರಂಗದಲ್ಲಿ ನೆಲೆಗೊಳಿಸಬೇಕು ಎಂದು ಮೀನಾ ಮಾಡಿದ ಭಗೀರಥ ಪ್ರಯತ್ನ ಅಷ್ಟಿಷ್ಟಲ್ಲ. ತಮ್ಮ ಪತಿ ತೂಗುದೀಪ ಶ್ರೀನಿವಾಸ್‌ಗೆ ಹತ್ತಿರವಿದ್ದ ಎಲ್ಲ ನಿರ್ದೇಶಕರು, ನಿರ್ಮಾಪಕರು, ತಂತ್ರಜ್ಞರ ಮನೆ ಬಾಗಿಲಿಗೆ ಹೋಗಿ ತಮ್ಮ ಮಗನಿಗೊಂದು ಅವಕಾಶ ಕೊಡಬೇಕೆಂದು ಅಂಗಲಾಚುತ್ತಿದ್ದರು. ಕೊನೆಗೂ ಆಕೆಯ ಪ್ರಯತ್ನಕ್ಕೆ ಚಿಕ್ಕ ಪ್ರತಿಫಲವಾದರೂ ಸಿಕ್ಕಿತು. ಖ್ಯಾತ ಛಾಯಾಗ್ರಾಹಕ ಗೌರಿ ಶಂಕರ್ ಅವರು ದರ್ಶನ್‌ನನ್ನು ಕರೆದು ತಮ್ಮ ಸಹಾಯಕ ಛಾಯಾಗ್ರಾಹಕನಾಗಿ ಸೇರಿಸಿಕೊಂಡರು. ಅಲ್ಲಿಂದಲೇ ದರ್ಶನ್‌ನ ಅದೃಷ್ಟ ಖುಲಾಯಿಸಿಬಿಟ್ಟಿತು. ನಿಜ ಹೇಳಬೇಕೆಂದರೆ, ಈ ಹೊತ್ತು ದರ್ಶನ್ ಒಬ್ಬ ಸ್ಟಾರ್ ಆಗಿದ್ದಾನೆಂದರೆ ಅದಕ್ಕೆ ಅವನ ತಾಯಿ ಮೀನಾರ ಕೊಡುಗೆ ಅಪಾರವಾದದ್ದು.



ಮಕ್ಕಳ ಏಳ್ಗೆಗಾಗಿ ಹಗಲಿರುಳೂ ಪರಿತಪಿಸಿದ ತಾಯಿಯ ಬಗ್ಗೆ ದರ್ಶನ್‌ಗೆ ಕೂಡಾ ಅಪಾರವಾದ ಗೌರವವಿತ್ತು. ದರ್ಶನ್‌ನನ್ನು ಮೀನಾ ಎಷ್ಟು ಪ್ರೀತಿಸುತ್ತಿದ್ದರೋ ಅದಕ್ಕಿಂತಲೂ ಹೆಚ್ಚಾಗಿ ದರ್ಶನ್ ಅವರನ್ನು ಪ್ರೀತಿಸುತ್ತಿದ್ದರು. ಎಲ್ಲರೆದುರು ತಮ್ಮ ಅಮ್ಮನನ್ನು 'ದೇವತೆ' ಎಂದೇ ಗುಣಗಾನ ಮಾಡುತ್ತಿದ್ದರು.

ಹೀಗೆ ತಾಯಿಯನ್ನು ಸದಾ ತಲೆ ಮೇಲಿನ 'ತೂಗುದೀಪ'ದಂತೆ ಹೊತ್ತು ಮೆರವಣಿಗೆ ಮಾಡುತ್ತ, ಎಲ್ಲಿಲ್ಲದ ಮಾತೃಭಕ್ತಿ ತೋರುತ್ತಿದ್ದ ದರ್ಶನ್ ಮತ್ತು ದಿನಕರ್ ಎಂಬ ಸಹೋದರರು ಯಾಕೆ ತಾಯಿಯನ್ನು ಹೊರಗಟ್ಟಿದರು?

ದುಡ್ಡೇ ಹೆಚ್ಚಾ?

ಚಿತ್ರರಂಗ ಕಂಡ ಅತ್ಯಂತ ಬುದ್ಧಿವಂತ ಮತ್ತು ವ್ಯವಹಾರಸ್ಥ ದರ್ಶನ್. ಆರಂಭದಿಂದಲೂ ಪ್ರೊಫೆಷನಲಿಸಂ‌ಅನ್ನು ಕಾಯ್ದುಕೊಂಡು ಬಂದಿರುವ ದರ್ಶನ್ ಅತಿ ಬೇಗ ಆಸ್ತಿ, ಪಾಸ್ತಿ, ಎಸ್ಟೇಟುಗಳನ್ನು ಮಾಡಿಕೊಂಡ ಜಾಣ. ತನಗೆ ಬರಬೇಕಿರುವ ಸಂಭಾವನೆಯನ್ನು ಜಮೀನು, ಬಂಗಲೆಗಳ ರೂಪದಲ್ಲಿ ಪಡೆಯುವ ದರ್ಶನ್ ಎಂಥಾ ದೊಡ್ಡ ನಿರ್ಮಾಪಕನಿಂದಲೂ ಇಡೀ ಸಂಭಾವನೆಯನ್ನು ಚೆಕ್ ಮೂಲಕ ಹಣ ಪಡೆಯದ ಚತುರ. ಟ್ಯಾಕ್ಸು, ಗೀಕ್ಸು ಎಂದೆಲ್ಲ ತಲೆನೋವೆ ಬೇಡವೆಂದು ದರ್ಶನ್ ಈ ತಂತ್ರ ಅನುಸರಿಸುವುದು ಇಡೀ ಗಾಂಧಿನಗರಕ್ಕೆ ಗೊತ್ತಿರುವ ಸತ್ಯ.

ತಂದೆ ತೂಗುದೀಪ ಶ್ರೀನಿವಾಸ್ ಹೇಳಿರುವ ಕಿವಿಮಾತಿನಂತೆ 'ಊಟದ ತಟ್ಟೆ ಮತ್ತು ಹುಡುಗಿಯರ ಮುಂದೆ ಹೆಚ್ಚು ಹೊತ್ತು ಕೂರಬಾರದು' ಎಂಬುದನ್ನು ಚಾಚೂತಪ್ಪದೆ ಪಾಲಿಸಿಕೊಂಡು ಬಂದಿರುವ ದರ್ಶನ್ ಎದುರಿಗಿರುವವಳು ಎಂಥದ್ದೇ ಸುಂದರಿಯಾದರೂ ಶಾಟ್ ಮುಗಿದ ಮೇಲೆ ಆಕೆಯತ್ತ ಕಣ್ಣೆತ್ತಿಯೂ ನೋಡದ ಪುರುಷ. ಇಂಥ ದರ್ಶನ್ ತಾಯಿಯನ್ನೇ ಕಡೆಗಣಿಸುತ್ತಾನೆ ಎಂದರೆ ಯಾರೂ ಊಹಿಸಲು ಸಾಧ್ಯವಿಲ್ಲ.

ಅಥವಾ ಇವರ ಹೆಂಡತಿಯರ ಕಾಟ ತಾಳಲಾರದೇ ತಾಯಿಯೇ ಹೊರ ಹೋದರಾ? ಪ್ರತಿ ತಿಂಗಳು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಪ್ರಾಣಿ, ಪಕ್ಷಿಗಳನ್ನು ಸಾಕುವ ಛಾಲೆಂಜಿಂಗ್ ಸ್ಟಾರ್ ದರ್ಶನ್‌ಗೆ ಹೆತ್ತ ತಾಯಿಗೆ ಎರಡೊತ್ತು ಊಟ ಹಾಕಿ ಸಾಕುವ ಕಾಳಜಿಯೇ ಇಲ್ಲವಾ? ಏನಾಗಿದೆ ದರ್ಶನ್ ಮತ್ತು ದಿನಕರ್‌ಗೆ? ಇಂಥ ಪ್ರಶ್ನೆಗಳು ಸಹಜವಾಗಿ ಏಳುತ್ತವೆ.


ಆದರೆ, ವಿಚಾರ ಮೇಲ್ನೋಟಕ್ಕೆ ಕಾಣುವಷ್ಟು ಸರಳವಾಗಿಲ್ಲ. ಆಗಿದ್ದೆಲ್ಲವಕ್ಕೂ ದರ್ಶನ್ ಮತ್ತು ದಿನಕರ್ ಅವರನ್ನೇ ಹೊಣೆಗಾರರನ್ನಾಗಿ ಮಾಡುವುದು ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ನಡೆದಿರುವ, ನಡೆಯುತ್ತಿರುವ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ವಾಸ್ತವಾಂಶಗಳು ಅರ್ಥವಾಗುತ್ತವೆ.


ಮದುವೆಯಾಗುವತನಕ ಎಲ್ಲವೂ ಸರಿಯಾಗೇ ಇತ್ತು.

ಮೀನ ಅವರು ಒಂದು ರೀತಿಯಲ್ಲಿ ಸಂಪ್ರದಾಯಬದ್ಧ ಹೆಣ್ಣುಮಗಳು. ಪ್ರೀತಿಯಿಂದ ಸಾಕಿದ ಮಗ ಲವ್ವು-ಗಿವ್ವು ಅಂತಾ 'ದಾರಿ ತಪ್ಪಲು' ಅವಕಾಶ ಮಾಡಿಕೊಡದೆ ತಾನೇ ನೋಡಿದ ವಿಜಯಲಕ್ಷ್ಮಿ ಎಂಬ ಹೆಣ್ಣುಮಗಳೊಂದಿಗೆ ಮದುವೆ ಮಾಡಿಸಿದ್ದರು. ಅಲ್ಲಿಯತನಕ ಎಲ್ಲವೂ ಸರಿಯಾಗೇ ಇದ್ದ ಕುಟುಂಬದಲ್ಲಿ ಮದುವೆಯಾದ ಮೇಲೆ ಸಣ್ಣಸಣ್ಣ ಮನಸ್ತಾಪಗಳು ಆರಂಭವಾದವು. ಅದು ಸಹಜವೇ. ದರ್ಶನ್ ಮದುವೆಯಾದ ಹೊಸತರಲ್ಲಿ ಒಂದಷ್ಟು ದಿನ ಚಂದ್ರಾಲೇಔಟ್‌ನ ಬಾಡಿಗೆ ಬಂಗಲೆಯಲ್ಲೇ ಅಮ್ಮ, ಮಗ, ಸೊಸೆ ಮತ್ತು ಮೈದುನ ವಾಸವಿದ್ದರು. ಕ್ರಮೇಣ ಅತ್ತೆ ಸೊಸೆಯರ ಹೊಂದಾಣಿಕೆ ಕಷ್ಟಕರವಾಗುತ್ತಾ ಹೋಯಿತು. ಅದನ್ನು ಸರಿಪಡಿಸುವುದಕ್ಕೆ ದರ್ಶನ್ ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದವು. ಇಷ್ಟು ವರ್ಷದಿಂದ ಸಾಕಿ-ಸಲುಹಿದ, ಪ್ರೀತಿ, ಮಮತೆ, ವಿಶ್ವಾಸಗಳ ಧಾರೆಯೆರೆದ ತಾಯಿಯೊಂದಿಗಿರಬೇಕೆ ಅಥವಾ ಪ್ರಪಂಚದಲ್ಲಿ ಎಲ್ಲವನ್ನೂ ಬಿಟ್ಟು ತನಗಾಗಿ ಬಂದಿರುವ ಹೆಂಡತಿಯ ಮಾತು ಕೇಳಬೇಕೆ ಎಂಬ ದ್ವಂದ್ವಕ್ಕೆ ಆತ ಒಳಗಾದ. ಕೊನೆಗೆ, ತಾಯಿಯನ್ನು

▶▶▶18

ಸ್ನೇಹಿತರಿಂದಲೂ ದೂರವಾದ ದರ್ಶನ್!







'ಆತನೊಂದಿಗೇ ಬೆಳೆದ, ಆತನ ಕಷ್ಟಕ್ಕೆ ನೆರವಾಗಿದ್ದ ಸ್ನೇಹಿತರಿಂದಲೂ ದರ್ಶನ್ ಇತ್ತೀಚೆಗೆ ದೂರ ಸರಿಯುತ್ತಿದ್ದಾನೆ' ಎನ್ನುವ ಮಾತುಗಳೂ ಕೇಳಿಬರುತ್ತಿವೆ. ಇದಕ್ಕೆ ಇಂಬು ಕೊಡುವಂತೆ ತನ್ನ ಚಡ್ಡಿ ದೋಸ್ತ್ ಅಣಜಿ ನಾಗರಾಜ್ ಮತ್ತು ತನ್ನ ಬಹುತೇಕ ಎಲ್ಲ ಚಿತ್ರಗಳ ವಿತರಕರಾಗಿದ್ದ ಜಯಣ್ಣರೊಂದಿಗೂ ಈಗ ಮುನಿಸಿಕೊಂಡಿದ್ದಾನೆ ದರ್ಶನ್.

...ಮೊದಲಿನ ಅನ್ಯೋನ್ಯತೆಯಿಂದಿರದ ದರ್ಶನ್ ಅಲ್ಲಿನ ತಾಂತ್ರಿಕವರ್ಗದವರೊಂದಿಗೆ ಸದಾ ...ಕೊಂಡಿರುತ್ತಾ, ತನ್ನ ಸ್ಟಾರ್‌ಗಿರಿ ಪ್ರದರ್ಶಿಸುತ್ತಿರುವುದರಿಂದ 'ದರ್ಶನ್ ಹೀಗೇಕಾದರು' ಎಂಬ ಪ್ರಶ್ನೆ ಆತನ ...ನ್ನು ಕಾಡುತ್ತಿದೆ. ...ಮನಸ್ತಾಪಗಳು, ತಾಯಿಯೊಂದಿಗಿನ ವಿರಸ ಮುಂತಾದವುಗಳು ...ಗಳನ್ನು ಮಾನಸಿಕವಾಗಿ ಕಿತ್ತು ತಿನ್ನುತ್ತಿರಬಹುದೇ? ಅವು ಈ ರೀತಿಯಲ್ಲಿ ಅಭಿವ್ಯಕ್ತಗೊಳ್ಳುತ್ತಿರಬಹುದೇ?

ಅದು ನಿಜವಾಗಿದ್ದರೆ, ದರ್ಶನ್ ಅವನ್ನೆಲ್ಲಾ ಮೆಟ್ಟಿನಿಲ್ಲುವ ಮನಸ್ಸು ಮಾಡಬೇಕಿದೆ. ■

ಚಿತ್ರರಂಗ ಮತ್ತು ಮಾತೃವಾತ್ಸಲ್ಯ





ಚಿತ್ರರಂಗದವರ ಮತ್ತು ಹೊರಜಗತ್ತಿನ ನಂಟುಗಳಲ್ಲಿ ಅದೇನೇ ಹುಳುಕು, ಹೇಸಿಗೆಗಳಿದ್ದರೂ ಬಹುತೇಕ ಎಲ್ಲರೂ ಮಾತೃವಾಕ್ಯ ಪರಿಪಾಲಕರೇ!

ಡಾ. ರಾಜ್, ವಿಷ್ಣುವರ್ಧನ್, ರವಿಚಂದ್ರನ್, ಅಂಬರೀಶ್, ಜಗ್ಗೇಶ್‌ರಿಂದ ಹಿಡಿದು ಈಗಿನ ಸುದೀಪ್, ನೆನಪಿರಲಿ ಪ್ರೇಮ್, ಜೋಗಿ ಪ್ರೇಮ್ ಎಲ್ಲರೂ ಈ ಮಾತೃವಾತ್ಸಲ್ಯದಿಂದ ಹೊರತಾದವರಲ್ಲ. ಅದರಲ್ಲೂ ಕಾಮಿಡಿ ಹೀರೋ ಕೋಮಲ್ ಅಂತೂ 'ತಾಯಿ'ಯ ಬಗ್ಗೆ ಹೊಸ ಫಿಲಾಸಫಿಯನ್ನೇ ನೀಡುತ್ತಾರೆ. ...ತ್ರಿಮೂರ್ತಿಗಳ ತಾಯಿಯೊಂದಿಗಿನ ಬಾಂಧವ್ಯದ ಬಗ್ಗೆ ಎಲ್ಲರಿಗೂ ತಿಳಿದೇ ಇದೆ.

ಹಣದ ಅಮಲಿನಲ್ಲಿ ಕಾಮಿಡಿ ಗಣೇಶ ತನ್ನ ತಂದೆ-ತಾಯಿಯನ್ನು ಕಡೆಗಣಿಸಿದ; ಹಾಗೆಯೇ ಹೆತ್ತೊಟ್ಟೆಗೇ ... ಹಾಕದೆ ಆಕೆಯನ್ನು ಮುಸುರೆ ತಿಕ್ಕಲು ಎಸ್. ನಾರಾಯಣ್ ಬಿಟ್ಟ. ಇವರಿಬ್ಬರನ್ನು ಹೊರತುಪಡಿಸಿದರೆ ... ವಿಚಾರದಲ್ಲಿ ಚಿತ್ರರಂಗದ ಪ್ರಮುಖರು ಏನೂ ತುಚ್ಛ ಮನೋಭಾವನೆಯನ್ನು ತಾಳಿಲ್ಲ. ಗಣೇಶ್ ಮತ್ತು ... ಸಾಲಿಗೆ ತೂಗುದೀಪ ಸಹೋದರರು ಸೇರದಿರಲಿ. ■

ಲಂಕೇಶ್

ಚಾಮರಾಜನಗರ ಯಾರಿಗೆ ಜಿ.ಪಂ. ಅಧ್ಯಕ್ಷಗಾದಿ?

ಎಲ್ಲಾ ರಾಜಕೀಯ ಪಕ್ಷಗಳು, ರಾಜಕಾರಣಿಗಳು ಲೋಕಸಭಾ ಚುನಾವಣೆ ಎಂಬ ಮೊದಲ ಸುತ್ತಿನ ಹಣಾಹಣಿಯನ್ನು ಎದುರಿಸಿ ಸುಸ್ತಾಗಿದ್ದಾರೆ. ಅದರ ಬೆನ್ನಲ್ಲೇ ಈಗ ಸರ್ಕಾರ ರಚನೆ ಎಂಬ ಎರಡನೇ ಸುತ್ತಿನ ಸರ್ಕಸ್ಸನ್ನೂ ಪ್ರಾರಂಭಿಸಿಬಿಟ್ಟಿದ್ದಾರೆ. ಆದರೆ, ಚಾಮರಾಜನಗರದ ರಾಜಕಾರಣಿಗಳು ಮಾತ್ರ ಅದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ತಮ್ಮದೇ ಆದ ಕಸರತ್ತು-ಸರ್ಕಸ್ಸುಗಳಲ್ಲಿ ತಲ್ಲೀನರಾಗಿದ್ದಾರೆ. ಅದು ಜಿಲ್ಲಾ ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಗಾದಿಗೆ ಯಾರನ್ನು ಕೂರಿಸಬೇಕು ಎಂಬ ಕಸರತ್ತು.

ಚಾಮರಾಜನಗರ ಜಿಲ್ಲಾ ಪಂಚಾಯತಿ ಕಾಂಗ್ರೆಸ್ ಕೈಯಲ್ಲಿದೆ. ಒಟ್ಟು 21 ಸ್ಥಾನಗಳ ಪೈಕಿ 18 ಕಾಂಗ್ರೆಸ್ ಮತ್ತು 3 ಬಿಜೆಪಿ ವಶದಲ್ಲಿವೆ. ಆದರೆ, ಕಾಂಗ್ರೆಸ್‌ನೊಳಗೆ ತಲೆಭಾರವಿರುವ ಲೀಡರುಗಳ ದೊಡ್ಡ ದಂಡೇ ಇರುವುದರಿಂದ ಅಧ್ಯಕ್ಷನಾಗಿಯೋ, ಉಪಾಧ್ಯಕ್ಷನಾಗಿಯೋ ಇಡೀ ಐದು ವರ್ಷಗಳ ತನಕ ಒಬ್ಬನೇ ಮುಂದುವರಿಯುವುದಕ್ಕೆ ಬಿಡುವುದಿಲ್ಲ. ಅಧಿಕಾರಕ್ಕೇರುತ್ತಿದ್ದಂತೆಯೇ ಕಾಲೆಳೆಯುವ ಪ್ರಕ್ರಿಯೆಯೂ ಪ್ರಾರಂಭವಾಗಿಬಿಡುತ್ತದೆ. ಆದ್ದರಿಂದ ರೊಟೇಶನ್ ಮಾದರಿಯಲ್ಲಿ 10 ತಿಂಗಳಿಗೊಮ್ಮೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಬದಲಿಸುವ ಪರಿಪಾಠವೂ ಬೆಳೆದುಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಹಾಲಿ ಅಧ್ಯಕ್ಷರಾಗಿರುವ ಶೈಲಜಾ ಮಲ್ಲೇಶ್ ಮತ್ತು ಉಪಾಧ್ಯಕ್ಷರಾಗಿರುವ ಜೆ.ಶಿವಮೂರ್ತಿಗಳ ಅಧಿಕಾರಾವಧಿ ಮುಗಿದಿರುವುದರಿಂದ ಆ ಸ್ಥಾನಗಳ ಭರ್ತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಆಕಾಂಕ್ಷಿಗಳ ದೊಡ್ಡ ದಂಡೆ ಸಿದ್ಧವಾಗಿದ್ದು ನಾ ಮುಂದು ತಾ ಮುಂದು ಎಂಬಂತೆ ಎಮ್ಮೆಲ್ಲೆಗಳ, ಎಂಪಿಗಳ ಹಿಂದೆ ಸುತ್ತಾಡುತ್ತಾ ಗದ್ದುಗೆ ಏರುವ ಸರ್ಕಸ್ ಪ್ರಾರಂಭಿಸಿದ್ದಾರೆ. ಕುರುಬ ಸಮುದಾಯದ ಜೆ.ಶಿವಮೂರ್ತಿ ಮತ್ತು ಮುನಿರಾಜು, ಉಪ್ಪಾರ ಸಮುದಾಯದ ವಿಶಾಲಾಕ್ಷಿ ರಾಚಪ್ಪ, ತಮಿಳುಗೌಡರ ರಾಧಾಮಣಿ, ತೆಲುಗು ಶೆಟ್ಟರ ಜೇವರೇಖಾ ರಾಮಯ್ಯ ಶೆಟ್ಟಿ, ಯೋಗೇಶ್- ಹೀಗೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಾಕಾಂಕ್ಷಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದರೂ ಅಧ್ಯಕ್ಷ ಸ್ಥಾನಕ್ಕೆ ನಿಜವಾದ ಪೈಪೋಟಿಯಿರುವುದು ಹನೂರಿನ ರಾಮಾಪುರ ಕ್ಷೇತ್ರದ ಸದಸ್ಯ ಕುರುಬ ಸಮುದಾಯದ ಜೆ.ಶಿವಮೂರ್ತಿ ಹಾಗೂ ಕುಂತೂರಿನ ಸದಸ್ಯ ಉಪ್ಪಾರ ಸಮುದಾಯದ ಶಿವಕುಮಾರ್ ನಡುವೆಯೇ. ಉಳಿದವರು ಆಟಕ್ಕುಂಟು, ಲೆಕ್ಕಕ್ಕಿಲ್ಲ.


ಸಿದ್ಧರಾಮಯ್ಯ


ಮಹದೇವಪ್ರಸಾದ್


ಶ್ರೀನಿವಾಸ್ ಪ್ರಸಾದ್

ಶಿವಕುಮಾರ್ ಜಿ.ಪಂ. ಅಧ್ಯಕ್ಷನಾಗಿದ್ದೇ ಜೆಡಿಎಸ್‌ನಿಂದ. ಈಗ ಕಾಂಗ್ರೆಸ್ ಸೇರಿದ್ದರೂ ಹೊರಗಿನಿಂದ ಬಂದ ವಲಸಿಗ ಎಂಬ ಹಣೆಪಟ್ಟಿ ಅವರಿಗಂಟಿಕೊಂಡಿದೆ. ಇದೇ ಆತನಿಗೆ ಒಂದಿಷ್ಟು ಮುಳುವಾಗಬಹುದು. ಆದರೂ ಶಾಸಕ ಧ್ರುವನಾರಾಯಣ್ ಅವರ ಸಂಪೂರ್ಣ ಆಶೀರ್ವಾದ, ಬೆಂಬಲ ಅವರಿಗಿರುವುದರಿಂದ ಪೈಪೋಟಿ, ಲಾಬಿ ದೊಡ್ಡ ಮಟ್ಟದಲ್ಲಿ ನಡೆದಿದೆ.

ರಾಮಾಪುರದ ಜೆ.ಶಿವಮೂರ್ತಿ ಹಾಲಿ ಉಪಾಧ್ಯಕ್ಷ. ಅವರಿಗೆ ಈಗ ಬೇಕಿರುವುದು ಅಧ್ಯಕ್ಷರ ಕುರ್ಚಿ. ಸಿದ್ಧರಾಮಯ್ಯನವರೇ ಅವರ ಬೆನ್ನಿಗಿದ್ದಾರೆ. ಅದೂಅಲ್ಲದೇ ಧ್ರುವನಾರಾಯಣ್ ಬಿಟ್ಟರೆ ಉಳಿದಂತೆ ಜಿಲ್ಲೆಯಲ್ಲಿರುವ ಬಹುತೇಕ ಕಾಂಗ್ರೆಸ್ ಶಾಸಕರೂ ತಮ್ಮ ಬೆಂಬಲಕ್ಕೆ ನಿಂತಿದ್ದಾರೆಂಬುದು ಅವರ ಅಂಬೋಣ. "ಇನ್ನು ಯಾರಿಂದ ನಾನು ಅಧ್ಯಕ್ಷನಾಗುವುದನ್ನು ತಪ್ಪಿಸಲು ಸಾಧ್ಯ?" ಎಂಬ ಪ್ರಶ್ನೆ ಅವರದ್ದು.

ಅವರಿಗಿರುವ ರಾಜಕೀಯ ನಾಯಕರುಗಳ ಬೆಂಬಲವನ್ನು ಬದಿಗಿಟ್ಟು ನೋಡಿದರೂ ಶಿವಮೂರ್ತಿ ಅಧ್ಯಕ್ಷನಾಗುವುದಕ್ಕೆ ಅರ್ಹ ವ್ಯಕ್ತಿ ಅನ್ನಿಸುತ್ತದೆ. ಆತ ಉಪಾಧ್ಯಕ್ಷನಾಗಿರುವಾಗ ನಡೆಸಿರುವ ಜನೋಪಕಾರಿ ಕೆಲಸಗಳು ಜನರಿಗೆಲ್ಲಾ ಗೊತ್ತಿವೆ. ಸದಾ ಕುಡಿಯುವ ನೀರಿನ ಬವಣೆಯಿಂದ ಬಸವಳಿದಿದ್ದ ಜಿಲ್ಲೆಗೆ 32 ಕೋಟಿಯಷ್ಟು ದುಡ್ಡು ಖರ್ಚು ಮಾಡಿ ನೀರಿನ ಹಾಹಾಕಾರವನ್ನು ಒಂದಷ್ಟು ತಹಬದಿಗೆ ತರಲಾಗಿದೆ ಎಂದರೆ ಅದರಲ್ಲಿ ಶಿವಮೂರ್ತಿಯವರ ಪಾತ್ರ ಪ್ರಮುಖವಾಗಿದೆ. ಹನೂರು ಕ್ಷೇತ್ರದ ಕಾಡಂಚಿನ ಗ್ರಾಮ ಚಂಗಡಿಗೆ ಮಾಜಿ ಸಚಿವರಾಗಿದ್ದ ದಿ.ರಾಜೂಗೌಡ ಮತ್ತು ನಾಗಪ್ಪನವರ ಕಾಲದಲ್ಲಿ ಆಗದಿದ್ದ ಕುಡಿಯುವ ನೀರಿನ ವ್ಯವಸ್ಥೆ ಈಗ 17 ಲಕ್ಷ ಖರ್ಚಿನಲ್ಲಿ ಆಗಿದೆ ಎಂದರೆ ಅದಕ್ಕೆ ಶಿವಮೂರ್ತಿಯವರ ಯೋಗದಾನ ಬೇಕಾದಷ್ಟಿದೆ.

ಶಿವಮೂರ್ತಿ ಮೂಲತಃ ಒಬ್ಬ ಸಿವಿಲ್ ಎಂಜಿನಿಯರ್. ಅಧ್ಯಕ್ಷರಾದರೆ ಅವರ ಜ್ಞಾನ ಜಿಲ್ಲಾಭಿವೃದ್ಧಿಗೆ ಬಳಕೆಯಾಗುತ್ತದೆ. ಅವರಿಗೆ ಸಿದ್ಧರಾಮಯ್ಯ, ಶ್ರೀನಿವಾಸ್ ಪ್ರಸಾದ್, ಮಹದೇವ ಪ್ರಸಾದ್, ಆರ್.ನರೇಂದ್ರ ಮುಂತಾದ ನಾಯಕರ ಬೆಂಬಲವಿರುವುದು ಸತ್ಯ. ಹಾಗಾಗಿ ಅವರು ಅಧ್ಯಕ್ಷಗಾದಿಗೇರುವುದು ತುಸು ಸುಲಭವಾಗಬಹುದು.

ಇನ್ನೊಂದೆಡೆಗೆ ಯಳಂದೂರಿನ ಎಮ್ಮೆಲ್ಸಿ ಜವರಯ್ಯ ಅವರ ಮಗ ಯೋಗೇಶ್ "ನಾನೂ ಜಿಪಂ ಅಧ್ಯಕ್ಷನಾಗಲು ರೆಡಿ" ಎಂದು ಮೈ ಕೊಡವಿಕೊಂಡು ಎದ್ದುನಿಂತಿದ್ದಾನೆ. ರಾಜಕೀಯದ ಒಳಹೊರಗುಗಳನ್ನು ಅರಿಯದ ಯೋಗೇಶ್ ಬೆನ್ನಿಗೆ ನಿಂತಿರುವುದು ಶಾಸಕ ಪುಟ್ಟರಂಗಶೆಟ್ಟಿ ಮಾತ್ರ. ಜಿಲ್ಲಾ ರಾಜಕಾರಣವನ್ನು ಸೂಕ್ಷ್ಮವಾಗಿ ಗಮನಿಸಿದರೆ ಪುಟ್ಟರಂಗಶೆಟ್ಟಿಗೆ ಜಿಲ್ಲೆಯಲ್ಲಿ ಹೇಳಿಕೊಳ್ಳುವಂಥ ಹೋಲ್ಡ್ ಏನಿಲ್ಲ. ತಾನೇ ಅತಂತ್ರ ಪರಿಸ್ಥಿತಿಯಲ್ಲಿರುವಾಗ ಇನ್ನು ಯೋಗೇಶ್‌ಗೆ ಬೆಂಬಲ ಕೊಟ್ಟರೆಷ್ಟು, ಬಿಟ್ಟರೆಷ್ಟು? ಜಿಲ್ಲೆಯಲ್ಲಿ ಮಾತು ಅಂತ ನಡೆಯುವುದು ಸಿದ್ಧರಾಮಯ್ಯ ಮತ್ತು ಶ್ರೀನಿವಾಸ್ ಪ್ರಸಾದ್ ಎಂಬ ದೈತ್ಯ ನಾಯಕರದ್ದೆ. ಅವರೇ ಈಗ ಶಿವಮೂರ್ತಿಯೊಂದಿಗಿದ್ದಾರಾದ್ದರಿಂದ ಅವರು ಅಧ್ಯಕ್ಷರಾಗುವ ಛಾನ್ಸೇ ಜಾಸ್ತಿ.

ಇನ್ನು ಉಪಾಧ್ಯಕ್ಷ ಸ್ಥಾನ ಯಾರಿಗೆ? ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಈ ಸ್ಥಾನಕ್ಕೆ ಆರಗ ಕ್ಷೇತ್ರದ ವಸಂತ ನಂಜುಂಡಸ್ವಾಮಿ, ಚಂದಕವಾಡಿಯ ಶಿವಕುಮಾರ್, ಸತ್ತೇಗಾಲದ ಸೋಮಣ್ಣ ಹಾಗೂ ಹಂಗಳದ ನಾಗರಾಜು ಎಂಬ ನಾಲ್ಕು ಪಟುಗಳು ಸ್ಪರ್ಧೆಯಲ್ಲಿದ್ದಾರೆ. ಅಂತಿಮವಾಗಿ ಯಾರು ಗೆಲ್ಲುತ್ತಾರೆಂಬುದನ್ನು ನಿರ್ಧರಿಸುವುದು ಮಾತ್ರ ಅವರವರ ಸಾಮರ್ಥ್ಯವಲ್ಲ, ಶ್ರೀನಿವಾಸ್ ಪ್ರಸಾದ್ ಅವರ ಮನಸ್ಸು!

ಇಲ್ಲಿಯುತನಕ ಜಿಪಂ ಸ್ಥಾನವನ್ನು ಹನೂರು ಭಾಗದವರಿಗೆ ನೀಡಿಲ್ಲ ಎಂಬ ವಾದವನ್ನೇ ಮುಂದಿಟ್ಟುಕೊಂಡು ಶಿವಮೂರ್ತಿ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ನಡೆಸುತ್ತಿರುವುದರಿಂದ ಉಪಾಧ್ಯಕ್ಷ ಸ್ಥಾನವನ್ನು ಯಳಂದೂರು ಭಾಗಕ್ಕೆ ನೀಡಬೇಕೆಂಬ ಪ್ರತಿವಾದವೊಂದು ಹುಟ್ಟಿಕೊಂಡಿದೆ. ಅದೇನಾದರೂ ವರ್ಕೌಟ್ ಆದರೆ ವಸಂತ ನಂಜುಂಡಸ್ವಾಮಿಗೆ ಅದೃಷ್ಟ ಖುಲಾಯಿಸಲಿದೆ. ಅದೂಅಲ್ಲದೇ ಈಕೆಯ ಗಂಡ ನಂಜುಂಡಸ್ವಾಮಿ ಶ್ರೀನಿವಾಸ್ ಪ್ರಸಾದ್ ಅವರ ಅಪ್ಪಟ ಶಿಷ್ಯ. ಇದು ವಸಂತಾಳಿಗೆ ಬೋನಸ್ ಪಾಯಿಂಟ್.


ಅಂತಿಮ ಫಲಿತಾಂಶಕ್ಕಾಗಿ ಒಂದಿಷ್ಟು ದಿನ ಕಾಯಬೇಕು. ಚಾಮರಾಜನಗರದ ಮಟ್ಟಿಗೆ ಅದು ಲೋಕಸಭಾ ಫಲಿತಾಂಶಕ್ಕಿಂತ ರೋಚಕವಾಗಿರುತ್ತದೆ ಎಂಬುದು ಮಾತ್ರ ಸತ್ಯ.


ನರೇಂದ್ರ


ಶಿವಮೂರ್ತಿ


ಸೋಮಣ್ಣ


ಧ್ರುವನಾರಾಯಣ


ಶಿವಕುಮಾರ್


ಪುಟ್ಟರಂಗಶೆಟ್ಟಿ

● ಕೊಳ್ಳೆಗಾಲ ಚಿಕ್ಕಮಾಳಿಗೆ

ವಚನಭ್ರಷ್ಟ ಯಡ್ಡಿ ಜಯಂತ್‌ಗೆ ಹೂ ಮುಡಿಸಿದರು!

ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ "ಜೆಡಿಎಸ್ ಕೊಟ್ಟಮಾತಿಗೆ ತಪ್ಪಿ ನನಗೆ ಅನ್ಯಾಯ ಮಾಡಿತು. ಪುಣ್ಯಕೋಟಿಯ ನೆಲದಲ್ಲಿ ಈ ರೀತಿಯ ಅನ್ಯಾಯ ಸರಿಯೇ..?" ಎಂದೆಲ್ಲಾ ರಾಜ್ಯದ ಬೀದಿಬೀದಿಯಲ್ಲಿ ಕಣ್ಣೀರು ಹಾಕುತ್ತಾ, ಜನರ ಸಹಾನುಭೂತಿ ಗಳಿಸಿದ್ದ ಮುಖ್ಯಮಂತ್ರಿ ಯಡಿಯೂರಪ್ಪ ರೈತರಿಗೆ, ನಾಡಿನ ಜನತೆಗೆ ಕೊಟ್ಟ ಮಾತು ಉಳಿಸಿಕೊಳ್ಳದ ವಚನಭ್ರಷ್ಟರಾಗಿದ್ದು ಹಳೆಯ ಸುದ್ದಿ. ಈಗ ಅವರು ತಮ್ಮ ಜಿಲ್ಲೆಯಲ್ಲೇ ವಚನಭ್ರಷ್ಟರಾದ ಪ್ರಕರಣ ವರದಿಯಾಗಿದೆ.


ತಾನು ಸಮಾಜವಾದಿ ಎಂದು ಹೇಳಿಕೊಳ್ಳುತ್ತಾ ಈಗ 'ಸಮಾಜವ್ಯಾಧಿ'ಯಾಗಿರುವ ಬಿ.ಆರ್. ಜಯಂತ್ ಯಡ್ಡಿಯ ವಚನಭ್ರಷ್ಟತೆಗೆ ಬಲಿಯಾದ ಲೇಟೆಸ್ಟ್ ರಾಜಕಾರಣಿ. ಇತ್ತೀಚೆಗೆ ಬಂಗಾರಪ್ಪ ರಾಮಚಂದ್ರಾಪುರಮಠದ ಸ್ವಾಮೀಜಿಗೆ ಬೈದರೆ, ಅವರು ಇಡೀ ಬ್ರಾಹ್ಮಣ ಸಮಾಜಕ್ಕೆ ಬೈದಿದ್ದಾರೆ ಎಂದು ವ್ಯಾಖ್ಯಾನಿಸಿ, ಕೊಪೆಗೆ ದೊಡ್ಡ ಚಡ್ಡಿ ಹಾಕಿಕೊಂಡು ಸಾಗರದ ಬೀದಿಬೀದಿಗಳಲ್ಲಿ ದಂಡ ಹಿಡಿದು ಓಡಾಡಿದ ಬಿ.ಆರ್. ಜಯಂತ್ ಕಿವಿಗೆ ಈಗ ಯಡ್ಡಿ ದೊಡ್ಡ ಕಮಲದ ಹೂ ಇಟ್ಟಿದ್ದಾರೆ.

"ಲೋಕಸಭಾ ಚುನಾವಣಾ ಪ್ರಕ್ರಿಯೆ ಆರಂಭವಾದಾಗ ನಾನು ನಿಷ್ಕ್ರಿಯನಾಗಿರುತ್ತೇನೆ" ಎಂದೆಲ್ಲಾ ಬೊಗಳೆ ಬಿಟ್ಟಿದ್ದ ಜಯಂತ್‌ನನ್ನು ಯಡ್ಡಿ ಕರೆಸಿ ಮಾತನಾಡುತ್ತಿದ್ದಂತೆಯೇ ಸಾಗರದ ಹಳೆಯ ಚಡ್ಡಿಗಳಿಗಿಂತಲೂ ಹೆಚ್ಚು ಚುರುಕಾಗಿ ಓಡಾಡಲಾರಂಭಿಸಿದ್ದನೀತ. ಅದಕ್ಕೆ ಸರಿಯಾಗಿ ಕಾಂಗ್ರೆಸ್‌ನಿಂದ ಗೆದ್ದು ಜಿಪಂ ಸದಸ್ಯನಾಗಿರುವ ಈ ಯುವ ರಾಜಕಾರಣಿಗೆ ಅಧ್ಯಕ್ಷ ಸ್ಥಾನ ನೀಡುವುದಾಗಿ ಯಡ್ಡಿ ಘೋಷಿಸಿ ಈತನ ಮೂಗಿಗೆ ತುಪ್ಪ ಸವರಿದ್ದರು. ಹಾಗೆ ಸವರಿದ್ದ ತುಪ್ಪವನ್ನೇ ನಂಬಿದ್ದ ಜಯಂತ್ ತಾನೇ ಜಿ.ಪಂ.ನ ಮುಂದಿನ ಅಧ್ಯಕ್ಷ ಎಂದು ಕನಸು ಕಾಣಲಾರಂಭಿಸಿದ್ದ.

ಆದರೀಗ ಅವನ ಕನಸನ್ನು ಯಡ್ಡಿ ನುಚ್ಚುನೂರು ಮಾಡಿದ್ದಾರೆ.

ಲೋಕಸಭಾ ಚುನಾವಣೆ ಮುಗಿಯುತ್ತಿದ್ದಂತೆಯೇ ಜಿಲ್ಲಾ ಪಂಚಾಯತಿಯ ಅಧ್ಯಕ್ಷ, ಉಪಾಧ್ಯಕ್ಷರ ಮೀಸಲಾತಿ ಪ್ರಕಟವಾಗಿದೆ. ಶಿವಮೊಗ್ಗ ಜಿಲ್ಲಾ ಅಧ್ಯಕ್ಷರ ಸ್ಥಾನವನ್ನು ಬಿಸಿಎಂ(ಬಿ)ವರ್ಗಕ್ಕೆ ಮೀಸಲಿಡಲಾಗಿದೆ. ಇದರಿಂದಾಗಿ ಬ್ರಾಹ್ಮಣ ಜಾತಿಗೆ ಸೇರಿದ ಜಯಂತ್‌ಗೆ ಅಧ್ಯಕ್ಷ ಸ್ಥಾನವಿಲ್ಲ ಎಂಬುದು ಖಚಿತವಾಗಿದೆ. ಅಂದಹಾಗೆ, ಯಡ್ಡಿಯ ಸೂಚನೆಯಂತೆಯೇ ಈ ಮೀಸಲಾತಿ ನಿಗದಿಪಡಿಸಲಾಗಿದೆ ಎಂಬ ಮಾತು ಬಿಜೆಪಿ ವಲಯದಿಂದಲೇ ಕೇಳಿಬರುತ್ತಿದೆ.

ಯಡ್ಡಿ ಮಾತನ್ನು ನಂಬಿ ಕೆಟ್ಟ ಜಯಂತ್ ಈಗ ವಿಧಿ ಇಲ್ಲದೆ ಕೈಗೆಟುಕದ ದ್ರಾಕ್ಷಿ ಹುಳಿ ಎಂದ ನರಿಯಂತೆ "ನಾನು ಪಕ್ಷದ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ'' ಎನ್ನುತ್ತಿದ್ದಾನೆ. ಯಡ್ಡಿಯ ಈ ವಚನಭ್ರಷ್ಟತೆ ಬರೀ ಜಯಂತ್‌ಗೆ ಮಾತ್ರ ಅನ್ವಯಿಸುವುದಿಲ್ಲ, ಬದಲಾಗಿ ಸಮಾಜವಾದಿ ಮತ್ತು ಕಾಂಗ್ರೆಸ್‌ನಿಂದ ಬಿಜೆಪಿಗೆ ಹಾರಿದ ಎಲ್ಲ ಜಿಪಂ ಸದಸ್ಯರಿಗೂ ಇದು ಅನ್ವಯವಾಗುತ್ತದೆ.



ಏಕೆಂದರೆ ಅವರುಗಳ ಸಮ್ಮುಖದಲ್ಲಿಯೇ ಯಡ್ಡಿ ಜಯಂತ್‌ಗೆ ಈ ಭರವಸೆ ನೀಡಿದ್ದರಂತೆ. ಹೀಗಾಗಿ 'ಯಡ್ಡಿ ನಂಬಿ ಕೆಟ್ಟೆವೋ' ಎಂದು ಅವರುಗಳು ಗೋಳೋ ಎಂದು ಅಳುತ್ತಿದ್ದಾರೆ.

ಈ ನಡುವೆ ಕಾಂಗ್ರೆಸ್ ಅಭ್ಯರ್ಥಿಗೆ ಮತ್ತೆ ಬೆಂಬಲ ನೀಡಿ ತಾವೂ ಯಡ್ಡಿಗೆ ತಿರುಗೇಟು ನೀಡಲು ಕೆಲ ಪಕ್ಷಾಂತರಿಗಳು ಚಿಂತಿಸುತ್ತಿದ್ದಾರಂತೆ. ಹೀಗಾಗಿ ಜಿಪಂ ಕಾರ್ಯಾಲಯದ ಸುತ್ತ ಬಿರುಸಿನ ಚಟುವಟಿಕೆ ನಡೆದಿದೆ.

ಒಟ್ಟು 31 ಸದಸ್ಯರ ಜಿಪಂನಲ್ಲಿ ಪಕ್ಷಾಂತರಿಗಳ ಬೆಂಬಲದಿಂದ ಬಿಜೆಪಿ ತನ್ನ ಬಲವನ್ನು 16ಕ್ಕೇರಿಸಿಕೊಂಡಿದೆ. ಸಮಾಜವಾದಿ ಪಕ್ಷ, ಕಾಂಗ್ರೆಸ್ ಮತ್ತು ಜೆಡಿಎಸ್ ಒಟ್ಟು 11 ಸದಸ್ಯರನ್ನು ಹೊಂದಿವೆ. ಒಂಚೂರು ವ್ಯತ್ಯಾಸವಾದರೂ ಬಿಜೆಪಿಗೆ ಜಿಪಂ ಅಧಿಕಾರ ದಕ್ಕುವುದಿಲ್ಲ. ಪರಿಸ್ಥಿತಿ ಇಷ್ಟು ಸೂಕ್ಷ್ಮವಾಗಿರುವಾಗಲೇ ಯಡ್ಡಿ ವಚನಭ್ರಷ್ಟರಾಗಿದ್ದಾರೆ.

ಪಕ್ಷಾಂತರಿಗಳಿಗೆ ಒಂದಿಷ್ಟು ಮಾನ-ಮರ್ಯಾದೆ ಉಳಿದಿದ್ದರೆ ಹಿಂಬಾಗಿಲಿನಿಂದ ಜಿಪಂನಲ್ಲಿ ಅಧಿಕಾರ ಪಡೆಯುವ ಬಿಜೆಪಿಯ ಈ ಯತ್ನವನ್ನು ವಿಫಲಗೊಳಿಸಬೇಕಿದೆ.

● ವರದಿಗಾರ

ಕಿಲ್ಲರ್ ಸೈಕೋಪಾತ್ ನಾಗಿ ರೆಡ್ಡಿ ಎಸ್ಕೇಪ್

ಹೇಳಿಕೇಳಿ ಆತ ಸೈಕೋಪಾತ್ ಕಿಲ್ಲರ್. ತನ್ನೊಂದಿಗೆ ...ಕ್ಕಿ ಆಗಿದ್ದವನನ್ನು, ತನ್ನ ತಂಗಿಯೊಂದಿಗೆ ಸ್ನೇಹ ಹೊಂದಿದ್ದ ...ವನನ್ನು, ತನ್ನ ವಂಚನೆಯ ಜಾಲಕ್ಕೆ ಬಿದ್ದವರನ್ನು, ಹಾಗೆ ...ೋಡಿದರೆ ಯಾರನ್ನು ಬೇಕಾದರೂ ಕೊಲ್ಲಬಲ್ಲ, ಹಾಗೆ ...ಂದವರ ದೇಹವನ್ನು ತುಂಡುತುಂಡಾಗಿಸಬಲ್ಲ ಸೈಕೋ...ಪಾತ್ ಆತ. ನಾಗೇಂದ್ರ ರೆಡ್ಡಿ ಆಲಿಯಾಸ್ ನಾಗಿರೆಡ್ಡಿ ...ಅಲಿಯಾಸ್ ವಿಷ್ಣು ಅಲಿಯಾಸ್ ಇಂದ್ರಕುಮಾರ್ ಅಲಿ...ಯಾಸ್ ಮಧುಕುಮಾರ್ ಅಲಿಯಾಸ್ ಜಾನ್ ಅಲಿಯಾಸ್ ...ಷ್ಣು ಹೀಗೆ ಹಲವಾರು ಅಲಿಯಾಸ್‌ಗಳನ್ನು ಹೊಂದಿರುವ ...ಆತನ ರಕ್ತದಾಹ ಎಂತಹದ್ದೆಂದರೆ ಅದಕ್ಕೆ ದೂರದ ...ಇಂಗ್ಲೆಂಡಿನಿಂದ ಹಿಡಿದು ಪಕ್ಕದ ಆಂಧ್ರ ಪ್ರದೇಶ ಸೇರಿದಂತೆ ...ಬೆಂಗಳೂರಿನಲ್ಲೂ ಹಲವಾರು ಜನರ ಹೆಣಗಳು ...ಈಗಾಗಲೇ ಉರುಳಿವೆ.

ಇಂತಹ ರಕ್ತ ಪಿಪಾಸು ಮೊನ್ನೆ ಮತ್ತೆ ಪೊಲೀಸರ ...ಬಂಧನದಿಂದ ಎಸ್ಕೇಪ್ ಆಗಿದ್ದಾನೆ. ಆತ ಮತ್ತೆ ಪೊಲೀಸರ ...ವಶಕ್ಕೆ ಸಿಗುವ ಮುನ್ನ ಇನ್ನೆಷ್ಟು ಜನರ ರಕ್ತ ...ಹರಿಯಲಿದೆಯೋ, ಅದೆಷ್ಟು ಜನರ ಹೆಣಗಳು ...ಉರುಳಲಿವೆಯೋ ಆ ಯಮರಾಯನೇ ಬಲ್ಲ.

ಈ ನಾಗೇಂದ್ರ ರೆಡ್ಡಿ ಅಲಿಯಾಸ್ ನಾಗಿರೆಡ್ಡಿ ಸಾಮಾನ್ಯ ...ಕ್ರಿಮಿನಲ್ ಅಲ್ಲ. ಈತ ಇಂಜಿನಿಯರಿಂಗ್ ಓದಿಕೊಂಡಿರುವ ...ಟೆಕ್ಕಿ. ಇಂಗ್ಲೆಂಡಿನಲ್ಲಿ ವೆಬ್ ಡಿಸೈನರ್ ಆಗಿ ಕಾರ್ಯನಿರ್ವ...ಹಿಸಿದ್ದ ಸುಶಿಕ್ಷಿತ. ಆದರೆ ಅದೇನು ಕ್ರೌರ್ಯವೋ, ಅದೇನು ...ವಿಕೃತ ಬುದ್ಧಿಯೋ, ಜೈಲಿನಲ್ಲಿದ್ದರೂ ಆತನ ರಕ್ತದಾಹ ...ಇಂಗಲೇ ಇಲ್ಲ. ಮೊನ್ನೆ ಬೆಳಗಾವಿಯ ಸಾರ್ವಜನಿಕ ...ಆಸ್ಪತ್ರೆಯಲ್ಲಿ ಚಂದ್ರಕಾಂತ್ ಶಂಕರ್ ಕಾಂಬ್ಳೆ ಎಂಬ ಡಿಎಆರ್ ...ಪೇದೆಯ ಕತ್ತನ್ನೇ ಚಾಕುವಿನಿಂದ ಸೀಳಿ ಅವರನ್ನು ...ಪರಲೋಕಕ್ಕೆ ತಲುಪಿಸಿ ಓಡಿಹೋಗಿದ್ದಾನೆ. ಅಂದಹಾಗೆ ...ಆತ ಹೀಗೆ ಆಸ್ಪತ್ರೆಯಿಂದ ಎಸ್ಕೇಪ್ ಆಗಿರುವುದು ...ಇದೇ ಮೊದಲಲ್ಲ. ಹಿಂದೊಮ್ಮೆ 2006 ರಲ್ಲಿ ಬೆಂಗಳೂರಿನ ...ವಿಕ್ಟೋರಿಯಾ ಆಸ್ಪತ್ರೆಯಿಂದಲೂ ಹೀಗೆಯೇ ಎಸ್ಕೇಪ್ ...ಆಗಿ ಆಂಧ್ರಕ್ಕೆ ಪರಾರಿಯಾಗಿ ಮತ್ತಷ್ಟು ದರೋಡೆ, ...ಕೊಲೆಗಳಿಗೆ ಸ್ಕೆಚ್ ಹಾಕಲು ಪ್ರಾರಂಭಿಸಿದ್ದ. ಆದರೆ ...ದುರದೃಷ್ಟವಶಾತ್, ಕದ್ದ ಕಾರಿನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದು ...ಮತ್ತೆ ಬೆಂಗಳೂರಿನ ಪರಪ್ಪನ ಅಗ್ರಹಾರವನ್ನು ಹೊಕ್ಕಿದ್ದ.

ರೆಡ್ಡಿ ಸ್ಕೆಚ್ ಮೊದಲೇ ರೆಡಿ

ನಾಗಿರೆಡ್ಡಿ ಅದೆಂತಹ ಚಾಣಾಕ್ಷನೆಂದರೆ ಮೊನ್ನೆ ಮೇ ...0ರಂದು ಎಸ್ಕೇಪ್ ಆಗುವುದಕ್ಕೂ ಮುನ್ನ ಅದಕ್ಕೆ ...ಬೇಕಾದ ಪ್ಲಾನ್ ರೆಡಿ ಮಾಡಿಕೊಂಡಿದ್ದ. ತಾನಿದ್ದ ...ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಮೇ 2 ರಂದು ...ಆತ್ಮಹತ್ಯೆ ಮಾಡಿಕೊಳ್ಳುವ ನಾಟಕವಾಡಿದ್ದ. ತನ್ನ ಕೈಯನ್ನು ...ತಾನೇ ಸೀಳಿಕೊಂಡು ವಿಪರೀತ ಗಾಯ ಮಾಡಿಕೊಂಡು ...ಹೊಟ್ಟೆ ಶುರುವಿಟ್ಟುಕೊಂಡಿದ್ದ. ಇವನ ನಾಟಕ ಅರಿಯದ ...ಜೈಲಿನ ಸಿಬ್ಬಂದಿಗಳು ಕೂಡಲೇ ಜಿಲ್ಲಾ ಆಸ್ಪತ್ರೆಗೆ ಆತನನ್ನು ...ಸೇರಿಸಿದ್ದರು. ಅಲ್ಲಿಗೆ ಇವನೊಂದಿಗೆ ಇನ್ನೂ ಮೂವರು ...ಕೈದಿಗಳಿದ್ದರು. ಇವರನ್ನು ಕಾಯಲು ಅಲ್ಲಿ ಮೂವರು ...ಪೇದೆಗಳಿದ್ದರು. ಅವತ್ತು ಮಧ್ಯಾಹ್ನ ಎರಡೂ ಕಾಲು ...ಸುಮಾರಿಗೆ ಇಬ್ಬರು ಪೇದೆಗಳು ಊಟಕ್ಕೆ ಹೋದರು. ...ಅದೇ ಸಮಯಕ್ಕೆ ಸರಿಯಾಗಿ ತಾನು ನಾಗಿರೆಡ್ಡಿಯ ಸ್ನೇಹಿತ ...ಎಂದುಕೊಂಡ ವ್ಯಕ್ತಿಯೊಬ್ಬ ಅಲ್ಲಿ ಬಂದು ಇವನ ಬಳಿ ...ಮಾತಾಡಲು ಅವಕಾಶ ಕೋರಿದ. ಆದರೆ ಪೇದೆ ಕಾಂಬ್ಳೆ ...ಅದಕ್ಕೆ ಅವಕಾಶ ಕೊಡಲಿಲ್ಲ. ಕೂಡಲೇ ಪಕ್ಕದ ಬೆಡ್‌ನ ...ಕೈದಿಗಳೊಂದಿಗೆ ರೆಡ್ಡಿ ಕ್ಯಾತೆ ತೆಗೆದು ಜೋರು ...ಗದ್ದಲವೆಬ್ಬಿಸಿದ. ಆ ಗದ್ದಲದಲ್ಲಿ ಹೊರಗಿನಿಂದ ಬಂದಿದ್ದ ...ವ್ಯಕ್ತಿ ರೆಡ್ಡಿಯ ಕೈಗೆ ಚಾಕು ಕೊಟ್ಟ. ಕೂಡಲೇ ಅದರಿಂದ ...ಕಾಂಬ್ಳೆಯ ಕತ್ತು ಕತ್ತರಿಸಿದ ರೆಡ್ಡಿ ಸಲೀಸಾಗಿ ಎಸ್ಕೇಪ್ ...ಆದ.

ರೆಡ್ಡಿ ಲಂಡನ್‌ನಲ್ಲಿ ಮಾಡಿದ್ದ ಕೊಲೆ!

ನಾಗಿರೆಡ್ಡಿ ಮೂಲತಃ ಆಂಧ್ರದ ನಿಜಾಮಾಬಾದಿನವನು. ...ಕಂಪ್ಯೂಟರ್ ಇಂಜಿನಿಯರಿಂಗ್ ಮುಗಿಸಿಕೊಂಡು 2002ರ ...ನವೆಂಬರ್‌ನಲ್ಲಿ ಸೀದಾ ಲಂಡನ್‌ಗೆ ಹಾರಿದ್ದ ರೆಡ್ಡಿ ಅಲ್ಲಿ ...ಐಟಿ ಸೊಲ್ಯೂಟೆಕ್ ಸಂಸ್ಥೆಯನ್ನು ವೆಬ್ ಡಿಸೈನರ್ ಆಗಿ ...ಸೇರಿಕೊಂಡ. ಅದೇ ಸಂಸ್ಥೆಯಲ್ಲಿ ಆಂಧ್ರದ ಮೆಹಬೂಬ್ ...ನಗರದ ರಾಧಾಕೃಷ್ಣ ಎಂಬ ಇನ್ನೊಬ್ಬ ಟೆಕ್ಕಿಯ ಪರಿಚಯ ...ವಾಯಿತು. ಇಬ್ಬರೂ ಜೊತೆಗೂಡಿ ಹೊಸ ಬಿಸಿನೆಸ್ ...ಶುರುವಿಟ್ಟುಕೊಂಡರು. ಆದರೆ ಕೆಲದಿನಗಳಲ್ಲೇ ಅವರಿಬ್ಬರ ...ನಡುವೆ ವ್ಯವಹಾರದಲ್ಲಿ ಜಗಳ ಶುರುವಾಯಿತು. ಆಗ



ಕಿಲ್ಲರ್ ರೆಡ್ಡಿ

ತಾನು ಹೋದಲ್ಲೆಲ್ಲಾ ಒಂದೊಂದು ಹೆಸರಿಟ್ಟುಕೊಳ್ಳುತ್ತಾ ತನ್ನ ಕೈಗೆ ಸಿಕ್ಕವರನ್ನು ಕೊಲ್ಲುವುದನ್ನೇ ಹವ್ಯಾಸ ಮಾಡಿಕೊಂಡಿದ್ದ ಈ ವಿಕೃತ ರಕ್ತಪಿಪಾಸು ರೆಡ್ಡಿಯನ್ನು ಚಿಕಿತ್ಸೆಗೆಂದು ಜೈಲಿನಿಂದ ಆಸ್ಪತ್ರೆಗೆ ಕರೆತರುವಾಗ ಯಾವ ಮುನ್ನೆಚ್ಚರಿಕೆ ಬೇಕೋ ಅದನ್ನು ಪೊಲೀಸರು ತೆಗೆದುಕೊಂಡಿದ್ದರೆ ಹೀಗೆ ಆತ ಮೊನ್ನೆ ಮತ್ತೆ ತಪ್ಪಿಸಿಕೊಳ್ಳಲು ಸಾಧ್ಯವಿತ್ತಾ? ಇವನ ಚರಿತ್ರೆ ಏನೆಂದು ಗೊತ್ತಿದ್ದ ಪೊಲೀಸ್ ಅಧಿಕಾರಿಗಳಿಗೆ ಅವನು ಆಸ್ಪತ್ರೆ ಸೇರಲು ಮಾಡಿದ ನಾಟಕ ತಿಳಿಯಲೇ ಇಲ್ಲವಾ? ಅಥವಾ ತಿಳಿದಿದ್ದರೂ ಅವರು ರೆಡ್ಡಿ ಪರಾರಿಗೆ ಸಹಕರಿಸಿದರಾ?

ನಯನ್ ಮತ್ತು ಟ್ಯಾಕ್ಸಿ ಡ್ರೈವರ್ ಅಕ್ರಂ ಎಂಬ ಇಬ್ಬರು ಭಾರತೀಯರನ್ನು ತನ್ನ ಜೊತೆ ಹಾಕಿಕೊಂಡ ರೆಡ್ಡಿ ಅವರಿಗೆ ಐದು ಸಾವಿರ ಪೌಂಡ್ ಕೊಟ್ಟ.

ಒಂದು ದಿನ ಅವರೆಲ್ಲ ಸೇರಿ ರಾಧಾಕೃಷ್ಣನನ್ನು ಖತಂ ಮಾಡುವ ಸ್ಕೆಚ್ ಹಾಕಿಕೊಂಡರು. 2004 ರ ಅಕ್ಟೋಬರ್‌ನಲ್ಲಿ ಮೂವರೂ ರಾಧಾಕೃಷ್ಣನನ್ನು ಲಂಡನ್ ಸಮೀಪದ ಹನ್ಸ್‌ಲೋ ಎಂಬಲ್ಲಿಗೆ ಕರೆದುಕೊಂಡು ಹೋದರು. ಸಾವು ತನಗಾಗಿ ಈ ಸ್ನೇಹಿತರ ರೂಪದಲ್ಲಿ ಕಾದಿದೆ ಎಂದು ಪಾಪ ರಾಧಾಕೃಷ್ಣನಿಗಾದರೂ ಹೇಗೆ ಗೊತ್ತಾಗಬೇಕು? ಅವರಲ್ಲಿ ಆತನನ್ನು ಕ್ಷಣಾರ್ಧದಲ್ಲಿ ಕೊಂದು ಹಾಕಿದರು. ಆತನ ಹೆಣವನ್ನು ಚಾದರವೊಂದರಲ್ಲಿ ಪ್ಯಾಕ್ ಮಾಡಿ ಲಂಡನ್ ಸಿಟಿಯ ಹೊರವಲಯಕ್ಕೆ ಕೊಂಡೊಯ್ದು ಸುಟ್ಟು ಹಾಕಿದರು. ಈ ಕೊಲೆಯ ಸುಳಿವರಿತ ಲಂಡನ್ ಪೊಲೀಸರು ರೆಡ್ಡಿಗಾಗಿ ಹುಡುಕತೊಡಗಲಾರಂಭಿಸಿದಾಗ ನಾಗಿರೆಡ್ಡಿ ಚಕ್ಕನೆ ಭಾರತಕ್ಕೆ ಹಾರಿ ನಿಜಾಮಾಬಾದನ್ನು ಹೊಕ್ಕ. ಕೊನೆಗೆ ರೆಡ್ಡಿಯ ಹೆಸರು ಅಂತರರಾಷ್ಟ್ರೀಯ ಪೊಲೀಸು ಸಂಘಟನೆಯಾದ ಇಂಟರ್‌ಪೋಲ್‌ನಲ್ಲಿ ಸೇರ್ಪಡೆಯಾಗಿತ್ತು.

ಗೆಳೆಯನನ್ನೇ ಮುಗಿಸಿಬಿಟ್ಟಿದ್ದ

ನಿಜಾಮಾಬಾದ್‌ಗೆ ಬಂದಾಗ ತನ್ನ ಗೆಳೆಯ ರಾಜೇಶ್ ಅರ್ಥಂ ತನ್ನ ತಂಗಿ ಹರಿಣಿಯೊಂದಿಗೆ ಚೆಲ್ಲಾಟವಾಡುತ್ತಿದ್ದಾನೆ ಎಂದು ಭಾವಿಸಿದ. ರಾಜೇಶನಿಗೆ ಬುದ್ಧಿ ಹೇಳುವ ಬದಲಾಗಿ ಆತನನ್ನು ಮುಗಿಸಿಹಾಕಲು ನಿರ್ಧರಿಸಿದ. ಆಗ ರಾಜೇಶ್ ಬೆಂಗಳೂರಿನಲ್ಲಿ ಸತ್ಯಂ ಕಂಪ್ಯೂಟರ್ಸ್‌ನಲ್ಲಿ ಉದ್ಯೋಗಿಯಾಗಿದ್ದ. ಖತರ್‌ನಾಕ್ ರೆಡ್ಡಿ ತನ್ನ ಇನ್ನೊಬ್ಬ ಸ್ನೇಹಿತ ಮದನ್ ಮೋಹನ್ ರಾಜ್‌ನನ್ನು ತನ್ನೊಂದಿಗೆ ಕರೆದುಕೊಂಡು 2005ರ ಜನವರಿಯಲ್ಲಿ ಬೆಂಗಳೂರಿಗೆ ಬಂದ.

ಹಾಗೆ ಬಂದವನೇ ಉಪಾಯವಾಗಿ ರಾಜೇಶನನ್ನು ತಾನು ಉಳಿದುಕೊಂಡಿದ್ದ ಉಪ್ಪಾರಪೇಟೆಯ ಮಹಾಲಕ್ಷ್ಮಿ ಇಂಟರ್‌ನ್ಯಾಷನಲ್ ಲಾಡ್ಜ್‌ಗೆ ಕರೆಸಿಕೊಂಡ. ಅಲ್ಲಿ ರಾಜೇಶನಿಗೆ ಸರಿಯಾಗಿ ಕುಡಿಸಿ ತಾವೂ ಕುಡಿದರು. ತುಂಬಾ ಹೊತ್ತಾದ ನಂತರ ರಾಜೇಶ್ ತನ್ನ ಮನೆಗೆ ಹೊರಡಲು ಸಜ್ಜಾದ. ಆಗ ರೆಡ್ಡಿ ಮತ್ತು ಮೋಹನ್‌ರಾಜ್ ಆತನ ಮೇಲೆ ಮುಗಿಬಿದ್ದರು. ರಾಜೇಶನ ಕತ್ತನ್ನು ಕತ್ತರಿಸಿ ಆತನನ್ನು ಕೊಂದೇ ಬಿಟ್ಟರು. ಯಾರಿಗೂ ರಾಜೇಶನ ಗುರುತು ಸಿಗಬಾರದೆಂದು ಮೊದಲು ಆತನ ರುಂಡವನ್ನು ಕತ್ತರಿಸಿದರು. ಅದು ಸಾಲದೆಂಬಂತೆ ಆತನ ಕೈ ಮತ್ತು ಕಾಲಿನ ಬೆರಳುಗಳನ್ನೂ ತುಂಡರಿಸಿದರು.

ಆನಂತರ ರಾಜೇಶನ ರುಂಡವಿಲ್ಲದ ಮುಂಡವನ್ನು ಒಂದೆಡೆ ಎಸೆದು, ಆತನ ತಲೆ ಮತ್ತು ಬೆರಳುಗಳನ್ನು ಜೆ.ಜೆ.ನಗರದ ಸ್ಮಶಾನದಲ್ಲಿ ಸುಟ್ಟು ಹಾಕಿದರು. ಕೆಲದಿನಗಳ ನಂತರ ರಾಜೇಶ್‌ನ ರುಂಡವಿಲ್ಲದ ಮುಂಡ ಕೊಳೆತ ಸ್ಥಿತಿಯಲ್ಲಿ ಪೊಲೀಸರಿಗೆ ಜನವರಿ 10 ರಂದು ಸಿಕ್ಕಿತ್ತು. ಕೂಡಲೇ ಚುರುಕಾಗಿ ತನಿಖೆ ನಡೆಸಿದ ಉಪ್ಪಾರಪೇಟೆ ಪೊಲೀಸರು ರಾಜೇಶನ ಮೊಬೈಲ್‌ಗೆ ಕೊನೆ ಕರೆ ನೀಡಿದ್ದೇ ನಾಗಿರೆಡ್ಡಿ ಎಂದು ಪತ್ತೆಹಚ್ಚಿದರು. ಒಂದು ವಾರದಲ್ಲೇ ಹೈದರಾಬಾದ್‌ನಲ್ಲಿ ಅಡಗಿದ್ದ ರೆಡ್ಡಿ ಮತ್ತು ಮೋಹನ್ ರಾಜ್‌ನನ್ನು ಬಂಧಿಸಿ ಪರಪ್ಪನ ಅಗ್ರಹಾರದ ಜೈಲಿಗೆ ದೂಡಿದ್ದರು.

ವಿಕ್ಟೋರಿಯಾ ಆಸ್ಪತ್ರೆಯಿಂದ ಎಸ್ಕೇಪ್

ನಾಗಿರೆಡ್ಡಿ ಜೈಲುಪಾಲಾದ ವಿಷಯ ಇಂಟರ್‌ಪೋಲ್ ಪೊಲೀಸ್ ಅಧಿಕಾರಿಗಳ ಕಿವಿ ಮುಟ್ಟಿತು. ಈತ ಲಂಡನ್‌ನಲ್ಲಿ ಮಾಡಿದ್ದ ಕೊಲೆಯ ತನಿಖೆಗೆ ಸಂಬಂಧಿಸಿದಂತೆ ರೆಡ್ಡಿಯನ್ನು ವಶಪಡಿಸಿಕೊಳ್ಳುವ ತಯಾರಿಯನ್ನು ಅವರು ಪ್ರಾರಂಭಿಸಿದರು. ಇದರ ವಾಸನೆ ತಿಳಿಯುತ್ತಲೇ ರೆಡ್ಡಿ ತನಗೆ ವಿಪರೀತ ಬೆನ್ನು ನೋವಿದೆಯೆಂದು ನಾಟಕವಾಡಿದ. ಆಗ ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು. 2006 ರ ಆಗಸ್ಟ್ 7 ರಂದು ಆತನ ಬೆನ್ನೆಲುಬಿನ ಎಕ್ಸ್‌ರೇ ತೆಗೆಯಲು ಕರೆದುಕೊಂಡು ಹೋಗುತ್ತಿದ್ದಾಗ ಆತ ಪೊಲೀಸರಿಗೆ ಚಳ್ಳೇಹಣ್ಣು ತಿನ್ನಿಸಿ ಆಸ್ಪತ್ರೆಯ ಗೋಡೆ ಹಾರಿ ಪರಾರಿಯಾಗಿದ್ದ.

ಬೆಂಗಳೂರಿನಿಂದ ಅದು ಹೇಗೋ ಹಿಂದೂಪುರಕ್ಕೆ ರೈಲಿನಲ್ಲಿ ಹೋದ ನಾಗಿರೆಡ್ಡಿ ತನ್ನ ಹಳೆಯ ಹರಾಮಿ ಗೆಳೆಯರಾದ ಚಿಂತಾಲ ಶ್ರೀಶೈಲಂ ಮತ್ತು ಶ್ರೀಹರಿ ಎಂಬುವವರನ್ನು ಕೂಡಿಕೊಂಡ. ಮೂವರೂ ಸೇರಿಕೊಂಡು ಅಫ್ಜಲ್‌ಗಂಜ್‌ನಲ್ಲಿ ಟ್ರವೆರಾ ಕಾರೊಂದನ್ನು ಕದ್ದು ಅದರ ನಂಬರ್ ಪ್ಲೇಟ್ ಬದಲಿಸಿ ದರೋಡೆಗಳಿಗೆ ಇಳಿದರು. ಮಲ್ಕಂಗಿರಿಯ ಅಪಾರ್ಟ್‌ಮೆಂಟ್‌ನಿಂದಲೇ ತಮ್ಮ ಕಾರ್ಯಾಚರಣೆಯನ್ನು ಪ್ರಾರಂಭಿಸಿದ ಈ ತ್ರಿಮೂರ್ತಿಗಳು ಶಾಮೀರ್ ಪೇಟೆಯಲ್ಲಿನ ಮನೆಯೊಂದಕ್ಕೆ ನುಗ್ಗಿ 45,000 ರೂ.ಗಳನ್ನು ದೋಚಿದರು. ಆನಂತರ ಧರ್ಮಾವರಂನಲ್ಲಿ ಉದ್ಯೋಗಿಯೊಬ್ಬರನ್ನು ದರೋಡೆ ಮಾಡಿ 60,000 ರೂ.ಗಳನ್ನು ಕಿತ್ತುಕೊಂಡರು. ಹೀಗೆ ದೋಚಿದ್ದ ಹಣದಲ್ಲಿ ಸೆಕೆಂಡ್ ಹ್ಯಾಂಡ್ ಕಾರೊಂದನ್ನು ಖರೀದಿಸಿದರು. ಆದರೆ ಒಂದು ದಿನ ಅವರು ಅನಂತಪುರ ಜಿಲ್ಲೆಯ ಗಡಿ ದಾಟುವಾಗ ಹೈದರಾಬಾದ್ ಪೊಲೀಸರ ಕೈಗೆ ಸಿಕ್ಕಿ ಬಿದ್ದರು.

ಮತ್ತೆ ಕೇರಾಫ್ ಸೆಂಟ್ರಲ್ ಜೈಲ್

ಹೈದರಾಬಾದಿನಿಂದ ಮತ್ತೆ ಬೆಂಗಳೂರು ಜೈಲು ಸೇರಿದ ನಾಗಿರೆಡ್ಡಿ ಪರಪ್ಪನ ಅಗ್ರಹಾರದಲ್ಲೇ ಒಂದು ಗ್ಯಾಂಗನ್ನು ಕಟ್ಟಲಾರಂಭಿಸಿದ. ಇದು ಗೊತ್ತಾಗುತ್ತಿದ್ದಂತೆ ಆತನನ್ನು ಹಿಂಡಲಗಾ ಜೈಲಿಗೆ ಎತ್ತಂಗಡಿ ಮಾಡಲಾಗಿತ್ತು. ಜೈಲುಗಳಿರುವುದು ಕೈದಿಗಳ ಸುಧಾರಣೆಗೆ ಎಂದು ಯಾರಾದರೂ ಹೇಳಿದರೆ ನಾಗಿ ರೆಡ್ಡಿ ಗೊಳ್ಳನೆ ನಕ್ಕಾನು. ಯಾಕೆಂದರೆ ಬಹಳಷ್ಟು ಖದೀಮರಂತೆ ಈ ರೆಡ್ಡಿ ಕೂಡಾ ಜೈಲಿನ ಹೊರಗೆ ಕೊಲೆ ಮತ್ತು ದರೋಡೆ ಮಾಡುವ ಗ್ಯಾಂಗುಗಳನ್ನು ಒಳಗಿನಿಂದಲೇ ನಿಯಂತ್ರಿಸುತ್ತಿದ್ದ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ರೆಡ್ಡಿಯ ಮಾರ್ಗದರ್ಶನದಂತೆ ಆಭರಣ ಅಂಗಡಿಯೊಂದರ ಮೇಲೆ ದರೋಡೆಗೆ ಸಜ್ಜಾಗಿದ್ದ ತಂಡವನ್ನು ಹುಳಿಮಾವು ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸಿಸಿಬಿ ಪೊಲೀಸರು ಬಂಧಿಸಿದ್ದರು. ಇದಾದ ಕೆಲದಿನಗಳ ನಂತರ ಆರು ಜನರ ಮತ್ತೊಂದು ತಂಡ ಪೊಲೀಸರಿಗೆ ಸಿಕ್ಕಿಬಿದ್ದಿತ್ತು. ಅಷ್ಟೇ ಅಲ್ಲ, ಆ ತಂಡ ಕದ್ದಿದ್ದ 20 ಲಕ್ಷ ಮೌಲ್ಯದ ವಾಹನಗಳನ್ನೂ ಪೊಲೀಸರು ವಶಪಡಿಸಿಕೊಂಡಿದ್ದರು.


ಅಂದು ಸಿಕ್ಕಿಬಿದ್ದವರಲ್ಲಿ ಸುದ್ದುಗುಂಟೆಪಾಳ್ಯದ ಶಬ್ಬೀರ್, ಇಮ್ರಾನ್, ಅಗ್ರಹಾರ ದಾಸರಹಳ್ಳಿಯ ಮಂಜುನಾಥ, ಪುನೀತ್, ಸಿದ್ದಿಘಟ್ಟದ ಜೆ.ರಮೇಶ ಮತ್ತು ಚೌದ ರೆಡ್ಡಿ ಎಂಬುವವರಿದ್ದರು. ಅವರನ್ನೆಲ್ಲ ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಗೊತ್ತಾಗಿದ್ದೇನೆಂದರೆ ರೆಡ್ಡಿಯ ಮಾರ್ಗದರ್ಶನದ ಪ್ರಕಾರ ಅವರೆಲ್ಲ ಟೂರಿಸ್ಟ್ ವಾಹನಗಳನ್ನು ಬಾಡಿಗೆ ಪಡೆದು ದಾರಿ ಮಧ್ಯೆ ಅವುಗಳ ಡ್ರೈವರ್‌ಗಳನ್ನು ಮುಗಿಸಿ ಕಾರನ್ನು ಕದಿಯುತ್ತಿದ್ದರು. ಅವರಿಗೆ ಹೀಗೆ ಬಲಿಯಾಗಿದ್ದವರಲ್ಲಿ ಸರ್ಜಾಪುರ ಹಾಗೂ ಸೂಲಿಬೆಲೆಯ ವ್ಯಾಪ್ತಿಯಲ್ಲಿ ನೋಂದಣಿಯಾಗಿದ್ದ ಇಬ್ಬರು ಕಾರ್ ಡ್ರೈವರುಗಳು ಸೇರಿದ್ದರು.

ಇದಕ್ಕೂ ಮುನ್ನ ಈ ಗ್ಯಾಂಗಿನ ಶಬ್ಬೀರ್ ಪಾಶ ಡಬಲ್ ಮರ್ಡರ್ ಕೇಸಿನಲ್ಲಿ ಒಮ್ಮೆ ಜೈಲು ಸೇರಿದ್ದ. ಆಗಲೇ ಅವನಿಗೂ ನಾಗಿರೆಡ್ಡಿಗೂ ದೋಸ್ತಿಯಾಗಿದ್ದು. ತನ್ನ ತಾಯಿಗೆ ಹುಷಾರಿಲ್ಲ ಎಂದು ಹೇಳಿ ಮಧ್ಯಂತರ ಜಾಮೀನು ಪಡೆದು ಹೊರಬಂದಿದ್ದ ಶಬ್ಬೀರ್, ನಾಗಿರೆಡ್ಡಿಯ ಆದೇಶದಂತೆ ಒಂದು ಗ್ಯಾಂಗ್ ಕಟ್ಟಿಕೊಂಡಿದ್ದ. ಹಾಗೆ ಮಾಡುವ ಮೂಲಕ ಹೊರ ಜಗತ್ತಿನಲ್ಲಿ ನಾಗೇಂದ್ರ ರೆಡ್ಡಿಯ ಲಿಂಕ್ ಪಿನ್ನಾಗಿದ್ದ.

ಪೊಲೀಸ್ ಅಧಿಕಾರಿಗಳಿಗೆ ಬುದ್ಧಿ ಇತ್ತಾ?


ಈ ನಾಗಿರೆಡ್ಡಿ ಎಂಬ ಟೆಕ್ಕಿ ಲಂಡನ್‌ಗೆ ಹೋಗುವ ಮೊದಲೇ ಹೈದರಾಬಾದ್ ಮತ್ತು ಸಿಕಂದರಾಬಾದ್‌ಗಳಲ್ಲಿ ಒಂದೊಂದು ಕೊಲೆ ಮಾಡಿದ್ದ ಎನ್ನಲಾಗಿದೆ.

ತಾನು ಹೋದಲ್ಲೆಲ್ಲಾ ಒಂದೊಂದು ಹೆಸರಿಟ್ಟುಕೊಳ್ಳುತ್ತಾ, ತನ್ನ ಕೈಗೆ ಸಿಕ್ಕವರನ್ನು ಕೊಲ್ಲುವುದನ್ನೇ ಹವ್ಯಾಸ ಮಾಡಿಕೊಂಡಿದ್ದ ಈ ವಿಕೃತ ರಕ್ತಪಿಪಾಸು ರೆಡ್ಡಿಯನ್ನು ಚಿಕಿತ್ಸೆಗೆಂದು ಜೈಲಿನಿಂದ ಆಸ್ಪತ್ರೆಗೆ ಕರೆತರುವಾಗ ಯಾವ ಮುನ್ನೆಚ್ಚರಿಕೆ ಬೇಕೋ ಅದನ್ನು ಪೊಲೀಸರು ತೆಗೆದುಕೊಂಡಿದ್ದರೆ ಹೀಗೆ ಆತ ಮೊನ್ನೆ ಮತ್ತೆ ತಪ್ಪಿಸಿಕೊಳ್ಳಲು ಸಾಧ್ಯವಿತ್ತಾ?



ಇವನ ಚರಿತ್ರೆ ಏನೆಂದು ಗೊತ್ತಿದ್ದ ಪೊಲೀಸ್ ಅಧಿಕಾರಿಗಳಿಗೆ ಅವನು ಆಸ್ಪತ್ರೆ ಸೇರಲು ಮಾಡಿದ ನಾಟಕ ತಿಳಿಯಲೇ ಇಲ್ಲವಾ? ಅಥವಾ ತಿಳಿದಿದ್ದರೂ ಅವರು ರೆಡ್ಡಿ ಪರಾರಿಗೆ ಸಹಕರಿಸಿದರಾ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಗುವುದರೊಳಗೆ ಈಗ ಎಸ್ಕೇಪ್ ಆಗಿರುವ ಸೈಕೋಪಾತ್ ಕಿಲ್ಲರ್ ನಾಗಿರೆಡ್ಡಿ ಮತ್ತೆಷ್ಟು ಜೀವ ತೆಗೆಯುತ್ತಾನೋ. ಇನ್ನೆಷ್ಟು ಗ್ಯಾಂಗ್ ರೆಡಿ [illegible]

ಹುಣ್ಣಿಮೆಯ ಬೆಳದಿಂಗಳು ಬುದ್ಧನಾದ ಕತೆ



ವಿಶೇಷ ಲೇಖನ

ಮೂಲ: ಡಾ. ಬಿ.ಆರ್.ಅಂಬೇಡ್ಕರ್
ಕನ್ನಡಕ್ಕೆ: ಕೆ.ಆರ್.ವಿದ್ಯಾಧರ, ಮಡಿಕೇರಿ

ಸೇನಾಪತಿ ವ್ಯಗ್ರಗೊಂಡಿದ್ದ ಯಾಕೆಂದರೆ ಅಲ್ಲಿಯತನಕ ಆತ ಮಾಡಿದ ಬೆಂಕಿ ಉಗುಳುವ ಭಾಷಣ ಜೀವವಿರೋಧಿಯಾದುದು ಎನ್ನುವುದನ್ನು ತರುಣ ಸಿದ್ಧಾರ್ಥ ಗೌತಮ ಎಳೆಎಳೆಯಾಗಿ ಸಂಘದ ಮುಂದೆ ಬಿಡಿಸಿಟ್ಟಿದ್ದ!

ಅದು ಸಾಖ್ಯ ಸಂಘ. ಕೆಲವು ಕುಲೀನ ಮನೆತನಗಳು ಸೇರಿ ಸರದಿಯ ಪ್ರಕಾರ ರಾಜ್ಯಾಡಳಿತವನ್ನು ನಡೆಸುವ ಪದ್ಧತಿ ಇಂದಿಗೆ ಎರಡೂವರೆ ಸಾವಿರ ವರ್ಷಗಳ ಹಿಂದಿನ ಸಾಖ್ಯ ದೇಶದಲ್ಲಿ ಪ್ರಚಲಿತವಿತ್ತು. ಗಣ್ಯ ಮನೆತನಗಳಿಗೆ ಸೇರಿದ ಇಪ್ಪತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಿನ ವ್ಯಕ್ತಿಗಳು ಒಟ್ಟು ಸೇರಿ ದೇಶದ ಒಳಿತುಕೆಡುಕುಗಳ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವುದು ಸಂಘದ ಕಾರ್ಯ ವಿಧಾನವಾಗಿತ್ತು. ಈ ಸಂಘವು ಸಾಖ್ಯ ದೇಶದ ಕೇಂದ್ರಸ್ಥಾನ ಕಪಿಲವಸ್ತುವಿನಲ್ಲಿತ್ತು. ಈ ಕಪಿಲವಸ್ತು ಎಲ್ಲ ಊರಂತೆ ಕೇವಲ ಒಂದು ಊರು ಮಾತ್ರ ಆಗಿರಲಿಲ್ಲ, ಪ್ರಖರ ಜ್ಞಾನಿ ಕಪಿಲಮುನಿಯ ಹೆಸರಿನ ಊರದು. ಅಂತೆಯೇ ವೈಚಾರಿಕತೆ ಅಲ್ಲಿನ ಮಣ್ಣಿನ ಗುಣವಾಗಿತ್ತು.

ಗಣ್ಯ ಮನೆತನಕ್ಕೆ ಸೇರಿದ ಮತ್ತು ಒಂದೊಮ್ಮೆ ಸಾಖ್ಯ ದೇಶದ ಮುಖ್ಯಸ್ಥನಾಗಿದ್ದ ಶುದ್ಧೋದನನ ಹಿರಿಮಗ ಸಿದ್ಧಾರ್ಥ ಗೌತಮ ತನ್ನ ಇಪ್ಪತ್ತನೇ ವರ್ಷ ವಯಸ್ಸಿನಲ್ಲೇ ಸರ್ವಾನುಮತದಿಂದ ಸಂಘದ ಸದಸ್ಯನಾಗಿ ಆಯ್ಕೆಗೊಂಡಿದ್ದ. ಅಲ್ಲಿಂದ ಮುಂದೆ ಇಪ್ಪತ್ತೊಂಬತ್ತನೇ ವರ್ಷದ ತನಕ ಸಂಘದ ಆಗುಹೋಗುಗಳಲ್ಲಿ ತಪ್ಪದೇ ಭಾಗವಹಿಸಿದ್ದ. ಅದರ ಚಟುವಟಿಕೆಗಳಲ್ಲಿ ಗಾಢವಾಗಿ ತೊಡಗಿಸಿಕೊಂಡಿದ್ದ. ಆಗ ಆ ಅನಿರೀಕ್ಷಿತ ಘಟನೆ ನಡೆಯಿತು!

ಕಪಿಲವಸ್ತು ಮತ್ತು ನೆರೆಯ ದೇಶ ರಾಮಗಾಮದ ನಡುವೆ ರೋಹಿಣಿ ನದಿ ಹರಿಯುತ್ತಿತ್ತು. ಎರಡೂ ದೇಶದ ಜನ ನದಿಯ ನೀರನ್ನು ಕೃಷಿಗೆ ಬಳಸಿಕೊಳ್ಳುತ್ತಿದ್ದರು. ನೀರು ಹಂಚಿಕೆ ಬಗ್ಗೆ ಹುಟ್ಟಿಕೊಳ್ಳುತ್ತಿದ್ದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಒಂದು ಹೊಂದಾಣಿಕೆಯ ಪದ್ಧತಿಯನ್ನು ಅವರು ಅನುಸರಿಸುತ್ತಿದ್ದರು. ಆದರೂ ಅಲ್ಲೊಂದು ಇಲ್ಲೊಂದು ಕಹಿ ಘಟನೆಗಳು ನಡೆಯುತ್ತಿದ್ದವು. ಆದರೂ ಅದು ಎಂದೂ ವಿಕೋಪಕ್ಕೆ ಹೋಗುತ್ತಿರಲಿಲ್ಲ. ಆದರೆ ಆ ಸಲ ಅದು ಹಾಗಾಗಲಿಲ್ಲ. ಸಾಖ್ಯರ ಮತ್ತು ರಾಮಗಾಮದ ಕೋಲಿಯ ಜನರ ಕೆಲಸದಾಳುಗಳು ಹೊಡೆದಾಡಿದರು. ಸಹಜ, ಎರಡೂ ಕಡೆಯ ಮಂದಿಗೆ ಗಾಯಗಳಾದವು. ಕೋಲಿಯರ ಉದ್ಧಟತನ ಕಪಿಲವಸ್ತು ವಿನವರ ತಾಳ್ಮೆಯನ್ನು ಕೆಣಕುವಂತಿತ್ತು. ಈ ಸಮಸ್ಯೆಯನ್ನು ಯುದ್ಧದ ಮೂಲಕ ಶಾಶ್ವತವಾಗಿ ಪರಿಹರಿಸಬಹುದೆಂಬ ತೀರ್ಮಾನಕ್ಕೆ ಕೆಲವರು ಬಂದಿದ್ದರು. ರಾಮಗಾಮದಲ್ಲಿ ಸಹ ಇದೇ ತರಹದ ಸ್ಥಿತಿ ನಿರ್ಮಾಣಗೊಳ್ಳತೊಡಗಿತು. ಯುದ್ಧೋನ್ಮಾದದ ನೆರಳು ಸುದೀರ್ಘವಾಗಿ ಚಾಚತೊಡಗಿತು. ಸಾಖ್ಯ ದೇಶದ ಸೇನಾಪತಿ ಈ ಕಡೆಯಲ್ಲಿ ಯುದ್ಧಾಸಕ್ತವಾದದ ಕೇಂದ್ರಬಿಂದುವಾಗಿದ್ದ. ಸಮರದ ಮನಸ್ಥಿತಿಗೆ ಸಂಘದ ಸದಸ್ಯರನ್ನು ಸಿದ್ಧಗೊಳಿಸಲು ಸನ್ನದ್ಧನಾದ ಸೇನಾಪತಿ ಅದಕ್ಕೆಂದೇ ಸಂಘದ ವಿಶೇಷ ಸಭೆಯನ್ನು ಕರೆದಿದ್ದ. ತನ್ನ ಸಮ್ಮೋಹಕ ಮಾತಿನಿಂದ ಎಲ್ಲರನ್ನೂ ತನ್ನ ಇಚ್ಛೆಗೆ ತಕ್ಕಂತೆ ಬಗ್ಗಿಸಿಕೊಳ್ಳಬಹುದೆಂಬುದು ಅವನ ಗ್ರಹಿಕೆಯಾಗಿತ್ತು.

"ನಮ್ಮ ಜನ ಕೋಲಿಯರಿಂದ ತೀವ್ರವಾದ ಪ್ರಹಾರಕ್ಕೆ ಒಳಗಾಗಿದ್ದಾರೆ. ಅದಕ್ಕೆ ನಾವು ಸೂಕ್ತ ಪ್ರತೀಕಾರ ನೀಡಬೇಕಾಗಿದೆ. ಕೋಲಿಯರ ಈ ತರಹದ ಉದ್ಧಟತನ ಹಲವು ಬಾರಿ ನಡೆದಿದೆ. ನಾವು ಸಾಕಷ್ಟು ತಾಳ್ಮೆಯಿಂದಲೇ ಇದ್ದೇವೆ. ಆದರೆ ಈ ಸ್ಥಿತಿ ಹೆಚ್ಚುಕಾಲ ಮುಂದುವರಿಯಕೂಡದು. ಇದನ್ನು ನಿಲ್ಲಿಸಲು ಇರುವ ಏಕೈಕ ಮಾರ್ಗವೆಂದರೆ ಯುದ್ಧ. ಸಂಘ ಕೂಡಲೇ ಕೋಲಿಯರ ಮೇಲೆ ಸಮರವನ್ನು ಘೋಷಿಸಬೇಕು" ಎಂದು ತನ್ನ ತರ್ಕವನ್ನು ಮುಂದಿಟ್ಟ ಸೇನಾಪತಿ, "ನನ್ನ ಮಾತನ್ನು ಒಪ್ಪದವರು ತಮ್ಮ ಅಭಿಪ್ರಾಯಗಳನ್ನು ಹೇಳಬಹುದು" ಎಂಬ ಮಾತನ್ನೂ ಸೇರಿಸಿದ.

ಸೇನಾಪತಿಯ ಮಾತು ಸಿದ್ಧಾರ್ಥ ಗೌತಮನಿಗೆ ತರ್ಕವಿಹೀನವಾಗಿ, ಅಪ್ರಬುದ್ಧವಾಗಿ ಕಂಡಿತು. ಕುಳಿತಲ್ಲಿಂದ ಎದ್ದು ಆತ ಹೇಳಿದ, "ನಾನು ಈ ಕೋರಿಕೆಯನ್ನು ವಿರೋಧಿಸುತ್ತೇನೆ. ಯುದ್ಧ ಯಾವುದೇ ಸಮಸ್ಯೆಯನ್ನು ಬಗೆಹರಿಸುವುದಿಲ್ಲ ಮತ್ತು ಬಗೆಹರಿಸಲಾರದು. ಆದರಿಂದ ನಮ್ಮ ಉದ್ದೇಶ ಸಹ ಈಡೇರಲಾರದು. ಮತ್ತೊಂದು ಯುದ್ಧಕ್ಕೆ ಅದು ಬೀಜವಾಗಬಹುದಷ್ಟೆ. ವಧಿಸುವಾತ ಸರದಿ ಬಂದಾಗ ತನ್ನನ್ನು ವಧಿಸುವವನನ್ನು ಎದುರುಗೊಳ್ಳುತ್ತಾನೆ. ವಿಜಯಶಾಲಿ ಸರದಿ ಬಂದಾಗ ತನ್ನನ್ನು ಸೋಲಿಸುವ ವಿಜಯಶಾಲಿಯನ್ನು ಎದುರುಗೊಳ್ಳುತ್ತಾನೆ. ಸುಲಿಗೆಕೋರ ಸರದಿ ಬಂದಾಗ ತನ್ನನ್ನು ಸುಲಿಗೆ ಮಾಡುವವನನ್ನು ಎದುರುಗೊಳ್ಳುತ್ತಾನೆ." ಮತ್ತೆ ಮಾತು ಮುಂದುವರಿಸಿದ ಸಿದ್ಧಾರ್ಥ ಗೌತಮ, "ಸಂಘ ಕೋಲಿಯ ಮೇಲೆ ಯುದ್ಧ ಸಾರಲು ಆತುರದ ನಿರ್ಣಯ ತೆಗೆದುಕೊಳ್ಳಕೂಡದು. ಯಾರು ತಪ್ಪಿತಸ್ಥರು ಎನ್ನುವುದನ್ನು ಮೊದಲು ಕೂಲಂಕಷವಾಗಿ ನೋಡಬೇಕು. ನಮ್ಮ ಜನ ಸಹ ಆಕ್ರಮಣಶೀಲರಾಗಿದ್ದರೆಂದು ನಾನು ಕೇಳಿಸಿಕೊಂಡಿದ್ದೇನೆ. ಅದು ಸತ್ಯವಾಗಿದ್ದಲ್ಲಿ ನಾವು ನಿಂದನೆಗೆ ಅತೀತರಾಗಲು ಸಾಧ್ಯವಿಲ್ಲ" ಎಂದು ಹೇಳಿದ.

ಸಿದ್ಧಾರ್ಥ ಗೌತಮನ ವಾದಕ್ಕೆ ಉತ್ತರಿಸಿದ ಸೇನಾಪತಿ, "ನಮ್ಮವರು ಆಕ್ರಮಣಶೀಲರಾಗಿದ್ದರೆನ್ನುವುದು ಸತ್ಯ. ಆದರೆ ಈ ಸಲ ಮೊದಲು ನೀರು ತೆಗೆದುಕೊಳ್ಳುವುದು ನಮ್ಮ ಹಕ್ಕಾಗಿತ್ತು ಎನ್ನುವುದನ್ನು ನಾವು ಮರೆಯಕೂಡದು"ಎಂದ.

ಅದಕ್ಕೆ ಸಿದ್ಧಾರ್ಥ ಗೌತಮ, "ತಪ್ಪು ಯಾರದಿದ್ದರೂ ನಮ್ಮವರು ಸಂಪೂರ್ಣವಾಗಿ ದೋಷಾತೀತರಾಗಿರಲಿಲ್ಲ ಎನ್ನುವುದನ್ನು ಇದು ಸೂಚಿಸುತ್ತದೆ. ತಪ್ಪುಒಪ್ಪುಗಳನ್ನು ನಿರ್ಧರಿಸಲು ಮತ್ತು ಈ ಸಮಸ್ಯೆಗೆ ಶಾಶ್ವತ ಕೊನೆಯನ್ನು ಕಂಡುಕೊಳ್ಳಲು ಎರಡೂ ದೇಶದ ಗಣ್ಯರಿಂದ ಕೂಡಿದ ಒಂದು ಸಮಿತಿಯ ರಚನೆಯಾಗುವುದು ಉಚಿತ. ನಮ್ಮವರಿಂದ ಇಬ್ಬರನ್ನು ಆಯ್ಕೆ ಮಾಡೋಣ. ಅಂತೆಯೇ ಕೋಲಿಯರು ಇಬ್ಬರನ್ನು ಆಯ್ದುಕೊಳ್ಳಲಿ. ಈ ನಾಲ್ಕು ಮಂದಿ ಒಟ್ಟು ಸೇರಿ ಇನ್ನೊಬ್ಬ ಸೂಕ್ತ ವ್ಯಕ್ತಿಯನ್ನು ಆರಿಸಿಕೊಳ್ಳಲಿ. ಐದು ಜನರ ಈ ಸಮಿತಿ ಸಮಸ್ಯೆಯನ್ನು ನೀಗಿಸುವತ್ತ ಕೆಲಸ ಮಾಡಲಿ" ಎಂದು ಹೇಳಿದ. ಸಿದ್ಧಾರ್ಥ ಗೌತಮನ ಮಾತನ್ನು ಸಂಘದ ಕೆಲವು ಸದಸ್ಯರು ಸ್ವಾಗತಿಸಿ ತಮ್ಮ ಅನುಮೋದನೆಯನ್ನು ಸೂಚಿಸಿದರು. ಆದರೆ ಆದರಿಂದ ಸೇನಾಪತಿ ಸಂತುಷ್ಟನಾಗಲಿಲ್ಲ. ಆತ ಎತ್ತಿದ ಸ್ವರದಲ್ಲಿ ಹೇಳಿದ, "ಕೋಲಿಯರನ್ನು ತೀವ್ರ ಸ್ವರೂಪದಲ್ಲಿ ಶಿಕ್ಷಿಸದಿದ್ದಲ್ಲಿ ಈ ಕಿರುಕುಳಕ್ಕೆ ಪರಿಹಾರ ಖಂಡಿತ ದೊರಕಲಾರದು."

ಹೀಗೆ ಸಂಘದ ಮುಂದಿದ್ದ ಯುದ್ಧದ ಸಾಧ್ಯತೆಬಾಧ್ಯತೆಗಳ ಬಗೆಗಿನ ಚರ್ಚೆ ಸುದೀರ್ಘ ಅವಧಿಗೆ ಸಾಗಿತು. ಕೊನೆಯಲ್ಲಿ ಎರಡೂ ಸಲಹೆಗಳನ್ನು ಮತಕ್ಕೆ ಹಾಕಲು ನಿರ್ಧರಿಸಲಾಯಿತು.

ಮೊದಲಲ್ಲಿ ನೀರಿನ ಹಂಚಿಕೆಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಐದು ಜನರ ಸಮಿತಿಯನ್ನು ರಚಿಸುವ ಸಿದ್ಧಾರ್ಥ ಗೌತಮನ ಸಲಹೆಯನ್ನು ಮತಕ್ಕೆ ಹಾಕಲಾಯಿತು. ಆದರೆ ಆ ನಿಲುವಳಿಗೆ ತೀವ್ರವಾದ ಸೋಲು ಉಂಟಾಯಿತು. ನಂತರ ಯುದ್ಧ ಘೋಷಣೆಯ ಕುರಿತು ಸೇನಾಪತಿ ನೀಡಿದ ಸಲಹೆಯನ್ನು ಮತಕ್ಕೆ ಹಾಕಲು ಸಂಘ ಸಿದ್ಧತೆ ನಡೆಸಿದಾಗ ಮಧ್ಯೆ ಪ್ರವೇಶಿಸಿದ ಸಿದ್ಧಾರ್ಥ ಗೌತಮ, "ಈ ನಿಲುವಳಿಯನ್ನು ಅಂಗೀಕರಿಸಬಾರದಾಗಿ ಸಂಘವನ್ನು ಬೇಡಿಕೊಳ್ಳುತ್ತೇನೆ. ಯಾಕೆಂದರೆ ಸಾಖ್ಯರು ಮತ್ತು ಕೋಲಿಯರು ಹತ್ತಿರದ ಬಂಧುಗಳು. ಆ ಕಡೆ ಈ ಕಡೆ ಕೊಡುವುದು ತರುವುದರ ಸಂಬಂಧವಿದೆ. ಯುದ್ಧದ ಮೂಲಕ ನಾವು ಪರಸ್ಪರ ನಾಶಗೊಳ್ಳುವುದು ವಿವೇಕದ ನಿರ್ಧಾರವಾಗಲಾರದು" ಎಂದು ವಿನಮ್ರತೆಯಿಂದ ಪ್ರಾರ್ಥಿಸಿದ.

ಈ ಚರ್ಚೆ, ವಾಗ್ವಾದಗಳ ಕೊನೆಯಲ್ಲಿ ಸಿದ್ಧಾರ್ಥ ಗೌತಮನಿಗೆ ಉಳಿದದ್ದು ಮೂರು ದಾರಿ. ಮೊದಲನೆಯದ್ದು ಯುದ್ಧದಲ್ಲಿ ಭಾಗವಹಿಸುವುದು, ಎರಡನೆಯದ್ದು ಮರಣದಂಡನೆ ಅಥವಾ ಗಡಿಪಾರಿಗೆ ಒಳಪಡುವುದು ಮತ್ತು ಕೊನೆಯದಾಗಿ ಸಾರ್ವಜನಿಕ ಬಹಿಷ್ಕಾರ ಮತ್ತು ಸೊತ್ತುಗಳ ಮುಟ್ಟುಗೋಲಿನ ಶಿಕ್ಷೆಯನ್ನು ಸ್ವೀಕರಿಸುವುದು. ಯುದ್ಧದಲ್ಲಿ ಭಾಗವಹಿಸುವುದು ಆತನ ಊಹೆಗೂ ನಿಲುಕದ ವಿಷಯವಾಗಿತ್ತು. ಅವನ ಛಲಕ್ಕಾಗಿ ಕುಟುಂಬ ತೀವ್ರ ತರಹದ ಶಿಕ್ಷೆಗೆ ಒಳಗಾಗುವುದು ಸಹ ಒಳಿತಾಗಿ ಕಾಣಿಸಲಿಲ್ಲ. ಕೊನೆಗೆ ಉಳಿದದ್ದೊಂದೇ ದಾರಿ, ಮರಣದಂಡನೆ ಅಥವಾ ಗಡಿಪಾರಿನ ಶಿಕ್ಷೆಯನ್ನು ಅಂಗೀಕರಿಸುವುದು.

ಸಿದ್ಧಾರ್ಥ ಗೌತಮನ ಕೋರಿಕೆಯನ್ನು ತಕ್ಷಣ ಖಂಡಿಸಿದ ಸೇನಾಪತಿ, "ಸಂಗ್ರಾಮದಲ್ಲಿ ಬಂಧುಗಳು ಮತ್ತು ಅಪರಿಚಿತರೆಂಬ ಭೇದ ಕ್ಷತ್ರಿಯರಲ್ಲಿಲ್ಲ. ದೇಶದ ಒಳಿತಿಗಾಗಿ ಸ್ವಂತ ಸಹೋದರರರೊಂದಿಗೆ ಸೆಣಸುವುದು ಸಹ ಅಪರಾಧವಲ್ಲ. ಪೂಜಾ ಕೈಂಕರ್ಯದಲ್ಲಿ ಪ್ರಾಣಿಬಲಿಯನ್ನು ನೀಡುವುದು ಬ್ರಾಹ್ಮಣರ ಕೆಲಸ, ಯುದ್ಧ ಕ್ಷತ್ರಿಯರ ಜವಾಬ್ದಾರಿ, ವ್ಯಾಪಾರ ವೈಶ್ಯರ ಕಸುಬು ಮತ್ತು ಸೇವೆ ಮಾಡುವುದು ಶೂದ್ರನ ಧರ್ಮ. ಪ್ರತಿಯೊಂದು ವರ್ಗ ತನಗೆ ನೀಡಲಾದ ಕೆಲಸವನ್ನು ನಿರ್ವಹಿಸುವುದೇ ಯೋಗ್ಯ ವಿಧಾನ. ಅದು ಶಾಸ್ತ್ರಸಮ್ಮತ" ಎಂದು ಹೇಳಿದ.

ಅದಕ್ಕೆ ಪ್ರತಿಕ್ರಿಯಿಸಿದ ಸಿದ್ಧಾರ್ಥ ಗೌತಮ, "ನನಗೆ ತಿಳಿದಂತೆ ಶತ್ರುತ್ವ ಶತ್ರುತ್ವವನ್ನು ನೀಗಿಸುವುದಿಲ್ಲ ಎಂದು ಧರ್ಮ ಗ್ರಹಿಸುತ್ತದೆ. ಅದನ್ನು ಗೆಲ್ಲಲು ಪ್ರೀತಿಯೊಂದರಿಂದ ಮಾತ್ರ ಸಾಧ್ಯ ಮತ್ತಾವುದರಿಂದಲೂ ಅದು ಸಾಧ್ಯವಿಲ್ಲ" ಎಂದ. ಆ ಮಾತಿಗೆ ತೀವ್ರವಾಗಿ ರೇಗಿದ ಸೇನಾಪತಿ, "ಚರ್ಚೆಯನ್ನು ತತ್ವಶಾಸ್ತ್ರದ ನೆಲೆಗಳತ್ತ ಕೊಂಡೊಯ್ಯುವುದು ಅನಗತ್ಯ. ಈಗ ಇರುವ ಮುಖ್ಯ ವಿಷಯವೆಂದರೆ ನನ್ನ ಸಲಹೆಯನ್ನು ಸಿದ್ಧಾರ್ಥ ವಿರೋಧಿಸುತ್ತಿದ್ದಾನೆ ಎನ್ನುವುದು. ಸಂಘ ಯಾವುದನ್ನು ಅಂಗೀಕರಿಸುತ್ತದೆ ಎಂಬುದನ್ನು ಕೂಡಲೇ ಮತಕ್ಕೆ ಹಾಕಿ ತಿಳಿದುಕೊಳ್ಳೋಣ" ಎಂದು ಹೇಳಿದ. ಮತಕ್ಕೆ ಹಾಕಿದಾಗ ಸೇನಾಪತಿಯ ಸಲಹೆ ಬಹುಮತದಿಂದ ಅಂಗೀಕರಿಸಲ್ಪಟ್ಟಿತು.

* * * * * *

ಮರುದಿನ ಸೇನಾಪತಿಯ ಕೋರಿಕೆ ಮೇರೆಗೆ ಸಾಖ್ಯ ಸಂಘ ಮತ್ತೆ ಸಭೆ ಸೇರಿತು. ಕೋಲಿಯರ ಮೇಲೆ ಯುದ್ಧಕ್ಕೆ ಇಪ್ಪತ್ತರಿಂದ ಮೂವತ್ತು ವರ್ಷದೊಳಗಿನ ಎಲ್ಲ ಸಾಖ್ಯರೂ ಭಾಗಿಗಳಾಗಬೇಕೆಂದು ಅಂದಿನ ಸಭೆಯಲ್ಲಿ ಆಗ್ರಹಿಸುವ, ನಿರ್ಣಯವನ್ನು ಅಂಗೀಕರಿಸುವ ಉದ್ದೇಶ ಸೇನಾಪತಿಗೆ ಅನಿವಾರ್ಯವಾಗಿತ್ತು.

ಅಂದಿನ ಸಭೆಯಲ್ಲಿ ಯುದ್ಧವನ್ನು ಬೆಂಬಲಿಸಿದ ಮತ್ತು ವಿರೋಧಿಸಿದ ಸದಸ್ಯರೆಲ್ಲರೂ ಭಾಗವಹಿಸಿದ್ದರು. ಯುದ್ಧವನ್ನು ಆಗ್ರಹಿಸುವ ಜನ ಹೆಚ್ಚಿದ್ದ ಕಾರಣ ಸೇನಾಪತಿಯ ಸಲಹೆ ಅಂಗೀಕಾರಗೊಳ್ಳಲು ಯಾವುದೇ ಅಡೆತಡೆಗಳಿರಲಿಲ್ಲ. ಯುದ್ಧವನ್ನು ವಿರೋಧಿಸಿದ ಸದಸ್ಯರಿಗೆ ಸೈನ್ಯವನ್ನು ಸೇರಿಸುವುದರ ಕುರಿತಾಗಿ ತಮಗಿದ್ದ ಆಕ್ಷೇಪಗಳನ್ನು ಧೈರ್ಯದಿಂದ ವ್ಯಕ್ತಪಡಿಸುವ ಶಕ್ತಿ ಇರಲಿಲ್ಲ. ತನ್ನ ಮಾತುಗಳನ್ನು ಒಪ್ಪಿದ ಜನರ ಪರ ಮಾತನಾಡುವ ಅಗತ್ಯ ಸಿದ್ಧಾರ್ಥ ಗೌತಮನಿಗಿತ್ತು. ಅದಕ್ಕೆಂದೇ ಆತ ತನ್ನವರ ಭಾರವನ್ನೆಲ್ಲ ತನ್ನ ಮೇಲೆ ತಾನೇ ಎಳೆದುಕೊಂಡು, "ಗೆಳೆಯರೆ, ಬಹುಮತ ನಿಮ್ಮ ಕಡೆಗಿದೆ. ಅದೇನಿದ್ದರೂ ನಾನು ನಿಮ್ಮ ನಿರ್ಣಯಕ್ಕೆ ಅನುಸಾರವಾಗಿ ಸೈನ್ಯವನ್ನು ಸೇರಲಾರೆ. ಅದು ನನ್ನ ವೈಚಾರಿಕ ನಿಲುವಿಗೆ ವಿರುದ್ಧವಾದುದು. ನಾನು ಯುದ್ಧದಲ್ಲಿ ಭಾಗಿಯಾಗಲಾರೆ" ಎಂದ. ಅದಕ್ಕೆ ಸೇನಾಪತಿ, "ಸಂಘದ ಸದಸ್ಯನಾದಾಗ ನೀನು ತೆಗೆದುಕೊಂಡ ಪ್ರತಿಜ್ಞೆ ನೆನಪಿರಬೇಕು. ಅದನ್ನು ಉಲ್ಲಂಘಿಸಿದರೆ ನೀನು ಸಾರ್ವಜನಿಕ ಅಪಹಾಸ್ಯಕ್ಕೆ ಈಡಾಗುತ್ತೀಯ" ಎಂದು ನುಡಿದ.

"ನನಗೆ ಮುಖ್ಯವಾದುದು ಸಾಖ್ಯ ಕುಲದ ಒಳಿತು. ಹಾಗೆಂದೇ ನಾನು ಪ್ರತಿಜ್ಞೆ ಸ್ವೀಕರಿಸಿದ್ದೇನೆ. ಅದು ಯುದ್ಧದಿಂದ ಸಾಧ್ಯವಾಗಲಾರದೆಂಬುದು ನನ್ನ ಖಚಿತ ನಂಬಿಕೆ" ಎಂದು ಉತ್ತರಿಸಿದ.

ಸಾಖ್ಯ ದೇಶ ಒಂದು ಸ್ವತಂತ್ರ ದೇಶವಾಗಿದ್ದರೂ ಆ ಸಮಯದಲ್ಲಿ ಅದರ ಆಗುಹೋಗುಗಳ ಮೇಲೆ ಅಂದಿನ ಪ್ರಬಲ ರಾಜಾಡಳಿತದ ರಾಷ್ಟ್ರವಾದ ಕೋಸಲದ ರಾಜನ ಪ್ರಶ್ನಾತೀತ ನಿಯಂತ್ರಣವಿತ್ತು. ಅದರ ಅರಿವಿದ್ದ ಸಿದ್ಧಾರ್ಥ ಗೌತಮ, "ಕೋಲಿಯರ ಮೇಲೆ ಸಮರ ಸಾರಿದರೆ ಅದರಿಂದ ಕೋಸಲದ ರಾಜನಿಗೆ ಸಾಖ್ಯರ ಸ್ವಾತಂತ್ರ್ಯವನ್ನು ಮತ್ತಷ್ಟು ಮೊಟಕುಗೊಳಿಸಲು ಅನುಕೂಲವಾಗುತ್ತದೆ" ಎಂದು ಹೇಳಿದ.

ಇದರಿಂದ ಸೇನಾಪತಿ ಸಿಟ್ಟಿಗೆದ್ದ. "ನಿನ್ನ ವಾಕ್ಚಾತುರ್ಯ ನಿನ್ನ ನೆರವಿಗೆ ಬರಲಾರದು. ನೀನು ಬಹುಮತವನ್ನು ಗೌರವಿಸಲೇಬೇಕು. ಕೋಸಲದ ರಾಜನ ಅನುಮತಿ ಇಲ್ಲದೆ ನಿನಗೆ ಮರಣದಂಡನೆ ವಿಧಿಸಲಾಗಲೀ, ದೇಶಾಂತರ ಗಡಿಪಾರು ಮಾಡಲಾಗಲೀ ಸಂಘಕ್ಕೆ ಅಧಿಕಾರ ಇಲ್ಲ ಎಂಬ ಕಾರಣಕ್ಕೆ ಮತ್ತು ಕೋಸಲದ ಅರಸ ನಿನ್ನ ಮೇಲೆ ಅಂತಹ ಶಿಕ್ಷೆಯನ್ನು ನೀಡಲು ಅನುಮತಿ ಕೊಡಲಾರ ಎಂಬ ಧೈರ್ಯದಿಂದ ಈ ರೀತಿ ಮಾತನಾಡುತ್ತಿದ್ದೀಯ" ಎಂದು ಆರ್ಭಟಿಸುತ್ತಾ "ಕೋಸಲದ ರಾಜನ ಅನುಮತಿಯಿಲ್ಲದೆ ಸಂಘ ನಿನಗೆ ಬೇರೆ ಶಿಕ್ಷೆಗಳನ್ನು ಕೊಡಬಲ್ಲದು. ನಿನ್ನ ಕುಟುಂಬಕ್ಕೆ ಸಾರ್ವಜನಿಕ ಬಹಿಷ್ಕಾರ ಹಾಕಲು ಮತ್ತು ಕುಟುಂಬದ ಸೊತ್ತುಗಳನ್ನು ಮುಟ್ಟುಗೋಲು ಹಾಕಲು ಸಂಘಕ್ಕೆ ಅಧಿಕಾರವಿದೆ" ಎಂದು ಹೇಳಿದ.

ಈ ಚರ್ಚೆ, ವಾಗ್ವಾದಗಳ ಕೊನೆಯಲ್ಲಿ ಸಿದ್ಧಾರ್ಥ ಗೌತಮನಿಗೆ ಉಳಿದದ್ದು ಮೂರು ದಾರಿ. ಮೊದಲನೆಯದ್ದು ಯುದ್ಧದಲ್ಲಿ ಭಾಗವಹಿಸುವುದು, ಎರಡನೆಯದ್ದು ಮರಣದಂಡನೆ ಅಥವಾ ಗಡಿಪಾರಿಗೆ ಒಳಪಡುವುದು ಮತ್ತು ಕೊನೆಯದಾಗಿ ಸಾರ್ವಜನಿಕ ಬಹಿಷ್ಕಾರ ಮತ್ತು ಸೊತ್ತುಗಳ ಮುಟ್ಟುಗೋಲಿನ ಶಿಕ್ಷೆಯನ್ನು ಸ್ವೀಕರಿಸುವುದು. ಯುದ್ಧದಲ್ಲಿ ಭಾಗವಹಿಸುವುದು ಆತನ ಊಹೆಗೂ ನಿಲುಕದ ವಿಷಯವಾಗಿತ್ತು. ಅವನ ಛಲಕ್ಕಾಗಿ ಕುಟುಂಬ ತೀವ್ರ ತರಹದ ಶಿಕ್ಷೆಗೆ ಒಳಗಾಗುವುದು ಸಹ ಒಳಿತಾಗಿ ಕಾಣಿಸಲಿಲ್ಲ. ಕೊನೆಗೆ ಉಳಿದದ್ದೊಂದೇ ದಾರಿ, ಮರಣದಂಡನೆ ಅಥವಾ ಗಡಿಪಾರಿನ ಶಿಕ್ಷೆಯನ್ನು ಅಂಗೀಕರಿಸುವುದು.

"ಮರಣದಂಡನೆ ಅಥವಾ ಗಡಿಪಾರಿನ ಶಿಕ್ಷೆಗೆ ನಾನು ಸಿದ್ಧನಿದ್ದೇನೆ. ಇದು ನನ್ನ ಸ್ವಇಚ್ಛೆಯ ತೀರ್ಮಾನ. ಅಲ್ಲದೆ ಆ ಶಿಕ್ಷೆಯ ವಿರುದ್ಧ ಕೋಸಲದ ರಾಜನ ಮುಂದೆ ನಾನು ಮನವಿಯನ್ನು ಸಲ್ಲಿಸುವುದಿಲ್ಲ."

ಈಗ ಸೇನಾಪತಿ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡ. "ನೀನಾಗಿ ಶಿಕ್ಷೆಯನ್ನು ಅಂಗೀಕರಿಸಿದರೂ ಸಂಘ ಅದಾಗಿ ಆ ಶಿಕ್ಷೆಯನ್ನು ವಿಧಿಸಿದರೂ ಅದು [illegible]ಲದ ರಾಜನ ಗಮನಕ್ಕೆ ಬಂದಿರುವುದಿಲ್ಲ. ಈ [illegible]ಘದ ನಡವಳಿಕೆಗಳೇ ಮೂಲ ಕಾರಣವಾದುದ[illegible] ಆತ ಸಂಘದ ವಿರುದ್ಧ ಕ್ರಮ ಕೈಗೊಳ್ಳುವುದು [illegible]."

ಆ ಸಮಸ್ಯೆಗೆ ಸಿದ್ಧಾರ್ಥ ಗೌತಮ ತಾ[illegible]ಯೇ ಪರಿಹಾರವನ್ನು ಸೂಚಿಸಿದ: "ಹಾಗಿದ್ದಲ್ಲಿ ನಾನು ಸನ್ಯಾಸವನ್ನು ಸ್ವೀಕರಿಸಿ ಕಪಿಲವಸ್ತುವಿನ ಗಡಿಯಿಂದಾಚೆಗೆ ನಾನಾಗಿಯೇ ಹೋಗುತ್ತೇನೆ. ಇದರಿಂದ ಸಂಘ ಯಾವುದೇ ಮುಜುಗರಕ್ಕೆ ಈಡಾಗಬೇಕಿಲ್ಲ, ಕೋಸಲ ರಾಜನ ಕೆಂಗಣ್ಣಿಗೆ ಈಡಾಗಬೇಕಿಲ್ಲ." ಹೀಗೆ ಸಿದ್ಧಾರ್ಥ ಗೌತಮ ಪರಿವ್ರಾಜಕನಾಗುವ

▶▶▶

ರ್ಶನವನ್ನು ತೆಗೆದುಕೊಂಡ. ಆತನ ನಿಲುವಿಗೆ ಮತ್ತೊಂದು ಮುಖ್ಯ ಣವಿತ್ತು. ಸನ್ಯಾಸಿಯಾಗಿ ಆತ ದೇಶದಿಂದ ಹೊರನಡೆದ ಕೂಡಲೇ ಯಾಮದ ವಿರುದ್ಧ ಶಾಕ್ಯರು ಯುದ್ಧ ನಡೆಸಿದರೆ ಅದಕ್ಕೂ ಸಿದ್ಧಾರ್ಥ ತಮ ಪರಿವ್ರಾಜಕನಾದುದಕ್ಕೂ ಕೋಸಲದ ರಾಜ ಸಂಬಂಧ ಕಲ್ಪಿಸುವ ವ್ಯತೆ ಅಗಾಧವಾಗಿತ್ತು. ಅಂತೆಯೇ ಯುದ್ಧ ಘೋಷಣೆಯನ್ನು ವೆಗೆದುಕೊಳ್ಳುವ ಅನಿವಾರ್ಯತೆ ಸೇನಾಪತಿಯ ಮೇಲೆ ಬಿತ್ತು. ಅದರಂತೆ ಲಿಯರ ಮೇಲಿನ ಉದ್ದೇಶಿತ ಯುದ್ಧ ನಿಲುಗಡೆಗೊಂಡಿತು.

* * * * * *

ಸಿದ್ಧಾರ್ಥ ಗೌತಮ ಪರಿವ್ರಾಜಕನಾಗುವ ನಿರ್ಧಾರಕ್ಕೆ ಬಂದ ವಿಷಯ ಾಗಲೇ ಶುದ್ಧೋದನನ ಅರಮನೆಯನ್ನು ತಲುಪಿತ್ತು. ಬೆಳಗ್ಗೆ ಸಂಘದ ಗೆ ಹೋದ ಸಿದ್ಧಾರ್ಥ ಗೌತಮ ಸಂಜೆ ಮನೆಗೆ ಹಿಂದಿರುವ ಹೊತ್ತಿಗೆ ಸಂಘ ಪರಿತ್ಯಕ್ತ ಸನ್ಯಾಸಿಯೇ ಆಗಿದ್ದ. ಕುಟುಂಬದ ಒಪ್ಪಿಗೆಯ ಒಂದು ಚಾರಿಕ ವಿಧಾನ ಮಾತ್ರ ಬಾಕಿಯಿತ್ತು.

ಕ್ರಿಸ್ತಪೂರ್ವ 563ರಲ್ಲಿ ವೈಶಾಖ ಪೂರ್ಣಿಮೆಯ ದಿನ ಲುಂಬಿನಿವನದಲ್ಲಿ ರ್ಥ ಗೌತಮ ಜನಿಸಿದ. ಅದಾಗಿ ಏಳು ದಿನಗಳಲ್ಲಿ ಆತನ ಹೆತ್ತವ ಹಾಮಾಯಾ ತೀರಿಕೊಂಡಳು. ಶುದ್ಧೋದನನ ಇನ್ನೊಬ್ಬ ಪತ್ನಿ ಹಾಮಾಯೆಯ ತಂಗಿ ಪ್ರಜಾಪತಿ ಗೌತಮಿಯ ವಾತ್ಸಲ್ಯದ ಆಶ್ರಯದಲ್ಲಿ ಬೆಳೆದ. ವೈಯಕ್ತಿಕ ಘನತೆಯೇ ಜನ್ಮವೆತ್ತಿದಂತಿದ್ದ ಸ್ಫುರದ್ರೂಪಿ ಸಿದ್ಧಾರ್ಥ ತಮ ಅಪಾರವಾದ ಪ್ರಾಣಿದಯೆಯನ್ನು ಹೊಂದಿದ್ದ. ವೈಶ್ಯ ಕುಲದ ಡಪಾಣಿ ಎಂಬಾತನ ಮಗಳು ಅಪ್ರತಿಮ ಸುಂದರಿ ಯಶೋಧರಾ ಆತ ನಾರನೆಯ ವಯಸ್ಸಿನಲ್ಲಿದ್ದಾಗ ಸ್ವಯಂವರದಲ್ಲಿ ವರಿಸಿದಳು. ಸಂತರು ತ್ತು ಸನ್ಯಾಸಿಗಳ ಸಂಘದಲ್ಲಿ ಹಿತವನ್ನು ಕಾಣುತ್ತಿದ್ದ ಸಿದ್ಧಾರ್ಥ ಗೌತಮನನ್ನು ರಿಸಬೇಡವೆಂದು ದಂಡಪಾಣಿ ಬೇಡಿಕೊಂಡರೂ ಆಕೆ ಆತನನ್ನೇ ಇಷ್ಟಪಟ್ಟು ಸಿದಳು. ಅವರಿಬ್ಬರ ದಾಂಪತ್ಯದಿಂದ ಕೊಂಚ ತಡವಾಗಿ ಮಗ ರಾಹುಲ ಸಿದ.




ಪರಿವ್ರಾಜಕನಾಗಲು ಅನುಮತಿ ಕೋರಿ ಅರಮನೆಗೆ ಬಂದ ಸಿದ್ಧಾರ್ಥ ತಮನನ್ನು ಆತನ ನಿರ್ಧಾರವನ್ನು ಹಿಂದೆಗೆದುಕೊಳ್ಳಲು ತಂದೆ ಶುದ್ಧೋದನ ಪರಿಯಾಗಿ ಕೇಳಿದ. ಅತೀವವಾಗಿ ನೊಂದುಕೊಂಡಿದ್ದ ಶುದ್ಧೋದನ ತನ್ನ ಆಸ್ತಿ ಐಶ್ವರ್ಯಗಳನ್ನು ಸಂಘಕ್ಕೆ ನೀಡಲು ಸಿದ್ಧನಾದ. ಆದರೆ ಸಿದ್ಧಾರ್ಥ ತಮ ಅದಕ್ಕೆ ಒಪ್ಪಲಿಲ್ಲ. ತಾಯಿ ಪ್ರಜಾಪತಿ ಗೌತಮಿಯ ಸಂಕಟವನ್ನಂತೂ ರಿಸಲು ಸಾಧ್ಯವಿರಲಿಲ್ಲ. ಅವಳ ಆಕ್ರಂದನ ಮುಗಿಲು ಮುಟ್ಟಿತ್ತು. ಹೃದಯ ದ್ರಾವಕ ಸ್ಥಿತಿ ಅವಳದ್ದಾಗಿತ್ತು. ಶೋಕಾತಿರೇಕದಲ್ಲಿ ಘಳಿಗೆ ಘಳಿಗೆಗೂ ಆಕೆ ಕಳೆದುಕೊಳ್ಳುತ್ತಿದ್ದಳು. ಸಿದ್ಧಾರ್ಥ ಗೌತಮನ ಓರಗೆಯವನಾದ ತನ್ನ ಹಿರಿ ಗ ನಂದ ಮತ್ತು ತನ್ನ ಒಡಲಲ್ಲಿ ಹುಟ್ಟಿದ ಮತ್ತೆಲ್ಲ ಮಕ್ಕಳಿಗಿಂತಲೂ ಷ್ಟು ಅಕ್ಕರೆಯಿಂದ ಆಕೆ ಸಿದ್ಧಾರ್ಥ ಗೌತಮನನ್ನು ಸಾಕಿ ಸಲುಹಿ ಬೆಳೆಸಿದ್ದಳು, ತಿಯ ಮಳೆಗರೆದಿದ್ದಳು. ಆತನಿಗೂ ಅಷ್ಟೆ, ತಾಯಿ ಪ್ರಜಾಪತಿ ಗೌತಮಿಯ ಲಿನ ಮಮತೆ ಆಸರೆಯಾದುದಾಗಿತ್ತು. ಅಂತಹ ಮಗ ಈಗ ತನ್ನನ್ನು ತವಾಗಿ ಅಗಲಿ ಹೋಗಲು ಬಂದು ನಿಂತಿದ್ದಾನೆ! ಅದೂ ಒಬ್ಬ ವ್ರಾಜಕನಾಗಿ!

ಆದರೆ ಇವರೆಲ್ಲರಿಗಿಂತ ಯಶೋಧರೆಯ ನಿಲುವು ವಿಭಿನ್ನವಾಗಿತ್ತು. ಆಕೆ ರ್ಥ ಗೌತಮನನ್ನು ಇನ್ನಿಲ್ಲದಂತೆ ಇಚ್ಚಿಸಿ ಮದುವೆಯಾಗಿದ್ದಳು. ಅವನ ಧೀರ ವ್ಯಕ್ತಿತ್ವವನ್ನು, ವೈಚಾರಿಕ ನಿಲುವುಗಳನ್ನು ಆಕೆ ಮೋಹಿಸಿದ್ದಳು. ಆ ತ್ತು ರಾಹುಲ ಬೇರೆ ಎಳೆಯ ಮಗು. ಇಂತಹ ಯಶೋಧರೆ ತೆಗೆದುಕೊಂಡ ವನ್ನು ಇತಿಹಾಸ ಎಂದೆಂದೂ ಗೌರವಿಸುತ್ತದೆ. ಸಿದ್ಧಾರ್ಥ ಗೌತಮನ ರಗಳನ್ನು ಮೆಚ್ಚುತ್ತಿದ್ದ, ಮನಸಾರೆ ಒಪ್ಪುತ್ತಿದ್ದ ಯಶೋಧರಾ ಆತ ಸನ್ಯಾಸ ರಿಸುತ್ತೇನೆಂದಾಗಲೂ ಅದಕ್ಕೆ ಸಮ್ಮತಿ ಸೂಚಿಸಿದಳು. ಅವನ ಮುಂದೆ ಬಿ ಕೋಡಿಕೊಂಡು ಮನಸ್ಸಿಗೆ ನೋವುಂಟುಮಾಡದಿರಬೇಕೆಂದು ಮನಸ್ಸನ್ನು ಮಾಡಿಕೊಂಡಳು. ಆಕೆಯ ಅಸಮ್ಮತಿಯೊಂದರಿಂದಲೇ ಹೆಂಗರುಳಿನ ರ್ಥ ಗೌತಮನ ನಿರ್ಧಾರದಲ್ಲಿ ಬದಲಾವಣೆ ಸಾಧ್ಯವಿತ್ತೇನೋ! ಆದರೆ ಮನೆಯೊಂದರ ಬೆಳಕನ್ನು ಜಗದ ಬೆಳಕಾಗಿಸಿದ ಅಪರಿಮಿತ ತ್ಯಾಗ ಶೋಧರೆಯದ್ದು. ಕನಿಷ್ಠ ಕಪಿಲವಸ್ತುವಿನ ಶಾಕ್ಯರ ಮತ್ತು ರಾಮಗ್ರಾಮದ ಲಿಯರ ಸಂಕಷ್ಟಗಳನ್ನು ನಿವಾರಿಸುವಲ್ಲಿ ಆಕೆಯ ಕೊಡುಗೆ ಸಿದ್ಧಾರ್ಥ ತಮನ ಕೊಡುಗೆಗೆ ಸಮನಾದುದು.

ವೈಶಾಖ ಪೂರ್ಣಿಮೆಯ ದಿನ ಹೀಗೆ ಬುದ್ಧನ ನೆನಹು. ಹುಣ್ಣಿಮೆಯ ಳು ಜಗಕೆ ತಂಪನ್ನೆರೆಯುವ ಬುದ್ಧನಾದ ನೆನಹು. ದೇವರ ಹೆಸರೆತ್ತದೆಯೇ ರವನ್ನು ಸಂಸ್ಥಾಪಿಸಿದ ಧೀಮಂತ ಬುದ್ಧನ ನೆನಹು. ಹೆಂಗರುಳಿನ ಬುದ್ಧನ ನಿ. ಅಂತೆಯೇ ಜಗತ್ತು ಎಂದೂ ನೆನಪಿಡಬೇಕಾದ ಪ್ರಜಾಪತಿ ಗೌತಮಿಯ, ಶೋಧರೆಯ ನೆನಹು ಈ ಹೊತ್ತಿನಲ್ಲಿ. ■

ನಿರಾಶೆ ಮೂಡಿಸುವ ಆತ್ಮ ಕಥನಗಳು



ನಮ್ಮ ಬದುಕಿನ ಪುಟಗಳು

(ಲೇಖಕಿಯರ ಆತ್ಮಕಥನಗಳು)

ಪ್ರಧಾನ ಸಂಪಾದಕರು: ಡಾ.ಕೆ.ಆರ್.ಸಂಧ್ಯಾರೆಡ್ಡಿ

ಸಂಪಾದಕರು: ವನಮಾಲಾ ಸಂಪನ್ನಕುಮಾರ್, ಗುಣಸಾಗರಿ ನಾಗರಾಜ್ ಮತ್ತು ಚಂದ್ರಿಕಾ

ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು 2007

ಬೆಲೆ ರೂ.135/-

ಪುಸ್ತಕ ವಿಮರ್ಶೆ

ಕರ್ನಾಟಕ ಲೇಖಕಿಯರ ಸಂಘವು ಮೂವತ್ತು ಮಹಿಳೆಯರ ಬದುಕಿನ ಹೊತ್ತಿಗೆಯ ಕೆಲವು ಪುಟಗಳನ್ನು 'ನಮ್ಮ ಬದುಕಿನ ಪುಟಗಳು' ಕೃತಿಯಲ್ಲಿ ತೆರೆದಿಡುವ ಪ್ರಯತ್ನವನ್ನು ಮಾಡಿದೆ. ಇಂತಹ ಕೆಲಸವು ನಾಗಮಣಿ ಎಸ್.ರಾವ್ ಅವರು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಅವಧಿಯಲ್ಲಿ ಮೊಟ್ಟಮೊದಲು ಆರಂಭವಾಯಿತು. ಮೈಸೂರಿನಲ್ಲಿ ವಿಜಯಾ ದಬ್ಬೆ ಅವರ ನೇತೃತ್ವದಲ್ಲಿ ಆಯ್ದ ಕೆಲವು ಲೇಖಕಿಯರನ್ನು ಆಹ್ವಾನಿಸಿ, ಸೀಮಿತ ಶ್ರೋತೃಗಳ ಸಮ್ಮುಖದಲ್ಲಿ ಅವರ ಬದುಕು-ಸಾಹಿತ್ಯದ ಪ್ರಮುಖ ಹೆಜ್ಜೆಗುರುತುಗಳನ್ನು ದಾಖಲಿಸುವ ಕೆಲಸ 1996ರಲ್ಲಿ ಜರುಗಿತ್ತು. ಇಂಥ ಸಭೆಗಳಲ್ಲಿ ಲೇಖಕಿಯರು ತೆರೆದಿಟ್ಟ ಅನುಭವ ಲೋಕ, ಅದು ಉಂಟುಮಾಡಿದ ಸ್ಪಂದನ, ಹುಟ್ಟುಹಾಕಿದ ಪ್ರೇರಣೆ-ಪ್ರಭಾವಗಳಿಂದ ಮತ್ತೆ ಅಂತಹ ಮೂರು ಕಾರ್ಯಕ್ರಮಗಳು ಜರುಗಿದವು. ಲೇಖಲೋಕದ ಸಂಪುಟಗಳ ಹುಟ್ಟು ಹೀಗೆ ಆಯಿತು. ಈ ಕಾರ್ಯಕ್ರಮಗಳ ಮುಂದುವರಿಕೆಯಾಗಿ ಎಪ್ಪತ್ತರ ವಯಸ್ಸು, ಇಪ್ಪತ್ತರ ಮನಸ್ಸು ಎಂಬ ಕಾರ್ಯಕ್ರಮವನ್ನೂ ಸಂಘವು ನಡೆಸಿ, ಲೇಖಕಿಯರ ಬದುಕಿನ ದಾಖಲಾತಿ ಮಾಡಿದ್ದಿದೆ. ಅದರ ಇನ್ನೊಂದು ಮುಂದುವರಿದ ಹೆಜ್ಜೆಯೇ ನಮ್ಮ ಬದುಕಿನ ಪುಟಗಳು.

ಕೃತಿಯ ಹೂರಣಕ್ಕೆ ಹೋಗುವ ಮೊದಲು ಕೆಲವು ವಿಷಯಗಳತ್ತ ಗಮನ ಹರಿಸಬೇಕು. ಇಲ್ಲಿನ ಲೇಖನಗಳು ಆತ್ಮಕತೆಗಳೇ? ಆತ್ಮಕತೆಯ ತುಣುಕುಗಳೇ? ಅಥವಾ ಈ ಹೊತ್ತು ಲೇಖಕಿಗೆ ಮುಖ್ಯ ಎನಿಸಿದ ಸ್ಮೃತಿಗಳೇ? ಎಂಬ ಪ್ರಶ್ನೆ ಏಳುತ್ತದೆ. ಆತ್ಮಕತೆ ಎಂದು ಇವನ್ನು ಕರೆಯುವುದು ಕಷ್ಟ. ಕನ್ನಡದಲ್ಲಿ ಆತ್ಮಕತೆಯನ್ನು ಬರೆದ ಮಹಿಳೆಯರು ಕಡಿಮೆ. ಬರೆದವರಲ್ಲಿ ಕೆಲವರು ತಾವಾಗಿ ಇಚ್ಛಿಸಿ ಬರೆದಿದ್ದರೆ, ಇನ್ನು ಕೆಲವರು ಸಂಘಟನಾತ್ಮಕ ನೆಲೆಯ ಒತ್ತಾಸೆಯಿಂದ ದಾಖಲಿಸಿದ್ದಿದೆ. ಅನುವಾದದ ಮೂಲಕವೂ ಆತ್ಮಕತೆಗಳು ಕನ್ನಡ ಸಾಹಿತ್ಯಲೋಕಕ್ಕೆ ಪಾದಾರ್ಪಣೆ ಮಾಡಿದ್ದಿದೆ. ಅದೇ ರೀತಿಯಲ್ಲಿ ಪೂರ್ಣಪ್ರಮಾಣದ ಆತ್ಮಕತೆಗಳು ಬಂದಂತೆ, ಬದುಕಿನ ನಿರ್ದಿಷ್ಟ ಅವಧಿಯನ್ನು ಅಥವಾ ನಿರ್ದಿಷ್ಟ ಘಟನೆಯನ್ನು ಕೇಂದ್ರೀಕರಿಸಿಕೊಂಡು ಬರೆದ ಬರಹಗಳೂ ಇವೆ. ಇಂಥ ಆತ್ಮಕಥನಗಳನ್ನು ಲೇಖಕಿಯರು ಮಾತ್ರವಲ್ಲದೆ, ರಂಗಭೂಮಿ ಕಲಾವಿದರು, ಹೋರಾಟಗಾರ್ತಿಯರು, ಅಧಿಕಾರಿಗಳು, ಯಶಸ್ವೀ ಸಂಘಟಕರು ಮತ್ತು ಗೃಹಿಣಿಯರೂ ಬರೆದದ್ದಿದೆ.

ಇಲ್ಲಿ ಇವರು ಆಯ್ದುಕೊಂಡ ಮೂವತ್ತು ಮಹಿಳೆಯರ ಆಯ್ಕೆಗೆ ಯಾವುದು ಮಾನದಂಡ ಎಂಬ ಪ್ರಶ್ನೆ ಓದುಗರನ್ನು ಸಹಜವಾಗಿ ಕಾಡುತ್ತದೆ. ಈ ಪಟ್ಟಿಯನ್ನು ಗಮನಿಸಿದರೆ, ಸಾಧಕಿಯರನ್ನು ಮಾತ್ರ ಆಯ್ದುಕೊಳ್ಳಲಾಗಿದೆ ಎಂದೂ ಹೇಳಲು ಕಷ್ಟ. ಬಹುಶಃ ವಯಸ್ಸು ಮತ್ತು ಸಂಘದ ಸದಸ್ಯೆಯರು ಎಂಬುದಷ್ಟೇ ಆಯ್ಕೆಯ ಮಾನದಂಡ ಆಗಿರಬಹುದೇ ಎಂಬ ಸಂಶಯ ಕೂಡ ಮೂಡುತ್ತದೆ. ಇನ್ನು ಲೇಖಕಿಯರ ಬರವಣಿಗೆಗೆ ನಿರ್ದಿಷ್ಟ ಚೌಕಟ್ಟೂ ಇಲ್ಲ; ಎಂದರೆ ಬರಹದ ಒಟ್ಟು ಚೌಕಟ್ಟು, ಆಯಾ ಲೇಖಕಿಯರ ತೀರ್ಮಾನಕ್ಕೆ ಒಳಪಟ್ಟಂತೆ ಕಂಡುಬರುತ್ತದೆ. ನಿದರ್ಶನಕ್ಕೆ, ಕೆ.ಶಕುಂತಲಾ ಅವರ ಬರವಣಿಗೆ ಅವರು ಕೈಗೊಂಡ ಪ್ರವಾಸದ ಅನುಭವಕ್ಕೆ ಸೀಮಿತಗೊಂಡಿದ್ದರೆ, ಗೋಪಿಕಾ ವೆಂಕಟರಾಂ ಅವರು ತಮ್ಮ ಆತ್ಮಕತೆಯನ್ನು ಇನ್ನಾರದೋ ಕತೆಯೆಂಬಂತೆ ತೃತೀಯ ಪುರುಷ ನಿರೂಪಣಾ ಕ್ರಮದಲ್ಲಿ, ತನ್ನನ್ನೇ ಬೇರೊಂದು ಪಾತ್ರವಾಗಿಸಿ ಹೇಳುವ ಪ್ರಯತ್ನ ಮಾಡಿದ್ದಾರೆ. ಇಂಥದೊಂದು ಬಗೆಯ ರಕ್ಷಣಾ ಕವಚ ಅವರಿಗೆ ಅವಶ್ಯವೆನಿಸಿದೆ. ಇನ್ನು ಕೆಲವರು ತಾವು ಬಾಳಹಾದಿಯಲ್ಲಿ ಉಂಡ ಕಹಿಯನ್ನು ಹೇಳಲೂ ಆಗದೆ ಹೇಳದಿರಲೂ ಆಗದೆ ಸ್ವನಿಯಂತ್ರಣ (self censorship) ಮಾಡಿಕೊಂಡು ಅಷ್ಟಿಷ್ಟು ಉಸುರದೆಯೂ ಉಸುರಿದ್ದರೆ; ಕೆಲವರು ತಮ್ಮ ಕೌಟುಂಬಿಕ ವಿವರಗಳ ಸೊಲ್ಲನ್ನೇ ಎತ್ತಿಲ್ಲ. ಮತ್ತೆ ಕೆಲವರು ಸಾಹಿತ್ಯದಲ್ಲಿ ಏನು ಕೃಷಿ ಮಾಡಿದ್ದಾರೆ ಎಂಬುದೇ ಓದುಗರ ಅರಿವಿಗೆ ಬರುವುದಿಲ್ಲ. ಇಷ್ಟನ್ನು ಹೇಳಿದ್ದು ಲೇಖಕಿಯರ ಬರವಣಿಗೆಯ ಮಿತಿ ಎನ್ನುವುದಕ್ಕಿಂತ ಸಂಘಟಕರು ಬದುಕಿನ ಪುಟ ತೆರೆದಿಡಲು ಇಲ್ಲಿನ ಲೇಖಕಿಯರಿಗೆ ನಿರ್ದಿಷ್ಟ ಚೌಕಟ್ಟನ್ನು ಒದಗಿಸಿಲ್ಲವೇ ಎಂದು ಕೇಳಿಕೊಳ್ಳುವುದಕ್ಕಾಗಿ ಮಾತ್ರ.

ಮೂವತ್ತು ಲೇಖಕಿಯರ ಬದುಕಿನ ಪುಟಗಳತ್ತ ದೃಷ್ಟಿ ಹರಿಸಿದಾಗ ಎರಡು ಮಾದರಿಗಳು ಕಂಡುಬರುತ್ತವೆ. ಮೊದಲ ಮಾದರಿಯಲ್ಲಿ ಕಂಡುಬರುವ ಅಪರೂಪದ ಹೆಣ್ಣುಮಗುವಾಗಿ ಅಥವಾ ಬಹು ಪಡೆದ ಹೆಣ್ಣಾಗಿ ಹುಟ್ಟಿ, ಕುಟುಂಬದ ಕಣ್ಮಣಿಯಾಗಿ, ಸುಖದ ಬಾಲ್ಯವನ್ನು ಕಂಡು, ಪ್ರೀತಿಯ ಆದರಣದಲ್ಲಿ ಬೆಳೆದು ಶಿಕ್ಷಣಕ್ಕೆ ತೆರೆದುಕೊಂಡು ಅನಂತರ ದಾಂಪತ್ಯಕ್ಕೆ ಕಾಲಿಟ್ಟವರು ಕಂಡುಬರುತ್ತಾರೆ. ಎರಡನೆಯ ಮಾದರಿಯಲ್ಲಿ ಎಳವೆಯನ್ನು ಕಡು ಬಡತನದಲ್ಲಿ, ಹಿರಿಯ ಮಗಳಾಗಿ, ಅಸಹನೀಯ ಬಂಧುತ್ವ ಮತ್ತು ಪರಿಸರದಲ್ಲಿ ಕಳೆದು, ಹೆಚ್ಚಿನ ಶಿಕ್ಷಣ ಪಡೆಯುವ ಅವಕಾಶದಿಂದ ವಂಚಿತರಾದವರು ಕಂಡುಬರುತ್ತಾರೆ. ಇಬ್ಬರ ದನಿಗಳಲ್ಲೂ ಸಾಕಷ್ಟು ಅಂತರಗಳು ಗೋಚರಿಸುತ್ತವೆ. "... ತಂಗಿಯರೊಂದಿಗೆ ಬೆಳೆದು ಸುಸಂಸ್ಕೃತ ವಂಶದಲ್ಲಿ ಬೆಳೆದುದರಿಂದ ಸಾಹಿತ್ಯ ಸಂಗೀತ, ಕರಕುಶಲ ಕಲೆಗಳಲ್ಲಿ ಆಸಕ್ತಿ ಬಾಲ್ಯದಿಂದಲೇ ಬೆಳೆದುಬಂದಿತು" ಎಂಬ ಓರ್ವ ಲೇಖಕಿಯ ಮಾತನ್ನು ಗಮನಿಸಿ. ತನ್ನದು 'ಸುಸಂಸ್ಕೃತ ವಂಶ' ಎಂಬುದಕ್ಕೆ ಅವರ ಅರ್ಥ ಏನೇ ಇರಬಹುದಾದರೂ ಸಾಮಾಜಿಕವಾಗಿ ಅದು ಧ್ವನಿಸಬಹುದಾದ ಅರ್ಥದತ್ತ ಲೇಖಕಿಗೆ ಗಮನವಿಲ್ಲ. ಹಾಗೆಯೇ ಸುಸಂಸ್ಕೃತ ವಂಶದವರಿಗೆ ಮಾತ್ರ ಸಾಹಿತ್ಯ, ಕಲೆ, ಸಂಗೀತಗಳಲ್ಲಿ ಆಸಕ್ತಿಯೋ ಸಾಧನೆಯೋ ಸಾಧ್ಯ ಎಂಬ ಧ್ವನಿಯೂ ಅವರ ಮಾತಿನಲ್ಲಿ ಹುಟ್ಟುವುದರ ಬಗೆಗೂ ಸಂಕೋಚ ಇದ್ದಂತಿಲ್ಲ. ಹೀಗೆ ಸುಖದ ಗಾಹೆಯಲ್ಲಿ ಬೀಗುವವರ ದನಿ ಒಂದೆಡೆ ಇದ್ದರೆ, ಎಳವೆಯಲ್ಲಿ ಉನ್ನತ ಶಿಕ್ಷಣ ಪಡೆವ ಅವಕಾಶದಿಂದ ವಂಚಿತರಾದವರು ವಿವಾಹ, ಸಂಸಾರದ ಹೊಣೆಗಾರಿಕೆ, ತಾಯ್ತನದ ಕರ್ತವ್ಯ ಗಳನ್ನೆಲ್ಲ ನಿರ್ವಹಿಸಿ, ಅನಂತರ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದ ಕಥನ ಇನ್ನೊಂದೆಡೆ ಇದೆ. ಇಂಥವರು ತಮ್ಮ ಮಕ್ಕಳೊಂದಿಗೆ ತಾವೂ ಕಲಿತು ಪದವಿ, ಸ್ನಾತಕ ಪದವಿ, ಪಿಎಚ್.ಡಿ ಮುಂತಾದುವನ್ನು ಪಡೆದುದನ್ನು ಗಮನಿಸುವಾಗ ಮನಸ್ಸು ತುಂಬಿಬರುತ್ತದೆ. ತಾನು ಕಲಿತ ಸಂಗೀತ, ಬರೆದ ಕವನ, ಕಾದಂಬರಿಗಳನ್ನು, ರಚಿಸಿದ್ದ ಚಿತ್ರಕಲೆಯನ್ನೂ ಕ್ಷಮಾ ಅವರು ಗಂಡನಿಗೆ ತೋರಿಸಿದಾಗ, "... ನೀನು ಇವನ್ನೆಲ್ಲ ಜೀವನ ಎಂದು ನಂಬಬೇಡ. ಇವೆಲ್ಲ ಏನಿದ್ದರೂ ಮನರಂಜನೆಗೆ ಮಾತ್ರ, ಸಂಪಾದಿಸುವುದಕ್ಕಲ್ಲ. ಇವನ್ನೆಲ್ಲಾ ಮುಂದಿಟ್ಟುಕೊಂಡು ಜೀವನ ನಡೆಸಲು ನೀನೇನು ಕುವೆಂಪು, ದ.ರಾ.ಬೇಂದ್ರೆಯಂಥಲ್ಲ..." ಎಂಬ ಪ್ರತಿಕ್ರಿಯೆ ಎದುರಾಯಿತಂತೆ. ಅಂದೇ ಅವರು ತಮ್ಮೆಲ್ಲ ಆಸಕ್ತಿ, ಹವ್ಯಾಸ, ಬಯಕೆಗಳಿಗೆ ತಿಲಾಂಜಲಿಯಿತ್ತು ಗೃಹಿಣಿಯ ಆದರ್ಶಗಳನ್ನು ಆರೋಪಿಸಿಕೊಂಡು ಬದುಕಬೇಕಾಯಿತು. ಇಂತಹ ಹತ್ತು ಹಲವು ಮನಕಲಕುವ ಪಿತೃಪ್ರಧಾನ ಚಿಂತನಾಧಾರೆಯು ಮಹಿಳೆಯರ ಅಸ್ಮಿತೆ ಮತ್ತು ಆಸಕ್ತಿಗಳಿಗೆ ತೊಡರುಗಾಲಾಗಿ, ಉರುಳಾಗಿ ಪರಿಣಮಿಸುವ ನಿದರ್ಶನಗಳು ಕೃತಿಯೊಳಗೆ ಕಂಡುಬರುತ್ತವೆ. ಲೇಖಕಿಯರ ಸಾಧನೆಯನ್ನು ಪ್ರಧಾನವಾಹಿನಿಯ ಜೊತೆ ತುಲನಾತ್ಮಕವಾಗಿ ನೋಡುವ ಸಂದರ್ಭದಲ್ಲಿ ಮಹಿಳೆಯರ ಇಂತಹ ಹಿನ್ನೆಲೆಗಳ ಅರಿವು ಅಗತ್ಯ ಎಂಬುದಕ್ಕೆ ಮಹಿಳಾ ಕಥನಗಳು ಸಾಕ್ಷಿಯಾಗಿವೆ.

ಪತ್ರಿಕಾರಂಗ, ಆಕಾಶವಾಣಿಯ ಸೇವೆಗಳಿಗೆ ತೆರೆದುಕೊಂಡ ನಾಗಮಣಿ ಎಸ್.ರಾವ್, ಜ್ಯೋತ್ಸ್ನಾ ಕಾಮತ್, ಇಂದು ರಮೇಶ್ ಮತ್ತು ಕಮಲಾ ಬಾಲು ಅವರ ಅನುಭವಗಳು ವಿಶಿಷ್ಟವಾಗಿದ್ದು ಗಮನ ಸೆಳೆಯುತ್ತವೆ. ಅವರು ಸಾಧಿಸಿದ ಪ್ರಥಮಗಳು, ಅವರ ಸಾಧನೆಯ ಪ್ರಯತ್ನಗಳು ಇಂದಿನವರಲ್ಲಿ ಛಲ ಹುಟ್ಟಿಸಬಲ್ಲವು; ಸ್ಫೂರ್ತಿಗೆ ಮಾದರಿ ಯಾಗಬಲ್ಲವು. ಗುಡಿಬಂಡೆ ಪೂರ್ಣಿಮಾ ಅವರ ಬರವಣಿಗೆಯಲ್ಲಿ ಅವರು ಹಿರಿಯ ಸಾಹಿತಿಗಳೊಂದಿಗೆ ಹೊಂದಿದ್ದ ನಿಕಟಸಂಬಂಧ ತುಂಬಾ ಆಪ್ತವಾಗಿ, ನವಿರಾಗಿ ಮೂಡಿಬಂದಿದೆ. ಇದು ಲೇಖಕಿಯ ಮತ್ತು ಹಿರಿಯ ಬರಹಗಾರರ ಜೀವನದೃಷ್ಟಿ ಮತ್ತು ಸಜ್ಜನಿಕೆಗಳನ್ನು ತೆರೆದಿಡುವಲ್ಲಿ ಯಶಸ್ವಿಯಾಗಿದೆ.


ಆತ್ಮಕತೆಗಳನ್ನು ಓದುವುದು ಯಾಕೆ? ಎಂಬ ಪ್ರಶ್ನೆಯನ್ನು ಇಲ್ಲಿ ಕೇಳಿಕೊಳ್ಳುವುದು ಉಚಿತವೆನಿಸುತ್ತದೆ. ಒಂದು ಆತ್ಮಕಥನದ ಓದು ಎಂದರೆ ಅದು ಓರ್ವ ವ್ಯಕ್ತಿ ಮತ್ತು ಅವರ ಬದುಕಿನೊಂದಿಗೆ ಓದುಗರು ನಡೆಸುವ ಅನುಸಂಧಾನವಾಗಿದೆ. ಇತರರ ಹೋರಾಟದ ಬದುಕನ್ನು ಅರಿತಾಗ, ನಮಗೆ ನಾವು ವರ್ತಮಾನದಲ್ಲಿ ಎದುರಿಸುವ ಕಷ್ಟಗಳು ತುಸುವಷ್ಟು ಹಗುರ ವಾಗಿಬಿಡಬಹುದು; ನಮ್ಮ ಇಕ್ಕಟ್ಟುಗಳಿಂದ ಬಿಡುಗಡೆ ತೋರಲು ಬೆಳಕಿಂಡಿಗಳು ತೆರೆಯಬಹುದು; ಕೆಲವು ಸಮಸ್ಯೆಗಳ ಸರ್ವಸಾಮಾನ್ಯತೆ, ಸಾರ್ವಕಾಲಿಕತೆ ಮತ್ತು ಆಳ-ವಿಸ್ತಾರಗಳ ಅರಿವು ಆಗಬಹುದು; ಒಟ್ಟಿನಲ್ಲಿ ಲೋಕಾನುಭವ ಮತ್ತು ಲೋಕದೃಷ್ಟಿಯನ್ನು ವಿಸ್ತರಿಸುವ ಕೆಲಸದಲ್ಲಿ ಆತ್ಮಕತೆಗಳ ಓದು ಪೂರಕವಾಗಿ ದುಡಿಯುತ್ತದೆ. ನಮ್ಮ ಬದುಕಿನ ಪುಟಗಳು ಕೃತಿಯನ್ನು ಈ ಹಿನ್ನೆಲೆಯಲ್ಲಿ ನೋಡಿದಾಗ ಒಂದಷ್ಟು ನಿರಾಶೆ ಓದುಗರಿಗೆ ಖಂಡಿತಾ ಆಗುತ್ತದೆ.

● ಡಾ.ಸಬಿತಾ ಭೂಮೀಗೌಡ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಕಡಿದಾಳು ಶಾಮಣ್ಣ

ಕಾಡು ತೊರೆಯ ಜಾಡು 21



ಅಕ್ಷರ ರೂಪ: **ಅಕ್ಷತಾ ಕೆ.**

ಕತ್ತೆಗೆ ಪೆನ್ಷನ್ ಕೊಡಿಸಿದ್ದು ಮತ್ತು ರುದ್ರಪ್ಪನವರು ಜಿನ್ ಕುಡಿದಿದ್ದು

ನಾವು ಯಾವುದೇ ಜನಪರವಾದ ಚಳವಳಿ, ಹೋರಾಟದಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡಾಗ ನಮಗೆ ನಮ್ಮ ಸುತ್ತಮುತ್ತಲು ನಡೆಯುತ್ತಿರುವ ಅನ್ಯಾಯ, ಅಕ್ರಮಗಳು ಮೊದಲಿಗೆ ಕಣ್ಣಿಗೆ ಬೀಳಕ್ಕೆ ಪ್ರಾರಂಭವಾಗುತ್ತೆ. ನಾವೇನೆ ಮಾಡಿದ್ರು ಅವನ್ನು ನೋಡಿಕೊಂಡು ಸುಮ್ಮನಿರಕ್ಕಾಗಲ್ಲ. ಹೇಗಾದ್ರೂ ಮಾಡಿ ಅಂಥದು ನಡೀತಿದ್ದರೆ ಅದನ್ನ ತಡಿಬೇಕು ಅನ್ನಿಸತ್ತೆ. ಒಂದು ಕತ್ತೆಯ ವಿಷಯದಲ್ಲೂ ಹಾಗೆ ಆಯಿತು.

ಹೊಳೆಹೊನ್ನೂರಿನ ಸೇತುವೆ ಮೇಲೆ ಮೋಟಾರ್ ಸೈಕಲ್‌ನಲ್ಲಿ ಓಡಾಡ್ತಾ ಇದ್ದಾಗ ನದಿಯ ಮರಳನ್ನ ಚೀಲಗಳಲ್ಲಿ ತುಂಬಿ ಅದನ್ನ ಕತ್ತೆಗಳ ಬೆನ್ನ ಮೇಲೆ ಹೊರೆಸ್ಕೊಂಡು ಬಂದು ಸೇತುವೆ ಬದಿಯಲ್ಲಿ ಮರಳು ಸಂಗ್ರಹಿಸಿ ಮಾರಾಟ ಮಾಡೋ ದೃಶ್ಯ ಕಣ್ಣಿಗೆ ಬೀಳ್ತಿತ್ತು. ಸೇತುವೆ ಮೇಲಿಂದ ಕೆಳಗೆ ನದಿ ದಡಕ್ಕೆ ಹೋಗೊ ದಾರಿ ಇಳಕಲಾಗಿ ಕಡಿದಾಗಿದ್ದು ಆ ಕತ್ತೆಗಳು ಇಳಿಯಲಾರದೆ ಇಳಿದು, ಬೆನ್ನ ಮೇಲೆ ಮರಳ ಚೀಲ ಹೊತ್ತು ಏದುಸಿರು ಬಿಡುತ್ತಾ ಹತ್ತಲಾರದೆ ಹತ್ತಿ ಬರುತಿದ್ದವು. ಮರಳಿನ ಚೀಲ ಜಾರದಿರಲೆಂದು ಕತ್ತೆಗಳ ಕುತ್ತಿಗೆ ಮತ್ತು ತೊಡೆ ಭಾಗಕ್ಕೆ ಹಗ್ಗ ಕಟ್ಟಿರುತ್ತಾರೆ. ಆ ಹಗ್ಗ ಬಿಗಿದು ತೊಡೆ ಮತ್ತು ಕುತ್ತಿಗೆ ಭಾಗಗಳು ಸುಲಿದು ಕೊಯ್ದು ಹೋಗಿರುತ್ತವೆ. ಒಂದು ದಿನ ನಾನು ನೋಡಿದ ದೃಶ್ಯವಂತೂ ಅಸಹನೀಯವಾಗಿತ್ತು.

ಒಂದು ಕತ್ತೆ, ಅದಕ್ಕೆ ತುಂಬಾ ವಯಸ್ಸಾಗಿದೆ. ಅದರ ತೊಡೆ ಹಾಗೂ ಮಂಡಿ ಭಾಗದಲ್ಲಿ ಗಾಯವಾಗಿ ರಕ್ತ ಸುರೀತಾ ಇದೆ. ಕೀವಾಗಿ ಹುಳುಗಳು ಎದ್ದಿದಾವೆ. ಅಂಥ ಸ್ಥಿತಿಯಲ್ಲೂ ಅದರ ಮೇಲೆ ಕತ್ತೆಯ ಯಜಮಾನ ಮರಳಿನ ಚೀಲ ಹೊರಿಸ್ತಾ ಇದ್ದಾನೆ. ಅದು ಪಡುತ್ತಿರುವ ಹಿಂಸೆ ನೋಡಲಾರದೆ ಹೋಗಿ ಅದರ ಯಜಮಾನನಿಗೆ "ನೋಡಪ್ಪಾ, ನಾವು ರೈತರು. ನಮ್ಮ ಉಪಯೋಗಕ್ಕೆ ಅಂತ್ಲೆ ಜಾನುವಾರು ಸಾಕ್ತೀವಿ. ಆದ್ರೆ ಅವಕ್ಕೆ ವಯಸ್ಸಾದ ಮೇಲೆ ಅವು ಕೆಲಸ ಮಾಡಕ್ಕಾಗದಿಲ್ಲ, ಅಂಥಾದಾಗ ಅವನ್ನೇನು ಬೀದಿ ಪಾಲು ಮಾಡಲ್ಲ. ಬದಲಿಗೆ ಅವನ್ನ ಕಟ್ಟಿಹಾಕಿ ಕೆಲಸ ಕೊಡದೆ ಅವಕ್ಕೆ ಪೆನ್ಷನ್ ಕೊಡ್ತೀವಿ. ಹಾಗೆ ನಿನ್ನ ಈ ಕತ್ತೆಗೆ ವಯಸ್ಸಾಗಿದೆ. ಅದು ಇಷ್ಟು ದಿನ ನಿನ್ನ ಹೊಟ್ಟೆಪಾಡು ನೋಡ್ಕಂಡಿದೆ. ಇನ್ನು ನೀನು ಅದಕ್ಕೆ ಪೆನ್ಷನ್ ಕೊಟ್ಟು ಅದರ ಹೊಟ್ಟೆಪಾಡು ನೋಡ್ಕೊ. ಅದರ ಹತ್ತಿರ ಕೆಲಸ ಮಾಡಿಸಬೇಡ" ಅಂತ ಹೇಳ್ದೆ. ಅವನು ನನ್ನ ಮಾತು ಕೇಳಲಿಲ್ಲ. ಆತ ಪೆರುಮಾಳ್ ಅಂತ ತಮಿಳ್‌ರವನು, ಕನ್ನಡ ಸರಿಯಾಗಿ ಬರ್ತಾನು ಇರಲಿಲ್ಲ. ನಾನು ಹೇಳಿದ್ದು ಎಷ್ಟು ಅರ್ಥ ಆಯಿತೋ ಬಿಡ್ತೋ ಅಂತೂ ನನ್ನ ಮಾತನ್ನು ಅವನು ಕಿವಿ ಮೇಲೆ ಹಾಕ್ಕೊಂಡ ತರಾನು ಕಾಣಲಿಲ್ಲ. ಅವನಿಗೆ ಹೇಳಿ ಪ್ರಯೋಜನವೇ ಇಲ್ಲ ಅನ್ನೋದು ಅರಿವಿಗೆ ಬಂತು.

ಆವತ್ತೆ ಹೊಳೇಹೊನ್ನೂರು ಪೊಲೀಸ್ ಠಾಣೆಗೆ ಹೋದೆ. ಅಲ್ಲಿ ಆಗ ತೀರ್ಥಹಳ್ಳಿ ಕಡೆಯ ಅಧಿಕಾರಿಯೊಬ್ಬರಿದ್ದರು. ನನಗೆ ಬಹಳ ಪರಿಚಯಸ್ಥರು. ಅವರ ಹತ್ತಿರ ಈ ಸಮಸ್ಯೆ ಹೇಳಿ "ಹೇಗಾದ್ರೂ ಮಾಡಿ ಆ ಕತ್ತೆಗೆ ಪೆನ್ಷನ್ ಕೊಡಿಸೋ ವ್ಯವಸ್ಥೆ ಮಾಡ್ಬೇಕಲ್ಲ ಮಾರಾಯ್ರೆ" ಎಂದೆ. ಅವರಿದ್ದೋರು "ಇಷ್ಟು ದಿನ ಲೆವಿ ಚಳವಳಿ, ರಸ್ತೆ ತಡೆ ಅಂತೆಲ್ಲ ನಮಗೆ ತೊಂದರೆ ಕೊಟ್ರಿ. ಈಗ ನೋಡಿದ್ರೆ ಈ ರೀತಿ ಸಮಸ್ಯೆ ಹಿಡ್ಕೊಂಬಂದಿದೀರಿ. ಅಂತೂ ನಮ್ಮ ಡಿಪಾರ್ಟ್‌ಮೆಂಟಿಗೆ ಯಾವಾಗ್ಲೂ ಏನಾದ್ರೂ ಕೆಲಸ ಒದಗಿಸದೆ ಇರಕ್ಕೆ ನಿಮಗೆ ಆಗೋದೆ ಇಲ್ವೇನ್ರಿ?" ಎಂದು ಹಾಸ್ಯ ಮಾಡಿ "ಆಯ್ತು, ಕತ್ತೆಗೆಲ್ಲ ಪೆನ್ಷನ್ ಕೊಡಿಸಿದ್ದು ನಾನೆಲ್ಲೂ ಕೇಳಿಲ್ಲ, ನೋಡಿಲ್ಲ, ಆದರೆ ನೀವೀಗ ಹೇಳ್ತಿರೋದು ನನಗೂ ಸರಿ ಅನ್ನಿಸ್ತದೆ. ಯಾವುದಕ್ಕೂ ಮೊದಲು ಒಂದು ಅರ್ಜಿ ಬರೀರಿ. ನಾನು ಪೇದೆಯನ್ನು ಕಳಿಸಿ ಪೆರುಮಾಳ್‌ನ ಕರಸ್ತೀನಿ" ಅಂದ್ರು. ಪೆರುಮಾಳ್ ಸ್ಟೇಷನ್‌ಗೆ ಬಂದ. ಪೊಲೀಸರು ಏನು ಮಾಡಿಬಿಡ್ತಾರೋ ಅಂತ ಹೆದರಿ ಹೋಗಿದ್ದ.

ಆಗ ಅಧಿಕಾರಿ ಇದ್ದವರು "ಇವರು ನಿನ್ನ ಮೇಲೆ ಹೀಗೆ ದೂರು ಕೊಟ್ಟಿದ್ದಾರೆ. ಮುದಿಯಾಗಿರೋ ಕತ್ತೆ ಕೈಲಿ ದುಡಿಸ್ಕಂಬಾರ್‍ದು, ಅದಕ್ಕೆ ಪೆನ್ಷನ್ ಕೊಡಬೇಕು ಅಂತಿದ್ದಾರೆ. ಏನು ಹೇಳ್ತೀಯ?" ಅಂದ್ರು. "ನೀವು ಹೇಳಿದ ಹಾಗೆ ಮಾಡ್ತೀನಿ ಸ್ವಾಮಿ" ಅಂತ ಅವನು ಕೈ ಮುಗಿದು ನಿಂತ. ನಾನಿದ್ದೋನು "ಕತ್ತೆಗೆ ಪೆನ್ಷನ್ ಕೊಡಬೇಕು ಅಂದ್ರೆ ಆ ಕತ್ತೆಯನ್ನು ತಂದು ಪೊಲೀಸ್ ಸ್ಟೇಷನ್ ಪಕ್ಕದ ಜಾಗದಲ್ಲಿ ಕಟ್ಟಬೇಕು. ಮತ್ತೆ ದಿನಕ್ಕೆ ಒಂದು ಹೊರೆ ಹುಲ್ಲು, ನೀರು ಕೊಡಬೇಕು. ದಿನಾ ಬಂದು ಸ್ವಚ್ಛ ಮಾಡಿ ಹೋಗಬೇಕು" ಎಂದು ಹೇಳಿದೆ. ಅವನು ಒಪ್ಪಿಕೊಂಡ. ಆವತ್ತಿನಿಂದ ಕತ್ತೆಗೆ ಪೆನ್ಷನ್ ಸಿಗಲು ಪ್ರಾರಂಭವಾಯಿತು. ಈ ಬಗ್ಗೆ ಲಂಕೇಶ್ ಪತ್ರಿಕೆಗೆ ಒಂದು ಸಚಿತ್ರ ಲೇಖನ ಬರೆದೆ. ಅದು ಪ್ರಕಟವಾಗಿ ವಿಷಯದ ಗಂಭೀರತೆಯನ್ನು ಹೆಚ್ಚಿಸಿತು. ಪೊಲೀಸರು ತಮ್ಮ ಕರ್ತವ್ಯವೆಂಬಂತೆ ಈ ಕತ್ತೆಯ ನಿಗಾ ತೆಗೆದುಕೊಳ್ಳಲು ಪ್ರಾರಂಭಿಸಿದರು. ಕೆಲವು ತಿಂಗಳಲ್ಲಿ ಆ ಅಧಿಕಾರಿ ಹೊಳೆಹೊನ್ನೂರು ಠಾಣೆಯಿಂದ ವರ್ಗವಾಗಿ ಹೋದರು. ಆಮೇಲೆ ಆ ಕತ್ತೆಯು ಎಲ್ಲಿ ಹೋಯಿತೋ ಗೊತ್ತಾಗಲೇ ಇಲ್ಲ, ಠಾಣೆ ಪಕ್ಕದಲ್ಲಿ ಕಟ್ಟಿದ ಜಾಗದಲ್ಲಿ ಇರಲಿಲ್ಲ.

ನಂತರ ಬೋರಗಿ ಅಂತ ಬೇರೊಬ್ಬ ಅಧಿಕಾರಿ ಹೊಳೆಹೊನ್ನೂರು ಠಾಣೆಗೆ ಬಂದರು. ಅವರ ಬಳಿ ಈ ಬಗ್ಗೆ ಪ್ರಸ್ತಾಪ ಮಾಡಿದೆ. "ನಮಗೆ ಮನುಷ್ಯರ ಸಮಸ್ಯನೇ ಬಗೆಹರಿಸಕ್ಕೆ ಪುರಸೊತ್ತಿಲ್ಲ ಮತ್ತಿಲ್ಲಿ ಕತ್ತೆಗಳ ಸಮಸ್ಯೆ ಕಟ್ಟಿಕೊಂಡು ಅಲೆಯೋಣ? ಕಾನೂನಿನಲ್ಲಿ ಇರದಿರೋದನ್ನೆಲ್ಲ ನಮ್ಮೆದುರಿಗೆ ತರಬೇಡಿ" ಎಂದು ಹೇಳಿ ಕಳಿಸಿದರು. ಇವತ್ತಿಗೂ ಹೊಳೆಹೊನ್ನೂರು ಸೇತುವೆ ಮೇಲೆ ಓಡಾಡೋರಿಗೆ ಕತ್ತೆಗಳ ಬೆನ್ನ ಮೇಲೆ ಚೀಲದಲ್ಲಿ ಮರಳು ಹೊರೆಸಿ ಸಾಗಾಟ ಮಾಡೋ ದೃಶ್ಯ ಕಣ್ಣಿಗೆ ಬೀಳುತ್ತೆ. ಆ ಗುಂಪಿನಲ್ಲಿ ಸಾಕಷ್ಟು ಮುದಿ ಕತ್ತೆಗಳು ಇರ್‍ತಾವೆ. ಅದೊಂದು ಕತ್ತೆಗೆ ಪೆನ್ಷನ್ ಕೊಡಿಸಿದ್ದಂತೆ ಮುಂದೆ ಯಾವ ಕತ್ತೆಗೂ ಕೊಡಿಸಲಿಕ್ಕೆ ಸಾಧ್ಯವಾಗಲಿಲ್ಲ.



ನಾವೆಲ್ಲ ಚಳವಳಿ, ಹೋರಾಟ ಎಂದರೆ ತುಂಬಾ ಗಂಭೀರವಾಗಿರೋದು ಅಂಥ ತಿಳಿದಿದ್ದೇವೆ. ಅದು ನಿಜ ಕೂಡಾ. ಆದರೆ ಚಳವಳಿಯು ಗಾಂಭೀರ್ಯದ ನಡುವೆಯೂ ಹಲವು ಹಾಸ್ಯಪ್ರಸಂಗಗಳು ನಡಿತಿರ್‍ತಾವೆ. ಮತ್ತೆ ಚಳವಳಿಯಲ್ಲಿ ತೊಡಗಿಸಿಕೊಂಡವರನ್ನು ತುಂಬಾ ಗಂಭೀರ ವ್ಯಕ್ತಿಗಳೆಂದು ತಿಳಿದಿರ್‍ತೀವಿ. ಚಳವಳಿಕಾರರು ಕೂಡ ಕೆಲವೊಮ್ಮೆ ಹಾಗೆ ಅನಿವಾರ್ಯವಾಗಿ ನಟಿಸಬೇಕಾಗತ್ತೆ, ಇಲ್ಲವಾದರೆ ಯಾರೂ ಅವರ ಮಾತು ಕೇಳದೆ ಚಳವಳಿಯ ಶಿಸ್ತು ಮಾಯವಾಗಿಬಿಡ್ತದೆ. ಆದರೆ ಒಳ್ಳೆಯ ಹಾಸ್ಯಪ್ರಜ್ಞೆ ಹೊಂದಿರುವ ಚಳವಳಿಕಾರರು ತುಂಬಾ ಜನ ಇದ್ದಾರೆ. ಜೊತೆಗೆ ಚಳವಳಿಕಾರರು ಸಹ ಕೆಲವೊಮ್ಮೆ ತಿಳಿನಗೆಗೆ ವಸ್ತುವಾಗಿ ಬಿಡ್ತೀವಿ. ನಮ್ಮ ರೈತ ಸಂಘದಲ್ಲಿ ಯಜಮಾನ್ರು ಎಂದೇ ಕರೆಸಿಕೊಂಡ ರುದ್ರಪ್ಪನವರು ಸಹ ಒಮ್ಮೆ ತಮ್ಮ ಮುಗ್ಧತೆಯಿಂದಾಗಿ ಇಂಥದೊಂದು ನಗುವಿನ ಪ್ರಸಂಗ ನಡೆಯಲು ಕಾರಣರಾಗಿದ್ದರು.

ಆದಾಗಿದ್ದು ಹೀಗೆ: ತುಂಗಾಭದ್ರ ಸಕ್ಕರೆ ಕಾರ್ಖಾನೆಯ ಅಧಿಕಾರಿ ಹಾಥಿ ಸಾಹೇಬ್ರು ರೈತ ಸಂಘದ ಕಮಿಟಿ ಸದಸ್ಯರಿಗೆ ಯಾವಾಗಲಾದರೂ ಅಪರೂಪದ ಸಂದರ್ಭದಲ್ಲಿ ಕರೆದು ಔತಣ ಮಾಡಿಸುವುದಿತ್ತು. ಅಂಥದೊಂದು ಔತಣಕೂಟಕ್ಕೆ, ನಾನು, ನಾಗರಾಜ್, ಸುಂದರೇಶ್, ಸೂಗೂರಿನ ವೀರಭದ್ರಪ್ಪ ಮತ್ತಿತರರೆಲ್ಲ ಹೋಗಿದ್ವಿ. ರುದ್ರಪ್ಪನವರೂ ನಮ್ಮ ಜೊತೆಗಿದ್ದರು. ಹಾಥಿ ಇದ್ದವರು ರುದ್ರಪ್ಪನವರನ್ನು ಒಳಗೆ ತಮ್ಮ ಜೊತೆ ಊಟಕ್ಕೆ ಕೂರಿಸಿಕೊಂಡ್ರು. ನಾವೆಲ್ಲ ಹೊರಗಿನ ಕೋಣೆಯಲ್ಲಿ ಕುಳಿತು ಊಟ ಮಾಡಿದ್ವಿ. ನಮ್ಮ ಊಟ ಮುಗಿದು ಹೊರಡುವ ಹೊತ್ತಾದರೂ ರುದ್ರಪ್ಪನವರು ಹೊರಗೆ ಬರಲೇ ಇಲ್ಲ. ರೈತ ಸಂಘದ ಕಾರಿನಲ್ಲೆ ಒಟ್ಟಿಗೆ ಬಂದಿದ್ದವಾದ್ದರಿಂದ ಬಿಟ್ಟು ಹೋಗುವ ಹಾಗೂ ಇರಲಿಲ್ಲ. ಹಾಥಿ ಸಹ ಊಟ ಮುಗಿಸಿ ಹೊರಗೆ ಬಂದರೂ ರುದ್ರಪ್ಪನವರು ಬರಲಿಲ್ಲ.

ಕಾದು ಸಾಕಾಗಿ ಒಳಗೆ ಹೋಗಿ ನೋಡಿದರೆ ಯಜಮಾನ್ರು ವಾಲಿಕೊಂಡು ಕೂತಿದ್ದಾರೆ. ಮಾತಿಲ್ಲ ಕಥೆಯಿಲ್ಲ, ಕಣ್ಣು ಸಹ ಬಿಡಕ್ಕೆ ಆಗ್ತಾ ಇಲ್ಲ. ಇದೇನು ಇದ್ದಕ್ಕಿದ್ದಂತೆ ಏನಾಯ್ತು ಎಂದು ಎಲ್ಲರಿಗೂ ಗಾಬರಿ. ಅವರಿಗೆ ಬಡಿಸಿದ ಸರ್ವರ್‌ನ್ನು ಕರೆದು "ಏನು ಬಡಿಸಿದೆ? ಏನು ಊಟ ಮಾಡಿದ್ರು?" ಎಂದು ಕೇಳಿದ್ರೆ ಅವನು ಊಟವಾದ ಮೇಲೆ "ಜಿನ್ ಕೊಡ್ತಾ ಎಂದೆ. ಕೊಡು ಅಂದ್ರು. ಕೊಟ್ಟೆ. ಕುಡಿದ ನಂತರ ಹೀಗೆ ಕೂತಿದ್ದಾರೆ" ಎಂದ. ನಮಗೆ ತಲೆ ಕೆಟ್ಟಂತಾಯ್ತು. ಮಜ್ಜಿಗೆ ಬಿಟ್ಟು ಬೇರೇನನ್ನೂ ಕುಡಿಯದ, ನಮ್ಮಂತಹ ಮಾಂಸಾಹಾರಿಗಳ ಜೊತೆಗಿದ್ದೂ ಮೊಸರನ್ನ ತಿನ್ಕಂಡು ಇರುತಿದ್ದ ಯಜಮಾನ್ರು ಜಿನ್‌ನಂಥ ಮಾದಕ ಪಾನೀಯ ಕುಡಿಯಲು ಸಾಧ್ಯವೇ ಇಲ್ಲ, ಇಲ್ಲೇನೋ ಮೋಸ ನಡೆದಿದೆ ಎನ್ನಿಸಿತು. ಮತ್ತೆ ಜಾಸ್ತಿ ವಿಚಾರಣೆಗೆ ಹೋಗದೆ ರಾತ್ರಿಯಾದ್ದರಿಂದ ಅವರನ್ನು ಕಾರಿನಲ್ಲಿ ಕೂರಿಸಿಕೊಂಡು ಅವರ ಮನೆಗೆ ಕರೆದೊಯ್ದು ಬಿಟ್ಟು ಬಂದೆವು. ರುದ್ರಪ್ಪನವರ ಹೆಂಡತಿ ಆದಾಗಲೇ ತೀರಿಕೊಂಡಿದ್ದು, ಮಗ ಸೊಸೆಯ ಜೊತೆಗಿದ್ದರು. ಅವರ ಸೊಸೆ ಬಹಳ ಚೆನ್ನಾಗಿ ರುದ್ರಪ್ಪನವರ ಯೋಗಕ್ಷೇಮ ನೋಡಿಕೊಳ್ಳುತಿದ್ದರು. ಮಾವನಿಗೆ ಏನಾಯಿತು ಎಂದು ಕೇಳಿದ ಸೊಸೆಗೆ "ಏನಿಲ್ಲ ಸುಸ್ತಾಗಿದಾರೆ. ನಾಳೆ ಬೆಳಗ್ಗಿನ ಹೊತ್ತಿಗೆ ಸರಿ ಹೋಗ್ತಾರೆ. ಚೆನ್ನಾಗಿ ನಿದ್ದೆ ಮಾಡಲಿ" ಎಂದು ಹೇಳಿ ಬಂದೆವು. ಮರುದಿನ ಅವರ ಮನೆಗೆ ಹೋದಾಗ ರುದ್ರಪ್ಪನವರು ಎಂದಿನಂತೆ ಲವಲವಿಕೆಯಿಂದಿದ್ದರು. ನಮ್ಮನ್ನು ಕಂಡೊಡನೆ "ನೋಡಪ್ಪಾ, ನಿನ್ನೆ ಊಟದಲ್ಲಿ ಜಿಂಜರ್ ಕೊಡ್ತಾ ಅಂದ. ಶುಂಠಿನೀರು ಜೀರ್ಣಕ್ಕೆ ಒಳ್ಳೇದು ಅಂಥ ಇಸ್ಕಂಡು ಕುಡಿದ್ರೆ ಒಂಥರಾ ಮತ್ತು ಬಂದಂಗೆ ಆಗಿಬಿಡ್ತು" ಅಂದ್ರು. "ಯಜಮಾನ್ರೆ, ನೀವು ಕುಡಿದಿದ್ದು ಜಿಂಜರ್ ಅಲ್ಲ ಜಿನ್. ಅದು ಮತ್ತು ಬರಿಸೋವಂತದ್ದೆ. ನೀವು ಜಿನ್ ಕೊಡ್ತಾ ಎಂದು ಸರ್ವರ್ ಕೇಳಿದಾಗ ಜಿಂಜರ್ ಅಂತ ಕೇಳಿಸ್ಕೊಂಡು ಹೂಂ ಅಂದ್ರಿ, ಅವನು ತಂದುಕೊಟ್ಟ. ಇದು ನಡೆದಿದ್ದು" ಎಂದು ಹೇಳಿದಾಗ ಯಜಮಾನ್ರು "ಅಯ್ಯೋ ದೇವ್ರೆ, ಏನೇನೋ ಕುಡಿಸಿ ನನ್ನ ತೆಗೆದೆ ಬಿಡ್ತಿದ್ದನಲ್ಲ, ಇನ್ಮೇಲೆ ಹಾಥಿ ಕರೆದ್ರೆ ನಾನಂತೂ ಊಟಕ್ಕೆ ಬರೋದಿಲ್ಲ" ಎಂದು ಮುಗ್ಧ ನಗೆ ತುಳುಕಿಸುತ್ತಾ ಘೋಷಿಸಿದರು. ■



ಗಂಡ.... ಗೆಳೆಯ

ಛೇ....!
ನನಗೆ
ಗಂಡ ಬೇಕಾಗಿರಲಿಲ್ಲ
ಗೆಳೆಯ ಬೇಕಾಗಿದ್ದ
ಆದರೆ,
ಬಂದವನು ಗೆಳೆಯನಾಗಿರಲಿಲ್ಲ
ಜೊತೆಗೇ ನಿಂತು ಕಾವಲು
ಕಾಯುವವನಾದ
ಆಜ್ಞೆಗಳ ಮಾಡುವವನಾದ
ಅಪ್ಪಣೆ ಮಾಡುವವನಾದ
ಎದೆಗೊಂದು ಪದಕದ ಭಾರವಾದ
ರಕ್ಷಣೆ ಮಾಡುವ ಬೇಲಿಯಾದ
ಹೀಗೆಲ್ಲ ಗಂಡನಾದ.
'ಗಂಡ' ಗೆಳೆಯನಾಗಲಾರ
'ಗೆಳೆಯ' ಗಂಡನಾಗಬಾರದು
ಈಗ.... ನನ್ನ ಸುತ್ತಲಿನ
ಲೋಕದಲ್ಲಿ ಎಷ್ಟೊಂದು
ಗಂಡಸರು ಮಾತ್ರ.
ಈ 'ಗಂಡ'ನ್ನ ಸುಟ್ಟು
'ಗೆಳೆಯ'ನನ್ನಾಗಿ ಮಾಡಬೇಕು

●ಶೈಲಜಾ ಯೇತಡ್ಕ



ಶ್ರುತಿಗೇ ಒಂದು ನ್ಯಾಯ ರೇಣುಕಾಚಾರಿಗೇ ಒಂದು ನ್ಯಾಯವೇನ್ಲ!

ಚುನಾವಣೆಯಲ್ಲಿ ಯಾರ್‍ಯಾರು ಗೆಲ್ಲಬಹುದೆಂಬ ಆಚಾರದ ಚರ್ಚೆ ನಡೆಯುತ್ತಿದ್ದಾಗ ಕಾಳಮಾವ,

"ನೋಡ್ಲಾ, ಇಪ್ಪತ್ತೆಂಟು ಮಟ್ಟೆ ಮಡಗಿ ಅದರ ಮ್ಯಾಲೆ ಕೋಳಿ ಕುಂದ್ರಿಸಿದ್ವಿವಿ. ಏಟು ಮರಿಯಾಯ್ತವೊ ಏನೋ ಈಗ್ಲೇ ಯಂಗೇಳದ್ನ?" ಎಂದ.

"ಕೋಳಿಮಟ್ಟೆ ಲ್ಯಕ್ಕಚಾರನೆ ಬ್ಯಾರೆ, ಇದೇ ಬ್ಯಾರೆ ಕಣಮಾವ. ಅಂಗೆ ನೋಡಿದ್ರೆ ಇಪ್ಪತ್ತೆಂಟು ಮರಿನೂ ಆಗಿತವಪ್ಪ" ಎಂದ ಉಗ್ರಿ.

"ಅದು ನಿಜವೇ ಅನ್ನು. ಆದ್ರೆ ಪಾರಟ ಲ್ಯಕ್ಕಚಾರದಲ್ಲಿ ಯಾರಿಗೇಸು ಬಂದೋ ಅನ್ನದೆ ಲ್ಯಕ್ಕಲವೆ?"

"ಊ ಕಣಮಾವ. ಈಗ ಜೆಡಿಎಸ್ ನಾಕಳದೊ ಮೂರ್‍ತ್ವೆ, ಇನ್ನ ಇಪ್ಪತ್ತು ನಾಕು ಗ್ನಾತ ಯಸ್ತಂಗೆ. ಕಾಂಗ್ರೆಸ್ ನವರಿಗೆ ಹತ್ತಿಳದ್ರೆ, ಇನ್ನು ಹದುನೆಂಟು ಹೋದೋ ಇತ್ತೆ. ಬಜೆಪಿಗೆ ಹದುನಾಕು ಬಂದ್ರೆ, ಇನ್ನದ್ಯಾಕು ಕುಸ್ಸಗೋದೊ ಅಂತ್ಲೆಯ. ಅಂತೂ ಬಜೆಪಿ ಸೀಟು ಕಡಮೆ ಬಂದ್ರೆ ಎಡೂರನ ಚೆಡ್ಡಿ ಚಚ್ಚಗಂಡು ಪಂಚೆ ಉಡಿಸಿ ಬುಸ್ತರೆ" ಎಂದ ಉಗ್ರಿ.

"ಯಾರ ಕಳಸೋರು?" ಎಂದಳು ಜುಮ್ಮಿ.

"ಇನ್ನಾರು? ಬಜೆಪಿಗಳು. ಈಗಾಗ್ಲೆ ಲ್ಯಕ್ಕಚಾರ ಮಾಡಿತಾಯಿದ್ದತಂತೆ. ಅದ್ಕೆ ಎಡೂರನ ಮಕ ಯಣ್ಣೆ ಕುಡ್ಕದಂಗಾಗ್ಯದೆ."

"ಅವುನ್ದೇನಾರ ಆಗ್ಲಿ ಈ ಸ್ರುತಿದೇಳ್ಳೆ, ಗಂಡುಬುಟ್ಕೊಳು ಯ್ಯಾಳಿ ಆದ್ಲು ಅಂತ ಅವುಳ ಮಾತ ನೋಡಿದ್ದಿಯಾ, ಎಂಗೆ ಮಾತಾಡ್ತಳೆ?" ಎಂದಳು ಜುಮ್ಮಿ.

ಬಯಲುಸೀಮೆ ಕಟ್ಟೆಪುರಾಣ

▶▶ ಬಿ. ಚಂದ್ರೇಗೌಡ

"ನೀನು ಶ್ರುತಿ ಪರ ಮಾತಾಡಬೇಕು ಕಣೆ" ಎಂದ ಉಗ್ರಿ.

"ಅಂತ ಕ್ಯಲಸ ಮಾಡಿದೋಳ ಪರ ಮಾತಾಡಕ್ಯಾದತ್ಲ? ಅಂಗೆ ನೋಡಿದ್ರೆ, ಮಾವ, ನಮ್ಮನಿಯೋನ ಜ್ವತೆ ಇನಿರಕ್ಯಾಯಿತ್ತೆ? ಇಲವೆ ನಾನೀಗ!" ಎಂದಳು ಕಾಳಮಾವನಿಗೆ. ಇದರ ತಳಬುಡ ಅರ್ಥವಾಗದೆ,

"ಯಾರ್‍ದ್ಲೆ ಅದು ಸುತಿ ಪತಿ ಅಂತ ಏನೇನೊ ಏಳ್ತಿರಲ್ಲಾ?" ಎಂದ.

"ಏ ಶ್ರುತಿ ಅಂತ ವಬ್ಬ ಸಿನುಮಾ ನಟಿ ಇದ್ಲುಕಣ ಮಾವ. ಅವುರಪ್ಪ ಗುಬ್ಬಿ ಕಂಪ್ನಿಲಿದ್ನಂತೆ. ಅಲ್ಲಿ ಯರಡುಡುಗಿರು ಲವಕುಸುನ ಪಾರ್ಟು ಮಾಡಿತಿದ್ರಂತೆ. ಆ ಯರಡುಡಗಿರ್‍ನು ಮದಿವಾದ. ಅವುನಿಗೆ ಶ್ರುತಿ ಅಂತ ವಬ್ಬ ಮಗಳಿದ್ಲು, ಆ ಹುಡುಗಿ ಸಿನುಮ ಆಗುಟ್ರಾದ್ಲು, ಅವುಳ ಕುಣಿಸಿ, ಮ್ಯರಸಿ ಯೀರೋಯಿನ್ ಮಾಡಿದೋನು ಅವುಳನ್ನೆ ಲವ್ ಮ್ಯಾರೇಜಾದ. ಒಂದೆಣ್ಣು ಮಗನೂ ಆಯ್ತು. ಈಗ ಅವುಳು ಗಂಡನ ಬುಟ್ಟು ವಬ್ಬ ಆಚಾರಿ ಜ್ವತೆ ಓಡೋಗಿದ್ದಳಂತೆ."

"ಎಲ್ಲಿಗೇ?"

"ಇಂತ ಜಾಗ ಅಂತ ಇಲ್ಲ, ಇಡೀ ಕರ್ನಾಟಕನೆ ತಿರಿಕಂಡು ಬಂದು ಈಗ ಗಂಡನಿಗೆ ಡೈವೋರ್ಸು ನೋಟೀಸ್ ಕೊಟ್ಟಿದ್ದಳಂತೆ. ಪಾಪ ಅವುನು ಅಳ್ತಾಡೋ ಗ್ಯವುನೆ."

"ಅಗೊಳೊ ಹಿಂಗೂ ಮಾಡ್ತರೇನ್ನ?"

"ಅದ್ಯಾಕಂಗೆ ಮಾಡಿದ್ಲೂ?" ಎಂದ ಸೀರ.

"ಯಾಕೆ ಅಂದ್ರೆ ಏನೇಳನಾ?"

"ಗಂಡ ಬೇಜಾರಾದ್ನೇನೊ. ಮಿಂಡನ ಜ್ವತೆ ಹೋದ್ಲು ಬುಡತ್ತಗೆ. ಆ ಸುದ್ದಿ ಕಟಿಗಂಡೇನು?" ಎಂದ ಸೀರ.

"ನಿನ್ನ ಬುದ್ದಿ ಆ ಪೇಪರ್‍ನೋರಿಗೆ, ಟಿವಿಯೋರಿಗೆ ಇಲ್ಲವಲ್ಲ ಚಿಗಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ಟಿ.ವಿ.ಯೋರೇನು ಮಾಡಿದ್ರೂ?"

"ದಿಸೀಸ್ ಪ್ಯೂರ್‍ಲಿ ಶ್ರುತಿ ಪರಸೋನಲ್ ಮ್ಯಾಟ್ರು. ಅದನ್ನ ಅವುಳೂ ತಿಳಕೊಬೇಕಾಗಿತ್ತು, ಬೀದಿಗೆ ಬಂದು ಬಾಯಿಗೆ ಬಂದಂಗೆ ಮಾತಾಡೋದಲ್ಲ. ಗಂಡ ಹೆಡತಿ ಜಗಳ ಮಾಮೂಲು. ಉಂಡು ಮನಿಕೊಂಡ ಮ್ಯಾಲೆ ಯಲ್ಲ ಸರಿ ಹೋಯ್ತದೆ."

"ಜ್ವತೆಲಿದ್ರೆ ಸರಿಹೋಯ್ತದೆ ಕಣೊ. ಬ್ಯಾರೆ ಜಾಗದಲ್ಲಿದ್ರೆ ಯಂಗೆ ಸರಿ ಹೋಯ್ತದೆ? ಹುಸಗಾಡಿ ನಿನ್ನ ಮನಸೇ ಬ್ಯಾರೆ ಅಂತ, ಹಾಸನದೋನತ್ರ ಹಾಸಿ ಗಂಡು ಮನಿಗ್ಯವುಳಪ್ಪ. ಅಂಥೋಳಿ ಗ್ಯಾವನಾರ ಬುದ್ಧಿ ಹೇಳಕ್ಯಾದತೆ?"

"ಹಾಸನದೋನ್ಯಾವನ್ನ?"

"ಅಯ್ಯೋ, ಅಲ್ಲೊಬ್ಬ ಆಚಾರುಡಗವುನೆ. ಬಾಯಿಬುಟ್ರೆ ಸುಳ್ಳು. ಮೂರುನಾಕೆ ಸರಿಟಗಂಡವುನೆ. ಚಂದ್ರಚೂಡ, ಚಂದ್ರಾಚಾರಿ, ಚಕ್ರವರ್ತಿ ಅಂತ. ಅವುನಾಡಿದಾಟಲ್ಲ, ಮಾಡದ ಮೋಸಿಲ್ಲ, ಇಡೀ ಹಾಸನಕ್ಕೇ ನಾಮ ಬಳದು ಬೆಂಗಳೂರು ಸೇರಿಕಂಡು. ಶ್ರುತಿಯ ಬಲೆವಳಿಕೆ ಕೆಡಿಕಂಡವುನೆ. ಅವುಳ ಕತೆ ಮುಗಿತು."

"ಅಂತು ರಂಗವ್ವಾಯ್ತಳೆ ಬುಡು. ಅವ್ವ ಸಿನುಮದಲ್ಲಿ ಪಾರ್ಟು ಮಾಡಿದ್ಕು ಅದ್ಕು ಸರಿಯಾಯ್ತು" ಎಂದ ವಾಟಿಸ್ಸೆ.



"ಯಾವ ರಂಗವುನ್ನ?" ಎಂದಳು ಜುಮ್ಮಿ.

"ಲ್ಯಂಕೇಸು ಮುಸ್ಸಂಜೆ ಕಥಾಪ್ರಸಂಗ ಅಂತ ಕತೆ ಬರದಿದ್ರು ಕಣಕ್ಕ. ಆ ಕತೆಯ ಅವುರ ಮಗಳು 'ಅವ್ವ' ಅಂತ ಸಿನುಮ ತಗುದ್ಲು. ಅದರಲ್ಲಿ ರಂಗವ್ವ ಆಣೆ ಬಡ್ಡಿ ಯವಾರ ಮಾಡಿಕಂಡು, ಮಗಳ ಸಾಯ್ಕಂಡು ಊರಿಗೇ ಒಂದು ಸವಾಲಾಗಿರತಳೇ. ಅಥವಾ ಅವುಳಿಗೇ ಊರು ಸವಾಲಾಗಿರತದೆ ಅಂತ್ಲೂ ಹೇಳಬವುದು. ಈಗ ಶ್ರುತಿಗೂ ಒಬ್ಬ ಹೆಣ್ಣುಮಗಳವುಳೆ. ಆದ್ರಿಂದ ಮುಂದೆ ಸಿನಿಮಾ ರಂಗದಲ್ಲೊಬ್ಬ ರಂಗವ್ವಾಯ್ತಳೆ" ಎಂದ ವಾಟಿಸ್ಸೆ.

"ಅಂಗ್ಯಾಕಾದಳು, ಚೆನ್ನಾಗ್ಯೂ ಇರಬವುದು."

"ಚನ್ನಾಗಿರಕ್ಕೆ ಸಾಧ್ಯವೇ ಇಲ್ಲ. ಯಾಕಂದ್ರೆ ಅವುಳು ಕಟಿಗತ್ತಾಯಿರೋನು ಮದಿವಾಗಿ ಮಕ್ಕಳಿರೋನು. ಯಾವ ದುಡಿಮೆನೂ ಇಲ್ಲ, ಎಷ್ಟು ದಿನ ಅಂತ ಮೋಸ ಮಾಡಿಕಂಡು ಕಾಲಹಾಕಕ್ಯಾದತೂ? ಆದ್ರಿಂದ ಶ್ರುತಿ ರಂಗವಾಯ್ತಳೆ. ನೋ ಡವುಟ್" ಎಂದ ವಾಟಿಸ್ಸೆ.

"ಅವುಳು ಬಜೆಪಿಗೆ ಹೋಗಿದ್ದೆ ಅಲ್ಲ ಕಣೊ. ನೋಡು ಈಗಾಗ್ಲೆ ಮಹಿಳಾ ಮಕ್ಕಳ ಅಭಿವೃದ್ಧಿ ನಿಗಮಕೆ ರಾಜಿನಾಮೆ ಕೊಡಬೇಕಾಗ್ಯದಂತೆ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಶ್ರುತಿ ಪವರ್ ಕಸಗಳೊ ಹಕ್ಕು ಬಿಜೆಪಿಗಳಿಗಿಲ್ಲ. ಅಂಗೇನಾರ ಆಗದಾದ್ರೆ ಮದ್ಲು ಎಡೂರಪ್ಪ ರಾಜೀನಾಮೆ ಕೊಡಬೇಕು. ಅಮ್ಯಾಲೆ ರೇಣುಕಾಚಾರಿ ಕೊಡಬೇಕು. ಅದಾದ ಮ್ಯಾಲೆ ಉಡುಪಿ ಭಟ್ಟ ಕೊಡಬೇಕು. ಇವುರ್‍ಯಲ್ಲ ರಾಜೀನಾಮೆ ಕೊಟ್ಟ ಮ್ಯಾಲೆ ಶ್ರುತಿ ಕೊಡಬೇಕಾಯ್ತದೆ, ಅಂಡರ್‍ಸ್ಟ್ಯಾಂಡ್?"

"ಎಡೂರಪ್ಪ್ಯಾಕ್ಲ ಕೊಡಬೇಕು?" ಎಂದಳು ಜುಮ್ಮಿ.


"ನೋಡಕ್ಕ, ಎಡೂರಪ್ಪನ ಹೆಂಡತಿ ಮೈತ್ರಾದೇವಿ ಬೆಳಿಗ್ಗೆ ಗಿಡಗಳಿಗೆ ನೀರಾಕಕ್ಕೋಗಿ ನೀರಿನ ಟ್ಯಾಂಕಿಗೆ ಬಿದ್ದು ತೀರಿಕೊಂಡೋದ್ಲು. ಸ್ಪಾಟ್ ಇನ್‍ಸ್ಪೆಕ್ಷನ್ ಮಾಡಿದಾಗ ಟ್ಯಾಂಕ್ ಬಾಯಿ ಚಿಕ್ಕದಾಗಿತ್ತು, ಯಾರಾದ್ರು ಸಾಯಿಸಿ ತುರಕಬೇಕಿತ್ತು. ಆದ್ರಿಂದ ಅನುಮಾನದ ಕೇಸು ಕೋರ್ಟಲ್ಲದೆ. ಮೋಟುಮರ ಗಾಳಿಗೆ ಮಿಂಡ ಅಂತ ವಬ್ಬ ಲಾಯುರು ಕೇಸಾಯ್ಕಂಡು ಎಡೂರಪ್ಪನ ಕಾಟಲ್ಲಿ ತಿಗಣೆ ತರ ಸೇರಿಕಂಡವುನೆ. ಈ ಕಡೆ ಎಡೂರಪ್ಪ ಶೋಬಕರಂದ್ಲಾಜೆ ಜೊತೆಲಿ ಯಾರಿಗೂ ಕೇರ್ ಮಾಡಂಗವುನೆ. ಇನ್ನು ರೇಣುಕಾಚಾರಿ ಜಯಲಕ್ಷ್ಮಿ ಜೊತೆ ಡ್ಯಾನ್ಸ್ ಮಾಡಿ, ಡ್ರಿಂಕ್ಸ್ ಮಾಡಿ, ಫಿಲಂನ್ಯಲ್ಲ ತಗಸಿಕೊಂಡವುನೆ. ಅಮ್ಯಾಲೆ ಅವುಳೆ ಸರಿಲ್ಲ ಅಂತ ಬೀದಿಗೆ ನೂಕಿ ಅಂತ ಕ್ಯಲಸಗಳನೇ ಮುಂದುವರಿಸ್ಯವುನೆ. ಆನಂತರ ಉಡುಪಿ ಶಾಸಕ ಹೆಂಡತಿ ಸೂಸೈಡ್ ಮಾಡಿಕಳಂಗೆ ಮಾಡಿ ಆರಾಮಾಗಿ ಮಜ ಮಾಡಿಕಂಡವುನೆ. ಇಂತ ಮಹಾನ್ ನೀತಿವಂತ್ಯ, ಸತ್ಯವಂತ್ಯ, ಶೀಲವಂತ್ಯ ಇರೋ ಪಾರ್ಟಿಲಿ ಶ್ರುತಿ ರಾಜೀನಾಮೆ ಕೇಳೊ ಸಗತಿ ಯಾರಿಗದೆ ಅಂತ?"

"ಸದಾನಂದ ಕೇಳ್ತಾನಂತಲ್ಲೊ?"

"ಸದಾನಂದ ಚಿಕ್ಕಮಗಳೂರಲ್ಲಿ ಗೆದ್ದು ಬರ್ಲಿ, ಅಮ್ಯಾಲೆ ನಾನೇಳಿದ ಯಲ್ರಿಗೂ ಮೆಮೋ ಕೊಡ್ಲಿ. ಅದು ಬುಟ್ಟು ಊರಿಗ್ಯಲ್ಲ ನ್ಯಾಯ ಹೇಳೋನು ವಲೆಮುಂದೆ ಉಚ್ಚೆ ಹುಯ್ದಿದ್ದ ಅನ್ನಂಗೆ ಹಲ್ಲುಕಿಸಗಂಡು ಮಾತಾಡಬಾರ್ದು ಮಾತಾಡೊ ಅನಿವಾರ್ಯತೆ ಬಂದಾಗ ಬಗ್ಗಿ ನೋಡಿಕಬೇಕು."

"ಬಿಜೆಪಿಗಳ್ಯಾವತ್ತು ಬಗ್ಗಿ ನೋಡಿಕಂಡರೂ ಅವುರ್‍ಯಾವತ್ತೂ ಕಾಂಗ್ರೆಸ್‍ನೋರು ಏನು ಮಾಡ್ತರೆ ಅಂತ ನೋಡದೆ ಅಲವೆ. ಅಂಗೆ ನೋಡಕ್ಕೋಗಿ ತಮ್ಮದೇ ಹಳಿಸಿಗಂಡು ಕುಂತದೆ."

"ಎಜ್ಯಾಕ್ಟ್ಲಿ ಕರಟ್!" ■



ಲೋಕೇಶ್ ನಿಟ್ಟುಸಿರು


ಸಿನಿಮಾ ನಟ ಲೋಕೇಶ್ ಮೊನ್ನೆ ಒಂದು ಒಳ್ಳೆಯ ಚಿತ್ರ ಮಾಡಿದರು; ನಮ್ಮ ಪತ್ರಿಕೆ ಕೂಡ ಆ ಚಿತ್ರ 'ಭುಜಂಗಯ್ಯನ ದಶಾವತಾರ'ವನ್ನು ಹೊಗಳಿದ್ದು ನೆನಪಿರಬಹುದು. ಅದು ಖಾಲಿ ಚಿತ್ರಮಂದಿರಗಳಲ್ಲಿ ನಡೆಯುತ್ತಿದ್ದಾಗ ಲೋಕೇಶ್ ಅಭಿಮಾನಿಯೊಬ್ಬರು ನನ್ನನ್ನು ಸಂಪರ್ಕಿಸಿ, "ಲೋಕೇಶ್‌ಗೆ ಈ ಚಿತ್ರದ ಸೋಲಿನಿಂದ ತುಂಬ ಬೇಸರವಾಗಿದೆ. ಕೂಡಲೇ ಇದನ್ನು ಕುರಿತು ಒಂದು ವಿಚಾರ ಸಂಕಿರಣ ಏರ್ಪಡಿಸೋಣವೆ? ಇದರಿಂದಾದರೂ ಜನಕ್ಕೆ ಇದು ಎಷ್ಟು ಒಳ್ಳೆಯ ಚಿತ್ರ ಎಂದು ಗೊತ್ತಾಗಬಹುದಲ್ಲವೆ?" ಅಂದರು. ನಾನು ಯೋಚಿಸಿದೆ. ಈ ಚಿತ್ರದ ಸೋಲಿನ ಸುದ್ದಿ ಕೇಳಿ ಬೇಸರವಾಗಿತ್ತು. ಆದರೆ ವಿಚಾರ ಸಂಕಿರಣ ಅಥವಾ ಸೆಮಿನಾರ್‌ಗಳಿಂದ ಒಂದು ಚಿತ್ರ ಯಶಸ್ವಿಯಾಗುವುದಾದರೆ ಪ್ರತಿಯೊಬ್ಬ ಚಿತ್ರ ನಿರ್ಮಾಪಕನೂ ಒಂದೊಂದು ವಿಚಾರ ಸಂಕಿರಣ ಏರ್ಪಡಿಸಿ "ಸೆಮಿನಾರಿಗ"ರಾದ ಅನಂತಮೂರ್ತಿ ತರಹದವರು ಇನ್ನೂ ಮಿಂಚುತ್ತಿದ್ದರು. ಆದರಿಂದ ಏನೂ ಆಗುವುದಿಲ್ಲ, ಹೀಗಾಗಿ ಸುಮ್ಮನಾಗಬೇಕಾಯಿತು.

ಲೋಕೇಶ್ ಎಷ್ಟು ಒಳ್ಳೆಯ ನಟ ಮತ್ತು ಸೂಕ್ಷ್ಮ ಮನಸ್ಸಿನ ಮನುಷ್ಯ ಎಂಬುದು ಅವರ ಅಭಿಮಾನಿಗಳಿಗೂ ಗೊತ್ತಿರುವಂತಿಲ್ಲ. ನೋಡಲು ಅಷ್ಟು ಚೆನ್ನಾಗಿಲ್ಲದ ಲೋಕೇಶ್ ಪ್ರೀತಿ ತುಂಬಿದ, ನಂಬಿದವರನ್ನು ಕೈಬಿಡದಿರುವ, ಪ್ರತಿಭೆಯ ಗಣಿಯಂತಿರುವ ವ್ಯಕ್ತಿ. ಇವರು ಮೊನ್ನೆ ಪತ್ರಕರ್ತರೊಂದಿಗೆ ಮಾತಾಡಲೂ ನಿರಾಕರಿಸಿ ರೇಗಿದ್ದಾರೆ; ಚಿತ್ರಗಳಿಗೆ ಪ್ರಶಸ್ತಿ ಕೊಡುವ ಜನ, ಪ್ರಶಸ್ತಿ ಗಳಿಸುವ ವ್ಯಕ್ತಿಗಳು ಮತ್ತು ಚಿತ್ರಗಳನ್ನು ಬೈದು ಚಿಂದಿ ಮಾಡಿದ್ದಾರೆ. ದುಗುಡವನ್ನು ಮುಳುಗಿಸಲು ರಮ್ ಮೊರೆಹೊಗುವ ಲೋಕೇಶ್ ಅವರ ಸಿಟ್ಟು ನನಗೆ ಅರ್ಥವಾಗುತ್ತದೆ. ಅವರು ಹೇಳಿದ್ದರಲ್ಲಿ ಸತ್ಯವಿದೆ.

ಆದರೆ ನಾನು ಬಹುವಾಗಿ ಇಷ್ಟಪಡುವ ಈ ಲೋಕೇಶ್‌ಗೆ ಒಂದು ಕಿವಿಮಾತು. ಯಾರೂ ಯಾವ ಜೂಜನ್ನೂ ತನ್ನ ಜೀವನ, ಸಂಪತ್ತನ್ನೆಲ್ಲ ಪಣಕ್ಕಿಟ್ಟು ಆಡಬಾರದು. ಕಟ್ಟಿದ ಹಣ ಪೂರ್ತಿ ಹೋದರೂ ಜೂಜಿನ ಸಂತೋಷ ಕಮ್ಮಿಯಾಗಕೂಡದು; ಬಂದರೆ ಅದರಿಂದ ಜೂಜಿನ ಬಗ್ಗೆ ವ್ಯಾಮೋಹ ಬರಕೂಡದು. ಈ ಜೂಜಿನ ಬಗ್ಗೆಯೇ ಒಮ್ಮೆ ಬರೆಯುತ್ತೇನೆ.

ತನ್ನ ರಾಜ್ಯ ಮತ್ತು ಪತ್ನಿಯನ್ನೇ ಪಣಕ್ಕಿಟ್ಟ ಧರ್ಮರಾಯರು ನಾವಲ್ಲ. ನಾವು ಸಣ್ಣಪುಟ್ಟ ಜನರಾದ್ದರಿಂದ ತಪ್ಪಿಸಿಕೊಳ್ಳುವ ದಾರಿ ಇಟ್ಟುಕೊಂಡಿರಬೇಕು.

–ಆಗಸ್ಟ್ 4, 1991



ಪೋರಿ ಹಿಂದೆ ಹೋರಿ

▶▶▶ 10

ಆಂಜನೇಯ ಹುಟ್ಟಿದ ಜಾಗ ಎಂದು ಯಾವ ಜಾಗದ ಬಗ್ಗೆ ಹೇಳಲಾಗುತ್ತಿದೆಯೋ ಅದು ವಾಸ್ತವವಾಗಿ ಉದ್ದಂಡಗೌಡ ಎಂಬ ಹಾಲಕ್ಕಿ ಒಕ್ಕಲಿಗ ರೈತರಿಗೆ ಸೇರಿರುವ ಜಾಗ. ಮೊದಲಿಗೆ ಅದನ್ನು ಕಬಳಿಸಲು ಯತ್ನಿಸಿದ ಕೌಬಾಯ್ ಸ್ವಾಮಿ ಈಗ ಬೇರೊಂದು ಜಾಗ - ಅಂದರೆ ಕೇಸರಿ ತೀರ್ಥ ಎಂಬಲ್ಲಿ - ಆಂಜನೇಯನಿಗೆ ಜನ್ಮ ಕೊಡಿಸಿಬಿಟ್ಟಿದ್ದಾನೆ. ಈ ಜಾಗ ಗೋಯ್ದುಗೌಡನೆಂಬ ಕ್ರಿಮಿನಲ್ ಹಾಗೂ ಡ್ರಗ್ ಡೀಲರ್‌ಗೆ ಸೇರಿದ್ದು. ಆತ ಸ್ವಾಮಿಗೆ ಆಪ್ತನಾಗಿದ್ದು ಆ ನಾಲ್ಕು ಗುಂಟೆ ಜಾಗವನ್ನು ಸ್ವಾಮಿಗೆ ದಾನ ಮಾಡಿಬಿಟ್ಟಿದ್ದಾನೆ. ಮೊನ್ನೆ ಮಲ್ಲಿಕಾ ಶೆರಾವತ್ ಬಂದು ತನ್ನ 'ಬರೀ ಕೈಯಲ್ಲಿ' ಗುದ್ದಲಿ ಪೂಜೆ ಮಾಡಿಹೋಗಿರುವುದು ಈ ನಕಲಿ ಆಂಜನೇಯ ಜನ್ಮ ಸ್ಥಳದಲ್ಲೇ.

ಹೋರಿಗೆ ಪೋರಿ ಸಿಕ್ಕ ಬಗೆ

ಈ ರಾಗವೇಶ್ವರ ಅಮೆರಿಕದಲ್ಲಿ 'ಹಿಸ್' (Hisss) ಎಂಬ ಇಂಗ್ಲಿಷ್ ಸಿನಿಮಾ ಪ್ರಚಾರದಲ್ಲಿದ್ದ ಮಲ್ಲಿಕಾಳನ್ನು ಒಂದೇ ಒಂದು ಪೂಜೆಗಾಗಿ ರಾತ್ರೋರಾತ್ರಿ ಹೇಗೆ ಕೂಗಿ ಖಂಡಾಂತರ ಕರೆಸಿಕೊಂಡಿತ್ತೆಂಬ ರಹಸ್ಯ ಜನರಿಗೆ ಇನ್ನೂ ಅರ್ಥವಾಗುತ್ತಿಲ್ಲ. ಒಂದು ಮೂಲದ ಪ್ರಕಾರ ಈಶಣ್ಣನೆಂಬ ಮಠದ ಭಕ್ತ ಶರ್ಮ ಎಂಬ ಇನ್ನೊಬ್ಬ, ಡಾ. ಶರಣಪ್ರಸಾದ ಎಂಬ ಮಧ್ಯವರ್ತಿ, ಗೋಯೆಂಕಾನೆಂಬ ನಿಗೂಢ ಹೆಸರುಗಳು ಹೋರಿಗೂ-ಪೋರಿಗೂ ಲಿಂಕು ಕೊಡಿಸಿವೆ ಎನ್ನಲಾಗಿದೆ.

ಮಲ್ಲಿಕಾ ಮೇ 5 ರಂದು ಕ್ಯಾಲಿಫೋರ್ನಿಯಾದಿಂದ ಹೊರಟು ಬಾಂಬೆಗೆ ಬಂದು, ಅಲ್ಲಿಂದ ಪಣಜಿಗೆ ವಿಮಾನದಲ್ಲಿ ಹಾರಿ, ನಂತರ ಕಾರನ್ನೇರಿ ಗೋಕರ್ಣ ತಲುಪಿದ್ದಾಳೆ. ಅಲ್ಲಿ ಅವಳನ್ನು ಓಂ ಬೀಚ್ ಹತ್ತಿರದ ಕೈರಾಳಿ ರೆಸಾರ್ಟ್‌ನಲ್ಲಿ ಇಳಿಸಲಾಗಿತ್ತು. ಹಾಗೆ ಮಿಂಚಿನ ವೇಗದಲ್ಲಿ ಹಾರಿಬಂದ ಮಲ್ಲಿಕಾ ನೇರ ಮಠಕ್ಕೆ ಬಂದಾಗ ಥ್ರಿಲ್ ಆಗಿದ್ದ ಕೌಬಾಯ್ ಸ್ವಾಮಿ 600 ಕಮಲದ ಹೂ ತರಿಸಿ ಅವಳ ಸುತ್ತಲೂ ಇರಿಸಿ ಪೂಜೆ-ಪುರಸ್ಕಾರ ಮಾಡಿಸಿದ್ದಾನೆ. ಆಮೇಲೆ ಕೇಸರಿ ತೀರ್ಥಕ್ಕೆ ಅವಳನ್ನು ಕರೆದೊಯ್ದು ದೇವಳದ ಗುದ್ದಲಿ ಪೂಜೆ ಮಾಡಿಸಲಾಗಿದೆ. ಈ ಇಡೀ ಪ್ರಹಸನದಿಂದ ಮೀಡಿಯಾಗಳನ್ನು ದೂರ ಇಡಲಾಗಿತ್ತು. ಪುಣ್ಯಕ್ಕೆ ಈ ದೈವಕಾರ್ಯಕ್ಕೆ ಮಲ್ಲಿಕಾ ಬರೀ ಮುಖ, ಕೈ ಕಾಣುವಂತ ಬಟ್ಟೆ ಹಾಕಿಕೊಂಡು ಬಂದಿದ್ದಳು.

ಹಾಗೆ ಬಂದು ಹೀಗೆ ಹಾರಿಹೋದ ಮಲ್ಲಿಕಾ 'ನಾನು ಆಂಜನೇಯ ಭಕ್ತೆ' ಅಂದಿದ್ದಾಳೆ. ಹಾಗಂದ ಮೇಲೆ ಕೌಬಾಯ್ ಸ್ವಾಮಿ ಜೊತೆ ಒಂದೇ ರೂಂನಲ್ಲಿ ಸಪರೇಟಾಗಿ 2 ಗಂಟೆ ಮಾತನಾಡುತ್ತಾ ಕೂತಿದ್ದಳಂತೆ. ಆಗ ಡಾ. ತಾರಾಚಂದ ಎಂಬ ಅಣುವಿಜ್ಞಾನಿಯೊಬ್ಬರು ಜೊತೆಗಿದ್ದರಂತೆ. ಅಷ್ಟೇ ಅಲ್ಲ, ವಿಲಿಯಂ ಎಂಬ ಇಂಗ್ಲಿಷ್ ಚಿತ್ರ ನಿರ್ದೇಶಕ ಮತ್ತು ಡಾ. ಗ್ಯಾರಿಯೆಂಬ ಮನೋವಿಜ್ಞಾನಿಯೂ ಮಲ್ಲಿಕಾ ಜೊತೆಗಿದ್ದರಂತೆ.

ಎಲ್ಲಿಯ ರಾಗವೇಶ್ವರ ಸ್ವಾಮಿ, ಎಲ್ಲಿಯ ಸೆಕ್ಸ್‌ಬಾಂಬ್ ಮಲ್ಲಿಕಾ. ಇವರ್ಯಾರು ಅಣುವಿಜ್ಞಾನಿ, ಸಿನಿಮಾ ನಿರ್ದೇಶಕ, ಮನೋವಿಜ್ಞಾನಿ... ಅವನೆಲ್ಲಿಯ ಆಂಜನೇಯ?

ಈ ಹೋರಿ ಪೋರಿಗಳಿಬ್ಬರೂ ಮಿಲಾಕತ್ ಆಗಿ ಕರ್ನಾಟಕದಲ್ಲಿ ಒಬ್ಬ ಹೊಸ ಮರಿ ಆಂಜನೇಯನನ್ನು ಹುಟ್ಟಿಸಲು ಹೊರಟಿದ್ದಾರಲ್ಲ,

ಅಯ್ಯೋ ರಾಮ ಇದೇನಪ್ಪ ಅನಾಚಾರ ಅನ್ನದೇ ಬೇರೆ ಮಾತೇನಿದೆ ಹೇಳಲು ಅಲ್ಲವೇ?

ಇದು ಸಾಲದೆಂಬಂತೆ ರಾಗವೇಶ್ವರಗೆ ಅಮೆರಿಕಗೆ ಬರುವಂತೆ ಮಲ್ಲಿಕಾ ಆಹ್ವಾನಿಸಿದ್ದಾಳೆ. ಇನ್ನು ಅಲ್ಲಿ ಏನೇನೂ ನಡೆಯಲಿದೆಯೋ ಭಗವಂತನೇ ಬಲ್ಲ. ●

ಗೋತಳಿ ರಕ್ಷಿಸೋ ಅಂದರೆ ಆಂಜನೇಯನನ್ನು ಹುಟ್ಟಿಸಿದ

ಗಣೇಶನನ್ನು ಮಾಡಲು ಹೋಗಿ ಅವರಪ್ಪನನ್ನು ಮಾಡಿದಂತಾಗಿದೆ ಈ ಕೌಬಾಯ್ ಸ್ವಾಮಿಯ ನಡವಳಿಕೆ.

ಈತ ಗೋತಳಿ ರಕ್ಷಕನೆಂದು ಈಗ ಹೊಸನಗರದಲ್ಲಿ ವರ್ಲ್ಡ್ ಫೇಮಸ್ ಆಗಿದ್ದಾನೆ. ಇದೇ ನೆಪದಲ್ಲಿ ಕೋಟಿಗಟ್ಟಲೆ ಹಣ ಎತ್ತುತ್ತಲೂ ಇದ್ದಾನೆ. ಆದರೆ ಈಗ ನಾಟಿ ಹಸುಗಳನ್ನು ಎತ್ತಲೋ ಓಡಿಸಿ ಮಲ್ಲಿಕಾಳೆಂಬ ಸಿಂಧಿ ಹಸು ಕರೆಸಿಕೊಂಡು ಆಂಜನೇಯನಿಗ ಜನ್ಮ ಕೊಡಲು ಹೊರಟಿದ್ದಾನೆ.


ಶ್ರುತಿ ಡೈವೋರ್ಸ್ ವಿವಾದದಿಂದ ಬಿಜೆಪಿ ಘನತೆಗೆ ಪೆಟ್ಟು ಬೀಳುತ್ತಿದೆ ಎನ್ನುವ ನಾಯಕರು ಅದೇ ಬಿಜೆಪಿಯ ಈ ಧರ್ಮಗುರು ಅರೆಬೆತ್ತಲೆ ನಟಿಯ ಸ್ಕರ್ಟ್ ಹಿಡಿದು ಓಡಾಡಿದರೂ ತಪ್ಪು ಎನ್ನುತ್ತಿಲ್ಲವಲ್ಲ, ಇದಕ್ಕೇನು ಹೇಳಬೇಕು.

ಇನ್ನೂ ಹೇಳಬೇಕೆಂದರೆ ಮೊನ್ನೆಯ ಎಲೆಕ್ಷನ್‌ನಲ್ಲಿ ಬಂಗಾರಪ್ಪನವರು ರಾಗವೇಶ್ವರ ಸ್ವಾಮಿಯನ್ನು ಟೀಕಿಸಿದರೆಂದು ಮಲೆನಾಡಿನ ಹವ್ಯಕ ಬ್ರಾಹ್ಮಣರೆಲ್ಲಾ ಬೀದಿಗಿಳಿದು ಪ್ರತಿಭಟಿಸಿದ್ದರು. ಈಗ ಅದೇ ಸ್ವಾಮಿ ಗೋಕರ್ಣದ ಮಠಕ್ಕೆ ಮಲ್ಲಿಕಾಳನ್ನು ಕರೆಸಿ ಸನ್ಮಾನ ಮಾಡಿದ್ದಾನೆ. ಇದನ್ಯಾಕೆ ಪ್ರಶ್ನಿಸುತ್ತಿಲ್ಲ?

ಹಳೆ ಶ್ಯಾನುಭೋಗ ಕೋರ್ಟು ಮೆಟ್ಟಿಲತ್ತಿದನಂತಲ್ಲಾ

ಹಳ್ಳಿಗಳಲ್ಲಿ ತನ್ನ ಹಿತ್ತಿಲುಮನೆ, ಜಗಲಿಯಲ್ಲಿ ಕುಳಿತು ಜಾತಕ, ಕುಂಡಲಿ, ಸರ್ಪದೋಷ ಇತ್ಯಾದಿ ಬೊಗಳೆ ಬಿಟ್ಟು, ದೋಷಪರಿಹಾರಕ್ಕಾಗಿ ಕರಾವಿನ ಹಸುವನ್ನೆ ಪಡೆದು ಹಾಲು, ಬೆಣ್ಣೆ ತುಪ್ಪ ತಿಂದು ತಲೆ ಬೆಳೆಸಿಕೊಂಡ ಜೋಯಿಸನೊಬ್ಬ "ದೇಶದ ಸ್ಥಳೀಯ ಸಂಸ್ಥೆಗಳಲ್ಲಿ ಶೂದ್ರ ಸಮೂಹಕ್ಕೆ ಮೀಸಲಾತಿ ಕೊಡಕೂಡದು" ಎಂದು ಕೋರ್ಟಿಗೆ ಅರ್ಜಿ ಎಟ್ಟಿದ್ದಾನಂತಲ್ಲಾ, ಅರ್ಜಿ ಸ್ವೀಕರಿಸಿದ ನ್ಯಾಯಾಧೀಶರು ಸದರಿ ಜೋಯ್ಸನನ್ನು ಗಮನಿಸಿ, ಅರ್ಜಿದಾರನ ಪೂರ್ವಾಪರ ವಿಚಾರಿಸಲಾಗಿ, ದೂರುದಾರ ಹಿಂದೆ ನ್ಯಾಯಾಧೀಶನಾಗಿದ್ದು ನಂತರ ಬಿಜೆಪಿ ರಾಜ್ಯಗಳ ರಾಜ್ಯಪಾಲನೂ ಆಗಿದ್ದನೆಂಬುದನ್ನು ಕೇಳಿ ಬೆಚ್ಚಿ ಬಿದ್ದರಂತಲ್ಲಾ, ಅಷ್ಟೇ ಅಲ್ಲ, ಸದರಿ ಅರ್ಜಿದಾರ ಮಣ್ಣಾಗುವುದರಲ್ಲಿ ಮನುಧರ್ಮಾಧಾರಿತ ವ್ಯವಸ್ಥೆಯನ್ನು ತಂದೇ ತರುತ್ತೇನೆಂದು ಹಟ ಮಾಡಿರುವುದನ್ನು ಕೇಳಿದ ನ್ಯಾಯವಾದಿಗಳು "ಸದರಿ ಅರ್ಜಿದಾರನನ್ನು ಯಾವುದಕ್ಕೂ ಮೊದಲು ಮನೋವೈದ್ಯರಿಗೆ ತೋರಿಸಿ" ಎಂದು ಇನ್ನು ಹೇಳಿಲ್ಲವಂತಲ್ಲಾ, ಥೂತ್ತೇರಿ!

****



ಅದ್ವಾಣಿಯನ್ನು ಪ್ರಧಾನಿಯೆಂದು ಒಪ್ಪಿಕೊಂಡು ಬರುವ ಯಾರನ್ನೇ ಆದರೂ ನಮ್ಮ ಪಕ್ಷಕ್ಕೆ ಸೇರಿಸಿಕೊಂಡು ತಿಲಕ ಇಡುವುದಾಗಿ ವೆಂಕಯ್ಯ ನಾಯ್ದು ಹೇಳಿ ವಾರವಾದರೂ ಯಾರೂ ಅತ್ತ ತಿರುಗಿ ನೋಡಿಲ್ಲವಂತಲ್ಲಾ, ಇದರಿಂದ ಕೆರಳಿದ ವೆಂಕುಪಿನ್ನಯ್ಯ ಈಗಾಗಲೇ ಪಾರ್ಟಿಯಲ್ಲಿದ್ದವರನ್ನೆ ಒಟ್ಟು ಸೇರಿಸಿ, ಅವರನ್ನೆಲ್ಲಾ ಮುದಿ ಎತ್ತುಗಳು ಗಣಿ ಹೊಡೆಯುವಂತೆ ನಿಲ್ಲಿಸಿ, ಮೇಟಿಜಾಗಕ್ಕೆ ಅದ್ವಾಣಿ ನಿಲ್ಲಿಸಿ ಚಪ್ಪಾಳೆ ಹೊಡೆದರಂತಲ್ಲಾ, ಇದನ್ನು ಕಂಡ ಗಣಿಕಳ್ಳರು "ಆ ಸೋನಿಯಾ, ಜಯಲಲಿತಾ, ಮಾಯಾವತಿ ಎದುರಿಸಲು ನಮ್ಮ ಇಲಾಖೆ ಹಸುವಿನಂತಹ ಸುಷ್ಮಾ ಸ್ವರಾಜೇ ಸರಿಯಾದ ಅಮ್ಮ. ನಮ್ಮ ಭಾಗಕ್ಕೆ ಅವರೇ ಪ್ರಧಾನಿ. ಈ ಪದ್ದುಕಾದು. ರೇಪು ಸುಮ್ಮ ಸ್ವರಾಜನಿ ಪ್ರಧಾನಮಂತ್ರಿ ಚೇಸ್ತಾಮು. ಅವುಟಕಯ್ಯಿ ಕರ್ನಾಟಕ ಆಂದ್ರ ಗಡಿ ಪ್ರದೇಶಾಲು ಪಾಗುಟ್ಟು ಪೋನಿ" ಅಂದರಂತಲ್ಲಾ, ಥೂತ್ತೇರಿ!!

* * * *

ಕರ್ನಾಟಕ ರಾಜಕಾರಣದ ಮೂಲವ್ಯಾಧಿಯಾದ ದೇವೇಗೌಡ ಚುರುಕಾಗಿದ್ದಾರಂತಲ್ಲಾ, ಮೂರನೇ ಶಕ್ತಿಯ ಮೂರ್ಖರ ನಡುವೆ ನಿಂತು ಮತ್ತೆ ಪ್ರಧಾನಿ ಕನಸು ಕಾಣುತ್ತಿರುವ ಗೌಡರು, ಕುಮಾರಣ್ಣನಿಗೆ "ಹೇಗಾದರಾಗಲಿ, ಈ ಕೂಡಲೇ ನೀನು ಸೋನಿಯಾ ಗಾಂಧಿಯನ್ನು ಭೇಟಿಯಾಗಿ ಮಾತನಾಡು. ಮಾತನಾಡುವಾಗ ರಾಹುಲ ಗಾಂಧಿಯನ್ನು ಹೊಗಳು. ಪ್ರಿಯಾಂಕ ಗಾಂಧಿಯನ್ನು ಕೊಂಡಾಡು. ನಂತರ ಕರ್ನಾಟಕದಲ್ಲಿ ಕಾಂಗ್ರೆ ಹೊರಗೇ ಇದ್ದುಕೊಂಡು ಕಾಂಗ್ರೆಸ್ ಕಟ್ಟುವ ಬಗ್ಗೆ ಸೂಚ್ಯವಾಗಿ ತಿಳಿಸು" ಎಂದು ಹೇಳಿಕಳಿಸಿದ್ದರಂತಲ್ಲಾ, ಅಪ್ಪನ ಮಾತುಗಳನ್ನು ಉರುಹೊಡೆದುಕೊಂಡು ಹೋದ ಕುಮಾರನಿಗೆ ಕನ್ನಡ ಭಾಷೆ ಜೊತೆಗೆ ಇಂಗ್ಲಿಷ್ ಹಿಂದಿಯೂ ಕೈಕೊಟ್ಟು "ಏನ್ ಮೇಡಂ ಚೆನ್ನಾಗಿದ್ದೀರ? ನಾನು ದೇವೇಗೌಡ್ರ ಮಗ. ದಾವಣಗೆರೆ, ಧಾರವಾಡ, ಶಿವಮೊಗ್ಗದಲ್ಲಿ ಕಾಂಗ್ರೆಸ್ ಪಾರ್ಟಿ ಗೆಲ್ಲೋತರ ಮಾಡಿದ್ದಿವಿ. ಆಮೇಲೆ ನಮ್ಮ ತಂದೆ ನಿಮ್ಮ ಜೊತೆ ಮಾತಾಡ್ತರೆ" ಎಂದು ಬೆವರೊರೆಸಿಕೊಂಡು ಬಂದರಂತಲ್ಲಾ, ಇತ್ತ ಗೌಡರು, ಮಗ ಸೋನಿಯಾ ಭೇಟಿ ಮಾಡಿದ್ದಕ್ಕೆ ಕಾರಣ ಕೇಳುವುದಾಗಿ ಮೆಮೊ ಕೊಡುವ ಅಧಿಕಾರಿಯಂತೆ ಗುಟುರು ಹಾಕಿದರಂತಲ್ಲಾ, ಥೂತ್ತೇರಿ!!!



* * * *

ಶತಕೋಟಿಗೆ ಇಪ್ಪತ್ತು ಕೋಟಿ ಕಡಿಮೆಯಷ್ಟು ಹಣ ಸುರಿದು ಪೂರೈಸಿರುವ ಶಿವಮೊಗ್ಗದ ಚುನಾವಣೆ ಯಡ್ಡಿ ಮುಖದಲ್ಲಿ ಗೆಲುವಿನ ಗೆರೆಯನ್ನು ಮೂಡಿಸಿಲ್ಲವಂತಲ್ಲಾ, "ಇದಕ್ಕೆ ಕಾರಣ ಈಶ್ವರಪ್ಪನೆಂಬ ಯಬಡ. ಈತ ಮತ ಹಾಕುವಾಗಲೂ ಅನ್ಯಮನಸ್ಕನಾಗಿ ಮೊಬೈಲ್ ಮಾಡುತ್ತ ಎಲ್ಲೋ ಮತ ಒತ್ತಿದ್ದಾನೆ. ಆತನ ನಡವಳಿಕೆ ಪ್ರಭಾವ ಕುರುಬರ ಮೇಲೂ ಆಗಿದ್ದರೆ, ಶಿವಮೊಗ್ಗ ಶಿಕಾರಿಪುರದ ಕುರುಬರು ಸರಿಯಾಗಿಯೇ ಕೈಕೊಟ್ಟಿದ್ದಾರೆ" ಎಂದು ಗಾಣಿಗ ಲಿಂಗಾಯಿತನೊಬ್ಬ ಯಡ್ಡಿಯ ಕಿವಿ ಕಚ್ಚಿದ್ದಾನಂತಲ್ಲಾ, ಅತ್ತ ಶಂಕರಮೂರ್ತಿ ಎಂಬ ಸೀಮೆಎಣ್ಣೆ ಶೆಟ್ಟಿ, ರಾಘವೇಂದ್ರ ಚುನಾವಣೆಗೆ ನಿಂತಾಗಿನಿಂದಲೂ ಮುಖವನ್ನು ಥೇಟ್ ಸೀಮೆಎಣ್ಣೆ ಮುಖ ಮಾಡಿಕೊಂಡಿದ್ದೂ ಅಲ್ಲದೆ, ಅಪ್ಪಿತಪ್ಪಿ ಒಂದು ಮತವನ್ನು ಕೇಳಿಲ್ಲವಂತಲ್ಲ, ಅದೂ ಹೋಗಲಿ, ಸದರಿ ಶೆಟ್ಟಿ ಮತ್ತವನ ವಾಸವಿ ವಂಶಸ್ಥರು ರಾಘುಗೆ ಓಟು ಮಾಡಿದ್ದಾರೆಂದು ನಂಬುವುದು ಹೇಗೆಂದು ತೀರ ತಲೆ ಕೆಡಿಸಿಕೊಂಡ ಯಡ್ಡಿ ಜಿಂದಾಲಿಗೆ ಹೋಗಿ, ಮಣ್ಣಿನ ಮೇಲೆ ಮಲಗಿರುವಾಗಲೆ ಅತ್ತ ಶಿವಮೊಗ್ಗದಲ್ಲಿ ಆತನ ಪರಿವಾರದವರನ್ನು ಹಿಡಿದ ವಿಪ್ರೋತ್ತಮರು "ರಾಘು ಗೆಲುವಿಗೆ ನಮ್ಮಲ್ಲೊಂದು ಪವಾಡವಿದೆ. ಅದು ಈಡೇರಬೇಕಾದರೆ ಒಂದು ಭೀಕರವಾದ ಯಜ್ಞ ಮಾಡಿಸಿಬಿಡಿ. ಯಜ್ಞ ಕುಂಡ ಉರಿದಂತೆಲ್ಲಾ ಕಾಂಗ್ರೆಗೆ ಹಾಕಿರುವ ಮತಗಳೆಲ್ಲಾ ಬಿಜೆಪಿ ಮತಗಳಾಗಿ ಪರಿವರ್ತನೆಯಾಗುತ್ತವೆ" ಎಂದು ತಲೆ ತಿಕ್ಕಿದರಂತಲ್ಲಾ, ಆ ಕೂಡಲೇ ಸೋಲಿನ ಭೀತಿಯಲ್ಲಿದ್ದ ಕ್ಯಾಂಡೇಟ್‌ಗಳೆಲ್ಲಾ ಯಜ್ಞಕುಂಡದ ಸುತ್ತ ಕುಳಿತು ಬೆಂಕಿ ಕಾಯಿಸುತ್ತ ಕಣ್ಣು ಕೆಂಪಗೆ ಮಾಡಿಕೊಂಡು ಹೊರಟುಹೋದವಂತಲ್ಲಾ, ಥೂ, ಥೂತ್ತೇರಿ!!!



ತಾಯಿಗೆ ಗೇಟ್‌ಪಾಸ್

▶▶▶ 11

ತೊರೆದು ಜೆ.ಪಿ. ನಗರದಲ್ಲಿ ಸ್ವಂತಕ್ಕೊಂದು ಮನೆ ನಿರ್ಮಿಸಿಕೊಂಡು ಹೆಂಡತಿಯೊಂದಿಗೆ ಜೀವನ ಸಾಗಿಸುವ ನಿರ್ಧಾರ ಮಾಡಿದ. ಮುಂದೊಂದು ದಿನ ಅತ್ತೆ-ಸೊಸೆಯರ ನಡುವಿನ ಬಾಂಧವ್ಯ ಸರಿಹೋದರೆ ಮತ್ತೆ ಜೊತೆಯಾಗಿ ಒಂದೇ ಸೂರಿನಡಿ ಬದುಕುವ ಆಸೆಯೂ ಅವನಿಗಿತ್ತು.

ದರ್ಶನ್ ಬೇರೆಯಾದ ಮೇಲೆ ಆತನ ತಮ್ಮ ದಿನಕರ್ ಮತ್ತು ತಾಯಿ ಮೀನಾ ತೂಗುದೀಪ ಹಳೆಯ ಅದೇ ಬಾಡಿಗೆ ಮನೆಯಲ್ಲೇ ತಮ್ಮ ವಾಸ್ತವ್ಯವನ್ನು ಮುಂದುವರೆಸಿದ್ದರು.

ಹಿರಿಯ ಮಗ ಬೇರೆಯಾದರೂ ಆತನ ಮೇಲಿನ ಪ್ರೀತಿ ಮಾತ್ರ ಮೀನಾರಿಗೆ ಎಂದೂ ಕಡಿಮೆಯಾಗಲಿಲ್ಲ. 'ಮದುವೆಯಾಗಿ ಮೂರು ವರ್ಷ ಕಳೆದರೂ ಮಗ-ಸೊಸೆಗೆ ಒಂದು ಮಗುವಾಗಲಿಲ್ಲ' ಎಂಬ ಕೊರಗು ಮಾತ್ರ ಇದ್ದೇ ಇತ್ತು. ಅದಕ್ಕಾಗಿ ಅವರು ನಂಜನಗೂಡಿನ ನಂಜುಂಡೇಶ್ವರನಿಂದ ಹಿಡಿದು ಶಿರಡಿ ಸಾಯಿಬಾಬಾನ ತನಕ ಕಂಡಕಂಡ ದೇವರಿಗೆ ಕೈಮುಗಿದು ಹರಕೆ ಕಟ್ಟಿಕೊಂಡಿದ್ದರು. ಇತ್ತೀಚೆಗಷ್ಟೇ ದರ್ಶನ್‌ಗೆ ಗಂಡುಮಗುವಾದಾಗ 'ನನ್ನ ಹರಕೆಯಿಂದಲೇ ನನಗೆ ಮೊಮ್ಮಗ ಹುಟ್ಟಿದ್ದಾನೆ' ಎಂದು ಆನಂದದಿಂದ ಸಂಭ್ರಮಿಸಿದ್ದರು ಮೀನಮ್ಮ.

ಬಂದಳು ಎರಡನೇ ಸೊಸೆ

ಮೊದಲ ಸೊಸೆ ವಿಜಯಲಕ್ಷ್ಮಿಯನ್ನು ಸ್ವಲ್ಪ ಸ್ಥಿತಿವಂತರ ಮನೆಯಿಂದ ಕರೆತಂದಿದ್ದರಿಂದ ಆಕೆಯೊಂದಿಗೆ ತನಗೆ ಹೊಂದಾಣಿಕೆಯಾಗಲಿಲ್ಲ ಎಂದೇ ಮೀನಮ್ಮ ಭಾವಿಸಿದ್ದರು. ಆದ್ದರಿಂದಲೇ ಕಿರಿಮಗ ದಿನಕರನಿಗೆ ಶಿಕಾರಿಪುರದ ಬಡ ಕುಟುಂಬದ ಮಾನಸ ಎಂಬ ಹೆಣ್ಣನ್ನು ಹುಡುಕಿದರು. 'ಬಡವರ ಹೆಣ್ಣುಮಕ್ಕಳು ತಗ್ಗೀಬಗ್ಗಿ ನಡೀತಾರೆ' ಎಂಬುದು ಅವರ ಯೋಚನೆಯಾಗಿತ್ತು. ಮಾನಸ ಅವರ ಕುಟುಂಬ ಅದೆಷ್ಟು ಹಣಕಾಸಿನ ತೊಂದರೆಯಲ್ಲಿತ್ತೆಂದರೆ ತಮ್ಮ ಮಗಳ ಮದುವೆ ಮಾಡಿಕೊಡುವಷ್ಟೂ ಶಕ್ತರಾಗಿರಲಿಲ್ಲ. ಆಗ ಸ್ವತಃ ಮೀನಾ ಅವರೇ ತಮ್ಮ ಭಾವಿ ಸೊಸೆಗೆ ಮೂರು ಲಕ್ಷ ರೂಪಾಯಿಗಳ ಚಿನ್ನದ ಆಭರಣಗಳನ್ನು ಮಾಡಿಸಿಕೊಟ್ಟಿದ್ದರು. ಇಷ್ಟೆಲ್ಲಾ ಖರ್ಚು ಮಾಡಿ ಮದುವೆ ಮಾಡಿದರೂ ಈ ಬಾರಿ ದಿನಕರ ಹೆಂಡತಿ ಮಾನಸಳೊಂದಿಗೂ ಮೀನಾರ ಹೊಂದಾಣಿಕೆ ಸಾಧ್ಯವಾಗಲಿಲ್ಲ.

ಶಿಕಾರಿಪುರದ ಹಿಂಡು


ಎಂಟು ತಿಂಗಳ ತುಂಬು ಗರ್ಭಿಣಿಯಾಗಿರುವ ದಿನಕರನ ಪತ್ನಿ ಮಾನಸ ಹೆರಿಗೆಗಾಗಿ ತವರಿಗೆ ಹೋಗದೇ ಇಡೀ ತವರನ್ನೇ ಶಿಕಾರಿಪುರದಿಂದ ಬೆಂಗಳೂರಿನ ತನ್ನ ಮನೆಗೆ ಟ್ರಾನ್ಸ್‌ಫರ್ ಮಾಡಿಕೊಂಡ ನಂತರವಂತೂ ಮೀನಾರ ಮನೋವೇದನೆ ಮತ್ತಷ್ಟು ಉಲ್ಬಣಿಸಿತು. ತಾನು ಹೆತ್ತು, ಹೊತ್ತು, ಕಷ್ಟಪಟ್ಟು ಬೆಳೆಸಿದ ಗಂಡುಮಕ್ಕಳೇ ತನ್ನ ಬಗ್ಗೆ ತಿರಸ್ಕಾರ ಭಾವದಿಂದ ನೋಡುತ್ತಿದ್ದಾರೆ ಎಂದು ಯಾವ ಗಳಿಗೆಯಲ್ಲಿ ಮೀನಾರಿಗೆ ಅನ್ನಿಸಿತೋ, ಆ ಕ್ಷಣ ಮರುಯೋಚಿಸದೆ ಗಂಟುಮೂಟೆ ಕಟ್ಟಿಕೊಂಡು ಮೈಸೂರಿನ ಮಹಾಲಕ್ಷ್ಮಿಪುರಂನಲ್ಲಿ ತಮ್ಮ ಪತಿ ತೂಗುದೀಪ ಶ್ರೀನಿವಾಸ್ ನಿರ್ಮಿಸಿದ್ದ ಹಳೇ ಮನೆ ಕಡೆಗೆ ಹೆಜ್ಜೆ ಹಾಕಿಬಿಟ್ಟರು.

ಇತ್ತೀಚಗಷ್ಟೇ ಈಕೆ ದಿನಕರನ ನಿರ್ದೇಶನವನ್ನು ನಂಬಿ 'ನವಗ್ರಹ'ಕ್ಕೆ ಕೋಟಿಗಟ್ಟಲೆ ಹಣ ಸುರಿದಿದ್ದರು. ಮೂರೂವರೆ ಕೋಟಿ ಬಜೆಟ್ಟು, ಒಂಭತ್ತು ಜನ ನಾಯಕನಟರಿದ್ದರೂ 'ನವಗ್ರಹ' ಶಿವನಪಾದ ಸೇರಿತ್ತು. ದುಡ್ಡು ದರ್ಶನ್‌ದೇ ಆಗಿದ್ದರೂ ವ್ಯವಹಾರವೆಲ್ಲವೂ ತಾಯಿ ಮೀನಾರದ್ದೇ ಆಗಿತ್ತು. ಹೀಗೆ ತನ್ನ ಮಗನಿಂದಲೇ ಲುಕ್ಸಾನು ಅನುಭವಿಸಿದ ಮೀನಮ್ಮ ಚಿಂತೆಗೆ ಬಿದ್ದು ಅನಾರೋಗ್ಯಕ್ಕೀಡಾದರು.

ಇನ್ನೊಂದು ಮೂಲದ ಪ್ರಕಾರ ದರ್ಶನ್ ತಾಯಿ ಮೀನಮ್ಮನವರು ಮೊನ್ನೆ ನಡೆದ ಚುನಾವಣೆಯಲ್ಲಿ ಯಾವುದಾದರೊಂದು ಪಕ್ಷದ ಮುಖಾಂತರ ಚುನಾವಣೆಗೆ ಸ್ಪರ್ಧಿಸುವ ಇರಾದೆ ವ್ಯಕ್ತಪಡಿಸಿ, ಟಿಕೆಟು ಕೊಡಿಸುವಂತೆ ಮಕ್ಕಳಿಗೆ ದುಂಬಾಲು ಬಿದ್ದಿದ್ದರಂತೆ. ಯಾವಾಗ ತಮ್ಮ ಪುತ್ರದ್ವಯರು ತಾಯಿಯ ಈ 'ಅಪೇಕ್ಷೆ'ಗೆ ಕಿವಿಗೊಡಲಿಲ್ಲವೋ ಆಕೆ ಸಿಟ್ಟು ಮಾಡಿಕೊಂಡು ಮೈಸೂರಿನತ್ತ ಮುಖ ಮಾಡಿದ್ದಾರಂತೆ.

ಕಾರಣ ಏನೇ ಇರಲಿ. ಮೊನ್ನೆಮೊನ್ನೆಯಷ್ಟೇ ನಡೆದ ಅಮೃತ ಮಹೋತ್ಸವದಲ್ಲಿ ತನ್ನ ತಂದೆ ತೂಗುದೀಪ ಶ್ರೀನಿವಾಸ್ ಮತ್ತು ಇನ್ನಿತರೆ ಖಳನಟರ ಕುರಿತಾದ ಪುಸ್ತಕಗಳನ್ನು ಫಿಲ್ಮ್ ಚೇಂಬರ್ ಹೊರತರಲಿಲ್ಲವೆಂಬ ಕಾರಣಕ್ಕೆ ಜಯಮಾಲಾರೊಂದಿಗೆ ಜಗಳಕ್ಕೆ ಬಿದ್ದು ನ್ಯಾಯ ಕೇಳಿದ್ದ 'ಅಪರೂಪದ ಮಗ' ದರ್ಶನ್. ಈಗ ಹೆತ್ತ ತಾಯಿಯೇ ಮಕ್ಕಳಿದ್ದರೂ ಏಕಾಂಗಿಯಾಗಿ ಬದುಕುತ್ತಿದ್ದಾರೆ. ತನ್ನ ಮಕ್ಕಳ ಭವಿಷ್ಯಕ್ಕಾಗಿ ಜೀವವನ್ನೇ ತೇಯ್ದ ತಾಯಿಯೀಗ ಅನಾರೋಗ್ಯ ಮತ್ತು ಕಾಲುನೋವಿನಿಂದ ಬಳಲುತ್ತಿದ್ದಾಳೆ. ಇಂಥ ಸಂದರ್ಭದಲ್ಲಿ ಆಕೆಯನ್ನು ಒಬ್ಬಂಟಿಯಾಗಿ ಬಿಡುವುದು ದರ್ಶನ್‌ಗಾಗಲಿ, ದಿನಕರನಿಗಾಗಲಿ ತರವಲ್ಲ. ಅವರಿಬ್ಬರು ತಮ್ಮ ಅಂತಃಸ್ಸಾಕ್ಷಿಯ ಮಾತನ್ನು ಕೇಳಬೇಕಿದೆ. ●

ಸೆಟ್ಟೇರಿದ ದೇವರ ತಂಗಿ


ಸಾಯಿಪ್ರಕಾಶ್


ಸಾಯಿಪ್ರಕಾಶ್ ನಿರ್ದೇಶನದ 'ದೇವರು ಕೊಟ್ಟ ತಂಗಿ' ಕೊನೆಗೂ ಸೆಟ್ಟೇರಿದೆ.

ಇವರ ನಿರ್ದೇಶನದ 'ತವರಿಗೆ ಬಾ ತಂಗಿ' ಎಂಬ ಚಿತ್ರ ಬಾಕ್ಸಾಫೀಸ್‌ನಲ್ಲಿ ಹಣದ ಹೊಳೆಯನ್ನೇ ಹರಿಸಿದಾಗಲೇ ಅವರು 'ದೇವರು ಕೊಟ್ಟ ತಂಗಿ' ಚಿತ್ರದ ಕಥೆಯನ್ನು ಹೆಣೆದಿದ್ದರು. ಅಷ್ಟೇ ಅಲ್ಲ, ಈ ಚಿತ್ರದಲ್ಲೂ ಶಿವರಾಜ್‌ಕುಮಾರ್-ರಾಧಿಕಾ ಜೋಡಿಯನ್ನೇ ಹಾಕಿಕೊಳ್ಳಬೇಕೆಂದು ದೇವರೇ ಸಾಯಿಪ್ರಕಾಶರನ್ನು ಪ್ರೇರೇಪಿಸಿದ್ದನಂತೆ. ಹಾಗಾಗಿ ಅವರು ಅಂದಿನಿಂದ ರಾಧಿಕಾಳ ಕಾಲ್‌ಶೀಟ್‌ಗಾಗಿ ಆಕೆಯ ಹಿಂದೆ ಓಡಾಡಲಾರಂಭಿಸಿದರು.

ಆದರೆ ಅಷ್ಟೊತ್ತಿಗೆಲ್ಲಾ ರಾಧಿಕಾ ತುಂಬಾ ಬಿಜಿಯಾಗಿದ್ದರಿಂದ ಸಾಯಿಗೆ ಆಕೆಯ ಕಾಲ್‌ಶೀಟ್ ಸಿಗಲೇ ಇಲ್ಲ. ಸಾಯಿ ಮಾತ್ರ ತಾನು ಹಿಡಿದ ಪಟ್ಟು ಸಡಿಲಗೊಳಿಸದೆ ರಾಧಿಕಾಳಿಗಾಗಿ ಕಾದುಕೂತರು, ಫೋನ್ ಮೇಲೆ ಫೋನ್ ಮಾಡಿ ಕಾಲ್‌ಶೀಟ್‌ಗಾಗಿ ಗೋಗರೆದರು. ರಾಧಿಕಾ ಕುಮಾರಸ್ವಾಮಿಯವರ ಅಂತಃಪುರ ಪ್ರವೇಶಿಸಿದ ನಂತರವಂತೂ ಆಕೆ ಸಾಯಿಪ್ರಕಾಶ್‌ಗೆ ಫೋನ್‌ನಲ್ಲೂ ಸಿಗದಂತಾದಳು. ಆದರೂ ಇಂದಲ್ಲ ನಾಳೆ ರಾಧಿಕಾ ಮತ್ತೆ ಮುಖಕ್ಕೆ ಬಣ್ಣ ಹಚ್ಚುತ್ತಾಳೆ, ತನ್ನ ಚಿತ್ರದಲ್ಲಿ ಖಂಡಿತವಾಗಿಯೂ ನಟಿಸುತ್ತಾಳೆ ಎಂಬ ನಂಬಿಕೆಯಲ್ಲೇ ಸಾಯಿಪ್ರಕಾಶ್ ಕಾಲಕಳೆದರು.

ಆದರೀಗ ಅವರಿಗೆ ಜ್ಞಾನೋದಯವಾಗಿರುವಂತಿದೆ. ರಾಧಿಕಾಳಿಗಾಗಿ ನಾಲ್ಕು ವರ್ಷ ಕಾದರೂ ಆಕೆಯ ದರ್ಶನವೂ ಸಿಗದಿದ್ದರಿಂದ ಅವರು ಆಕೆಯನ್ನು ಕೈಬಿಟ್ಟು ಈ ಚಿತ್ರವನ್ನು ಮಾಡಲು ಹೊರಟಿದ್ದಾರೆ.

ಈಗ 'ದೇವರು ಕೊಟ್ಟ ತಂಗಿ'ಯಾಗಿ ರಾಧಿಕಾಳ ಸ್ಥಾನವನ್ನು ಮಲೆಯಾಳಿ ಕುಟ್ಟಿ ಮೀರಾ ಜಾಸ್ಮಿನ್ ಅಲಂಕರಿಸಿದ್ದಾಳೆ.


ಕಲ್ಪನಾ

ಮಿನುಗುತ್ತಲೇ ಇರುವ ಕಲ್ಪನಾ

ಇದೇ ಮೇ 13ಕ್ಕೆ ಮಿನುಗುತಾರೆ ಕಲ್ಪನಾ ನಿಧನ ಹೊಂದಿ ಮೂವತ್ತು ವರ್ಷಗಳೇ ಸಂದುಹೋಗಿವೆ. 1979ರಲ್ಲಿ ಕಲ್ಪನಾ ನಿಧನರಾದಾಗ ಕನ್ನಡ ಚಿತ್ರರಂಗ ಮಾತ್ರವಲ್ಲ, ಇಡೀ ಕರ್ನಾಟಕದ ಜನತೆಯೇ ದಿಗ್ಭ್ರಮೆಗೊಂಡಿತ್ತು. ಆಕೆ ಕಣ್ಮರೆಯಾಗಿ ಕಾಲುಶತಮಾನಕ್ಕೂ ಹೆಚ್ಚು ಕಾಲ ಸವೆದಿದ್ದರೂ ಅಂದಿನ ಜಮಾನದ ಜನ ಮಾತ್ರವಲ್ಲ ಇಂದಿನ ಜಮಾನದ ಯುವಜನತೆಯೂ ಕಲ್ಪನಾರನ್ನು ನಿತ್ಯವೂ ಒಂದಲ್ಲ ಒಂದು ರೀತಿಯಲ್ಲಿ ಜ್ಞಾಪಿಸಿಕೊಳ್ಳುತ್ತಿರುತ್ತಾರೆ.

ಕಲಾವಿದರು ಈ ಜಗತ್ತನ್ನು ಬಿಟ್ಟುಹೋದರೂ ಅವರ ಕೃತಿಗಳು ಅವರನ್ನು ಅಜರಾಮರವಾಗಿಸುತ್ತವೆ ಎಂಬ ಮಾತು ಕಲ್ಪನಾ ವಿಷಯದಲ್ಲಿ ನೂರಕ್ಕೆ ನೂರು ಸತ್ಯ. ಅದಕ್ಕೆ ಕಾರಣ ಆಕೆ ನಿರ್ವಹಿಸಿದ್ದ ಅದ್ಭುತ ಪಾತ್ರಗಳು. ಆದರೆ ಆಕೆಯನ್ನು ಇವತ್ತು ಜೀವಂತವಾಗಿ ಇಟ್ಟಿರುವ ಕೀರ್ತಿ ಚೇಂಬರ್‌ಗಾಗಲಿ ಅಥವಾ ಕಲಾವಿದರ ಸಂಘಕ್ಕಾಗಲಿ ಸಲ್ಲುವುದಿಲ್ಲ. ಬದಲಾಗಿ ಟಿವಿ ಚಾನೆಲ್‌ಗಳು ಆಕೆ ನರ್ತಿಸಿದ ಹಾಡಿನ ದೃಶ್ಯಗಳನ್ನು ಪ್ರಸಾರ ಮಾಡುವ ಮೂಲಕ ಆಕೆಯನ್ನು ಇನ್ನೂ ಜೀವಂತವಾಗಿಟ್ಟಿವೆ.

ಹಲವಾರು ಸಿನಿಮಾಗಳಲ್ಲಿ ನಟಿಸಿ ಸಾವಿರಾರು ಅಭಿಮಾನಿಗಳನ್ನು ಪಡೆದಿದ್ದ ಕಲ್ಪನಾ ಒಂದು ರೀತಿಯಲ್ಲಿ ಅನಾಥೆ. ಆಕೆಗೆ ಗಂಡನಿರಲಿಲ್ಲ, ಮಕ್ಕಳಿರಲಿಲ್ಲ, ಅಭಿಮಾನಿಗಳ ಸಂಘವಂತೂ ಇರಲೇ ಇಲ್ಲ. ಆಕೆಗಾಗಿ ಯಾರೂ ಸಮಾಧಿ ಕಟ್ಟಿಲ್ಲ, ವರ್ಷಕ್ಕೊಮ್ಮೆ ಕಲ್ಪನಾ ನೆನಪು ಎಂದು ಯಾರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೂ ಇಲ್ಲ. ಆದರೂ ಕಲ್ಪನಾ ಇಂದಿಗೂ ಕಲಾಭಿಮಾನಿಗಳ ಹೃದಯದಲ್ಲಿ ಮಿನುಗುತ್ತಲೇ ಇದ್ದಾರೆ.


ಅಷ್ಟೇ ಯಾಕೆ, ಕನ್ನಡ ಚಿತ್ರರಂಗದ ಪ್ರತಿ ನಾಯಕಿಯೂ ಆಶೆ ಪಡುವುದು ತಾನು ಕಲ್ಪನಾರಂತಾಗಬೇಕೆಂದು. ಶ್ರುತಿ, ಸುಧಾರಾಣಿ, ಪ್ರೇಮಾರಿಂದ ಹಿಡಿದು ಇವತ್ತು ಅತಿ ಹೆಚ್ಚು ಬೇಡಿಕೆ ಹೊಂದಿರುವ ಪೂಜಾ ಗಾಂಧಿಯನ್ನೂ "ನಿಮ್ಮ ಮಹತ್ವಾಕಾಂಕ್ಷೆಯ ಪಾತ್ರ ಎಂತಹದ್ದು?" ಎಂದು ಕೇಳಿ ನೋಡಿ. ಪ್ರತಿಯೊಬ್ಬರೂ ಉತ್ತರಿಸುವುದು "ಕಲ್ಪನಾರವರು 'ಶರಪಂಜರ' ಚಿತ್ರದಲ್ಲಿ ನಿರ್ವಹಿಸಿದ ಹುಚ್ಚಿಯ ಪಾತ್ರ" ಎಂದೇ ಉತ್ತರಿಸುತ್ತಾರೆ. ಇದು ಕಲ್ಪನಾರ ಜನಪ್ರಿಯತೆಗೆ ಮಾತ್ರವಲ್ಲ ಆಕೆಯ ಕಲೆ ಮತ್ತು ಪ್ರತಿಭೆಗೆ ನಟಿಯರು ನೀಡುವ ಅರ್ಥಪೂರ್ಣ ಶ್ರದ್ಧಾಂಜಲಿ.

ಆದರೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾತ್ರ ಕಲ್ಪನಾರ ಬಗ್ಗೆ ದಿವ್ಯವಾದ ನಿರ್ಲಕ್ಷ್ಯವನ್ನೇ ತೋರುತ್ತಾ ಬಂದಿದೆ. ಈಗ ಜಯಮಾಲ ಮಂಡಳಿಯ ಅಧ್ಯಕ್ಷೆಯಾಗಿರುವುದರಿಂದ ಅವರ ಕಾಲಾವಧಿಯಲ್ಲಾದರೂ ಕಲ್ಪನಾರ ಬಗ್ಗೆ ಚೇಂಬರ್ ಏನಾದರೂ ನೆನಪಿನ ಕಾರ್ಯಕ್ರಮ ಹಮ್ಮಿಕೊಳ್ಳಬಹುದೆಂಬ ನಿರೀಕ್ಷೆ ಹಲವರಿಗಿತ್ತು, ಆದರೆ ಆಡಂಬರದ, ವಿಜೃಂಭಣೆಯ ಉತ್ಸವಗಳಲ್ಲೇ ಹೆಚ್ಚು ತಲ್ಲೀನರಾದ ಜಯಮಾಲಾರವರು ಕಲ್ಪನಾರನ್ನು ನೆನಪಿಸಿಕೊಳ್ಳಲೇ ಇಲ್ಲ.

ಅದೇನೇ ಇರಲಿ, ಕಲ್ಪನಾ ಅವರು ಕನ್ನಡ ಚಿತ್ರರಂಗ ಮತ್ತು ಜನತೆ ಎಂದೂ ಮರೆಯದ ಮಿನುಗುತಾರೆ. ಆಕೆಯ ಕಂಠದ ಮೋಹಕ ಶಕ್ತಿ, ಅದ್ಭುತ ನಟನೆ ಮತ್ತು ಕಾತುರ ಸೂಸುವ ಕಂಗಳನ್ನು ಯಾರು ತಾನೇ ಮರೆಯಲು ಸಾಧ್ಯ?

ಶೆಣೈ

'ಉಲ್ಲಾಸ'ವಿಲ್ಲದ 'ಉತ್ಸಾಹ'



ಗಣೇಶ್

ಒಂದು ವರ್ಷದ ಹಿಂದೆ ಗೋಲ್ಡನ್ ಸ್ಟಾರ್ ಗಣೇಶನ ಚಿತ್ರಗಳ ಹಂಚಿಕೆಗಾಗಿ ನಾ ಮುಂದು, ತಾ ಮುಂದು ಎಂದು ಹಂಚಿಕೆದಾರರು ಮುಗಿಬೀಳುತ್ತಿದ್ದರು. ಆದರೀಗ ಅವರೆಲ್ಲ ಗಣೇಶ್ ನಟನೆಯ 'ಉಲ್ಲಾಸ ಉತ್ಸಾಹ' ಚಿತ್ರದ ಸಹವಾಸವೇ ಬೇಡವೆಂಬಂತೆ ದೂರ ಉಳಿದಿದ್ದಾರೆ.

ತೆಲುಗಿನಲ್ಲಿ ಮೂಡಿಬಂದಿದ್ದ 'ಉಲ್ಲಾಸಂಗಾ ಉತ್ಸಾಹಸಂಗಾ' ಅಲ್ಲಿ ಸೂಪರ್ ಡೂಪರ್ ಹಿಟ್ ಆಗಿತ್ತು. ಅದನ್ನು ಕನ್ನಡದ ನಿರ್ಮಾಪಕರೇ ಆದ ಸೋಮು ರಿಮೇಕ್ ಮಾಡಿ ಮುಗಿಸಿದ್ದಾರೆ. ಇದು ಹಿಟ್ ಚಿತ್ರದ ರಿಮೇಕ್ ಆದರೂ ಗಾಂಧಿನಗರದ ಡಿಸ್ಟ್ರಿಬ್ಯೂಟರ್‌ಗಳು ಇದನ್ನು ಕೊಂಡುಕೊಳ್ಳಲು ಸಿದ್ಧರಿಲ್ಲವಂತೆ.

ಇದನ್ನೆಲ್ಲಾ ನೋಡಿದರೆ, ಗಣೇಶನ ಬಗ್ಗೆ ಜನರ 'ಉತ್ಸಾಹ' ಕಳೆದುಹೋಗಿದೆಯಾ? ಅಥವಾ ರಿಮೇಕ್ ಸಿನಿಮಾ ಎಂಬ ಕಾರಣಕ್ಕಾಗಿ ಈ ಚಿತ್ರವನ್ನು ಕೊಳ್ಳಲು ಹಂಚಿಕೆದಾರರು ಹಿಂದೇಟು ಹಾಕುತ್ತಿದ್ದಾರಾ? ಅಥವಾ ಕನ್ನಡ ಚಿತ್ರರಂಗಕ್ಕೆ ಗ್ರಹಣ ಹಿಡಿದಿದೆಯಾ? ಉತ್ತರ ಮಾತ್ರ ಯಾರ ಹತ್ತಿರವೂ ಇಲ್ಲ.

ಬೆಂಕಿಯಿಂದ ಬಾಣಲೆಗೆ?


ರಾಮು

ಹಲವಾರು ವರ್ಷಗಳ ನಂತರ ಉಪೇಂದ್ರ ನಿರ್ದೇಶಿಸಲಿರುವ ಚಿತ್ರವನ್ನು ರಾಮು ನಿರ್ಮಿಸಲಿದ್ದಾರಂತೆ.

ತನ್ನ ಪತ್ನಿ ಮಾಲಾಶ್ರೀಯ ಚಿತ್ರಗಳನ್ನು ನಿರ್ಮಿಸಿ ನಿರ್ಮಿಸಿಯೇ ಕೈಸುಟ್ಟುಕೊಂಡಿರುವ ರಾಮು ಇತ್ತೀಚೆಗೆ 'ಕಿರಣ್ ಬೇಡಿ' ಚಿತ್ರದಿಂದಾಗಿಯೂ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದಾರಂತೆ.

ಈ ಹಿಂದೆ ಪಿ. ಸತ್ಯನನ್ನು ನಂಬಿ 'ಗೂಳಿ'ಯಲ್ಲೂ ರಾಮು ಹಣ ಕಳೆದುಕೊಂಡು ಹೈರಾಣಾಗಿದ್ದರು. ಈಗ ನೋಡಿದರೆ ಓಂಪ್ರಕಾಶ್‌ರಾವ್ ನಿರ್ದೇಶನದ 'ಕಿರಣ್ ಬೇಡಿ'ಯೂ ಕೈಕೊಟ್ಟಿದೆ. ಸಾಲದೆಂಬಂತೆ ಭಯಾನಕ ಡೈರೆಕ್ಟರ್ ಥ್ರಿಲ್ಲರ್ ಮಂಜು ನಿರ್ದೇಶನದ 'ರಜನಿ' ಅನ್ನೋ ಚಿತ್ರವನ್ನೂ ಇವರೇ ನಿರ್ಮಿಸುತ್ತಿದ್ದಾರೆ.

ಇದೆಲ್ಲದರ ಮಧ್ಯೆ ಉಪೇಂದ್ರ ನಿರ್ದೇಶನದ ಚಿತ್ರಕ್ಕೆ ರಾಮು ಕೈಯಿಟ್ಟಿದ್ದಾರೆ. ರಾಮು ಪಾಡು 'ಬೆಂಕಿಯಿಂದ ಬಾಣಲೆಗೆ' ಎಂಬಂತಾಗದಿರಲಿ ಎಂಬುದಷ್ಟೇ ನಮ್ಮ ಆಶಯ.


ಉಪ್ಪಿ


'ಚೆಲುವೆ'ಗಾಗಿ ಚೆಲ್ಲಿದ್ದು....

ಅರುಣ್ ಸಿನಿ Bits

'ಶನಿ ಹೆಗಲೇರಿ ಕುಳಿತುಕೊ ಳ್ಳೋದು' ಅಂದ್ರೆ ಇದೇ ಇರಬಹುದು!

ಯಾಕೆಂದರೆ ನಿರ್ಮಾಪಕ ಎನ್.ಎಂ. ಸುರೇಶ್ ಅವರನ್ನು ಏಕಕಾಲಕ್ಕೆ ಹಲವಾರು ರೀತಿಯ ಸಂಕಷ್ಟಗಳು ಅಟ್ಟಾಡಿಸಿಕೊಂಡು ಬಂದು ಅವರ ಬೆನ್ನತ್ತಿ ಕೂತಿವೆ. ಸುರೇಶರ ಈ ಪರಿ ಕಷ್ಟಕ್ಕೆ ಕಾರಣವಾಗಿರುವುದು ಆ 'ಚೆಲುವೆ'!

ಜಗತ್ತಿನ ಏಳು ವಂಡರುಗಳನ್ನು ಒಂದೇ ಚಿತ್ರದಲ್ಲಿ ತೋರಿಸುತ್ತೇವೆ ಎಂದು ಹೇಳಿ 'ಚೆಲುವೆಯೇ ನಿನ್ನ ನೋಡಲು' ಎಂಬ ಸಿನಿಮಾವನ್ನು ಸುರೇಶ್ ಆರಂಭಿಸಿದಾಗಲೇ ಇದು ಕಷ್ಟಸಾಧ್ಯ ಎಂದು ಕೆಲವರಿಗೆ ಅನ್ನಿಸಿತ್ತು, ಯಾಕೆಂದರೆ ಈ ಚಿತ್ರದ ಬಜೆಟ್ಟೇ ಏಳು ಕೋಟಿ ರೂಪಾಯಿ!! ಈಗ ನೋಡಿದರೆ ಒಂದು ವಂಡರು ತೋರಿಸುವುದರಲ್ಲೇ ಸುರೇಶರ ಜೇಬು ಖಾಲಿಯಾಗಿದೆಯಂತೆ!


ಸುರೇಶ್

ಅಷ್ಟೇ ಅಲ್ಲ, ಈ 'ಚೆಲುವೆ'ಗಾಗಿ ಸುರೇಶ್ ತಮ್ಮ ನಿರ್ಮಾಣದ 'ಕಾರಂಜಿ' ಮತ್ತು 'ಗಾಂಧಿ ಸ್ಮೈಲ್' ಎಂಬ ಎರಡು ಚಿತ್ರಗಳನ್ನೂ ಐಡಿಬಿಐ ಬ್ಯಾಂಕಿನಲ್ಲಿ ಅಡ ಮಾನಕ್ಕಿಟ್ಟಿದ್ದಾರೆ. ಇನ್ನು ಚಾಮುಂಡೇಶ್ವರಿ ಸ್ಟುಡಿಯೋಗೆ ನೆಗೆಟಿವ್ ಹಣ ಸಂದಾಯ ವಾಗುವತನಕ ಆ ಸಂಸ್ಥೆಯವರು ಚಿತ್ರದ ಪ್ರಿಂಟುಗಳನ್ನು ಮುಟ್ಟಲೂ ಬಿಡುವುದಿಲ್ಲ. ಹೀಗಾಗಿ ಈ ಎರಡೂ ಚಿತ್ರಗಳು ಸದ್ಯಕ್ಕೆ ಬಿಡುಗಡೆಗೊಳ್ಳುವ ಮಾತೇ ಇಲ್ಲ.

ಈ ಎಲ್ಲ ಕಾರಣಗಳಿಂದಾಗಿ ಸುರೇಶ್ ನಿರ್ಮಾಣದ 'ಚೆಲುವೆ ನಿನ್ನ ನೋಡಲು' ಚಿತ್ರದಲ್ಲಿ ಮಿಕ್ಕ ಆರು ವಂಡರುಗಳನ್ನು ಪ್ರೇಕ್ಷಕರು ನೋಡುವುದಿರಲಿ, ಅವುಗಳನ್ನು ಚಿತ್ರೀಕರಿಸುವುದೂ ದೂರದ ಮಾತು ಎಂದು ಗಾಂಧಿನಗರಿಗಳು ಹೇಳುತ್ತಿರುವುದು ಬರೀ ಕುಚೇಷ್ಟೆಯಲ್ಲ.

ತೋಯ್ಸಿಕೊಂಡ ಶ್ರೀನಿವಾಸ ಸಾರಿಸಿದ ಗೋವಿಂದ


ನವನೀತ, ಬಿ.ಪಿ.ಶ್ರೀನಿವಾಸ್, ಶಾಲಿನಿ, ಸಾ.ರಾ.ಗೋವಿಂದು

ಮೊನ್ನೆ ನಡೆದ 'ಮುಸ್ಸಂಜೆಯ ಗೆಳತಿ' ಚಿತ್ರದ ಆಡಿಯೋ ರಿಲೀಸ್ ದಿನದಂದು ಅದರ ನಿರ್ಮಾಪಕ, ನಿರ್ದೇಶಕ ಹಾಗೂ ನಾಯಕನಟನೂ ಆಗಿರುವ ಬಿ.ಪಿ. ಶ್ರೀನಿವಾಸನ ಬ್ಲಡ್ ಪ್ರೆಷರ್ ಸಿಕ್ಕಾಪಟ್ಟೆ ರೈಸ್ ಆದಂತೆ ಕಾಣುತ್ತಿತ್ತು; ಅದಕ್ಕೆ ಕಾರಣವೂ ಇತ್ತು.

ಕಳೆದ ವಾರದ 'ಲಂಕೇಶ್' ಸಂಚಿಕೆಯಲ್ಲಿ 'ಮುಸ್ಸಂಜೆಯ ಗೆಳತಿ ಅಪ್ಪ ಮಗಳ ವಿಕೃತಿ' ಎನ್ನುವ ವರದಿ ಪ್ರಕಟಗೊಂಡಿದ್ದರಿಂದ ಶ್ರೀನಿವಾಸ್ ಶ್ಯಾನೆ ಅಪ್ಸೆಟ್ ಆಗಿ, ಧಾರಾಕಾರವಾಗಿ ಕಣ್ಣೀರಿಟ್ಟು ಇಡೀ ಲೀ ಮೆರಿಡಿಯನ್ ಹೋಟೇಲನ್ನೇ ತೋಯ್ಸಿಬಿಟ್ಟಿದ್ದ.

"ನನ್ನ ಚಿತ್ರವನ್ನು ಎಜುಕೇಶನ್ ಡಿಪಾರ್ಟ್‌ಮೆಂಟ್‌ನೋರ್ ನೋಡ್ಬೇಕು. ಮಕ್ಕಳು ಮತ್ತು ಸ್ಟೂಡೆಂಟ್‌ಗಳು ನೋಡಲೇಬೇಕಾದ ದೃಶ್ಯಗಳು ನಮ್ಮ ಚಿತ್ರದಲ್ಲಿದೆ. ಕಮರ್ಷಿಯಲ್ ಪರ್ಪಸ್‌ಗೋಸ್ಕರ ಪೋಸ್ಟರ್‌ಗಳಲ್ಲಿ ನನ್ನ ಮಗಳ ಸೆಕ್ಸೀ ಫೋಟೋಗಳನ್ನು ಬಳಸಿಕೊಂಡಿದ್ದೀನಿ. ಆ ಪೋಸ್ಟರ್‌ಗೂ ಚಿತ್ರಕ್ಕೂ ಸಂಬಂಧವಿಲ್ಲ. ಆ ಡಿಸೈನ್‌ಗಳನ್ನ ನೋಡಿ ನನ್ನ ಸಿನಿಮಾದ ಬಗ್ಗೆ ಕೆಟ್ಟದಾಗಿ 'ವಿಕೃತಿ' ಅಂತೆಲ್ಲಾ ಬರೆದಿದ್ದಾರೆ" ಎಂದು ಶ್ರೀನಿವಾಸ್ ತನ್ನ ಪ್ರಲಾಪವನ್ನು ಶುರುಹಚ್ಚಿಕೊಂಡ.

ಆತನ ಮಾತುಗಳು ಸಾ.ರಾ. ಗೋವಿಂದು ಅವರನ್ನು ಕರಗಿಸಿತು. "ಪಾಪ, ಶ್ರೀನಿವಾಸ್ ಅವರ ಬಗ್ಗೆ ಪತ್ರಿಕೆಯೋರು ಕೆಟ್ಟದಾಗಿ ಬರೆದವ್ರೆ. ಅಪ್ಪ-ಮಗಳು ನಾಯಕ ನಾಯಕಿಯಾಗಿ ನಟಿಸೋದು ನಮ್ಮ ಹಿಂದೂ ಸಂಸ್ಕೃತಿಯ ಪ್ರಕಾರ ಸರಿ ಕಾಣಲ್ಲ. ಆದರೂ ಅವರ ಮಗಳನ್ನು ಎಲ್ಲೂ ಕೆಟ್ಟದಾಗಿ ಅಂತ್ಕೊಂಡಿಲ್ಲವಂತೆ. ಮಾಧ್ಯಮದವರು ಇಂಥದ್ದನ್ನೆಲ್ಲಾ ಸಹಿಸಿಕೊಳ್ಳಬೇಕು. ಸಿನಿಮಾ ಬಿಡುಗಡೆಗೆ ಮುನ್ನವೇ ಬರೆದು ಅಪಪ್ರಚಾರ ಮಾಡಬಾರದು. ಪತ್ರಕರ್ತರೆಲ್ಲಾ ಆತ್ಮಾವಲೋಕನ ಮಾಡ್ಕೋಬೇಕು...." ಎಂದೆಲ್ಲಾ ಗೋವಿಂದು ತಿಪ್ಪೆ ಸಾರಿಸಿದರು.

ಆದರೆ ಇಷ್ಟೆಲ್ಲಾ ಉಪದೇಶ ನೀಡಿದ ಗೋವಿಂದು ಕಾರ್ಯಕ್ರಮಕ್ಕೆ ತಡವಾಗಿ ಬಂದಿದ್ದರಿಂದ ಅದಕ್ಕೂ ಮುನ್ನ ಪ್ರದರ್ಶಿಸಲ್ಪಟ್ಟ 'ಮುಸ್ಸಂಜೆ ಗೆಳತಿ'ಯ ವಿಲಕ್ಷಣ ಅಂಗಪ್ರದರ್ಶನ, ಅಶ್ಲೀಲ ಕುಣಿತದ ಹಾಡುಗಳನ್ನು ಅವರು ನೋಡಲಿಲ್ಲ ಎಂಬುದೇ ದುರಂತ. ಒಂದು ವೇಳೆ ಆ ಹಾಡುಗಳನ್ನು ಅವರೇ ನೋಡಿದ್ದರೆ ಖಂಡಿತವಾಗಿಯೂ ಸಾ.ರಾ. ಗೋವಿಂದು ಈ ಸಾರಿಸುವ ಮಾತುಗಳನ್ನು ಆಡುತ್ತಿರಲಿಲ್ಲ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 27-05-2009 RNI No. KARKAN2005/14648



ಸಿಕ್ಸ್‌ಟಿ ಹಾಕಬೇಕು, ನೈಂಟಿ ಹೊಡೆಯಬೇಕು!

ಇತ್ತೀಚೆಗೆ ಸಿನಿಮಾಗಳ ಕ್ಯಾಸೆಟ್ ಬಿಡುಗಡೆ ಸಮಾರಂಭಗಳಿಗೆ ರಾಜಕಾರಣಿಗಳನ್ನು ಆಹ್ವಾನಿಸುವುದು ಮಾಮೂಲಿಯಾಗಿದೆ. ಇಂತಹ ಸಮಾರಂಭಗಳಿಗೆ ಹಾಜರಾಗುವ ಮಂತ್ರಿ-ಮಹೋದಯರು ಪ್ರೆಡಿಕ್ಟಬಲ್ ಆಗಿ ಡಾ. ರಾಜ್‌ಕುಮಾರ್ ಅವರ ಚಿತ್ರಗಳನ್ನು ಉದಾಹರಿಸುತ್ತಾ "ಅಶ್ಲೀಲತೆ, ಕುಡಿತ, ಸಿಗರೇಟ್ ಸೇವನೆ ಇಲ್ಲದ, ಮನೆಮಂದಿಯೆಲ್ಲಾ ಒಟ್ಟಾಗಿ ನೋಡಬಹುದಾದ ಚಿತ್ರಗಳು ಬರಬೇಕು'' ಎಂದು ಡೈಲಾಗ್ ಹೊಡೆಯುವುದೂ ಅಷ್ಟೇ ಮಾಮೂಲಿಯಾಗಿದೆ.

ಮೊನ್ನೆಯೂ ಹೀಗೇ ಒಂದು ಕಾರ್ಯಕ್ರಮ ನಡೆದು ಪತ್ರಕರ್ತರಿಗೆ ಸಖತ್ ಮಜಾ ನೀಡಿತು.

ಮೊನ್ನೆ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ 'ಆಡಿಯೋ-9' ಎಂಬ ಹೊಸ ಕ್ಯಾಸೆಟ್ ಕಂಪನಿಯ ಉದ್ಘಾಟನಾ ಸಮಾರಂಭ ನಡೆಯಿತು. ಅಂದಿನ ಕಾರ್ಯಕ್ರಮಕ್ಕೆ ಸಚಿವೆ ಶೋಭಾ ಕರಂದ್ಲಾಜೆ ಬಂದಿದ್ದರಲ್ಲದೆ ಎಂದಿನಂತೆ "ಡಾ.ರಾಜ್‌ಕುಮಾರ್ ಚಿತ್ರಗಳ ತರಹ ಚಿತ್ರ ಮಾಡಬೇಕು'' ಎಂದು ಉದ್ಯಮಕ್ಕೆ ಪುಕ್ಕಟೆ ಸಲಹೆ ನೀಡಿದರು.

ಅವರ ಉದ್ಘಾಟನಾ ಭಾಷಣದ ನಂತರ ಮನರಂಜನಾ ಕಾರ್ಯಕ್ರಮವಿತ್ತು, 'ಆ' ಎಂಬ ಚಿತ್ರದ ಕ್ಯಾಸೆಟ್ಟನ್ನು ಶೋಭಾ ಬಿಡುಗಡೆ ಮಾಡಿದ್ದರಿಂದ ಆ ಸಿನಿಮಾದ ಹಾಡಿಗೆ ನೃತ್ಯ ತಂಡವೊಂದು ನರ್ತಿಸಿತು. ಆ ಹಾಡಿನ ಸಾಲುಗಳು ಹೀಗಿದ್ದವು: 'ಸಿಕ್ಸ್‌ಟಿ ಹಾಕಬೇಕು, ನೈಂಟಿ ಹೊಡೆಯಬೇಕು, ರಮ್-ದಮ್ ಎಲ್ಲವೂ ಬೇಕು...' ಇಂತಹದ್ದೇ ಸಾಲುಗಳಿದ್ದ ಆ ಹಾಡಿಗೆ ಕೆಲ ಹುಡುಗಿಯರು ಮಾದಕವಾಗಿ ನರ್ತಿಸಿದರು. ಇದನ್ನೆಲ್ಲ ನೋಡಿ ಇಂಗು ತಿಂದ ಮಂಗನಂತಾದ ಶೋಭಾ ಕರಂದ್ಲಾಜೆ ಮುಖಗಂಟಿಕ್ಕಿಕೊಂಡರು.

"ಏನು ಮಾಡುವುದು? ನಮ್ಮ ಸಿನಿಮಾದವರು ಬದಲಾಗುವುದಿಲ್ಲ; ರಾಜಕಾರಣಿಗಳ ಭಾಷಣಗಳೂ ಬದಲಾಗುವುದಿಲ್ಲ'' ಎಂದು ಸಿನಿಮಾ ವರದಿಗಾರರು ನಕ್ಕು ಸುಮ್ಮನಾದರು.



ಇನ್ನೆಷ್ಟು 'ಹೊಡಿ'ತಾನೋ ಸತ್ಯಾ!

ಸತ್ಯಾ ಎಂಬ ನಿರ್ದೇಶಕ ಕ್ರಿಯೇಟಿವಿಟಿ ಹೆಸರಿನಲ್ಲಿ ಮಾಡಿರುವ ಅಧ್ವಾನ ಮತ್ತು ವಿಕೃತಿಯನ್ನು ಅರಿತುಕೊಳ್ಳಬೇಕಿದ್ದರೆ ಶಿವರಾಜ್‌ಕುಮಾರ್ ಅಭಿನಯದ 'ಹ್ಯಾಟ್ರಿಕ್ ಹೀರೋ ಹೊಡಿಮಗ' ಚಿತ್ರವನ್ನು ಅದೆಷ್ಟೇ ಕಷ್ಟವಾದರೂ ನೀವೊಮ್ಮೆ ನೋಡಬೇಕು.

'ಮೆಜೆಸ್ಟಿಕ್' ಎಂಬ ಯಶಸ್ವಿ ಚಿತ್ರದ ಮೂಲಕ ನಿರ್ದೇಶಕನಾಗಿ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಪಡೆದ ಸತ್ಯಾ ಕೆಲದಿನಗಳಲ್ಲೇ ಗಾಂಧಿನಗರದವರ ಅಚ್ಚುಮೆಚ್ಚಿನ ವ್ಯಕ್ತಿಯಾದರು. ಇದಕ್ಕೆ ಕಾರಣ ಆತ ಚಿತ್ರದ ಕತೆ ಬಗ್ಗೆ ತಲೆ ಕೆಡಿಸಿಕೊಳ್ಳದೇ ಕೇವಲ ಲಾಂಗುಮಚ್ಚುಗಳ ಸಹಾಯದಿಂದಲೇ ಚಿತ್ರವನ್ನು ಮುಗಿಸಿಕೊಡುತ್ತಿದ್ದದ್ದು. ಅಂತಹ ಹಲವಾರು ಚಿತ್ರಗಳಲ್ಲಿ ದರ್ಶನ್ ನಟಿಸಿ, ಆ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಗೆದ್ದಿದ್ದರಿಂದ ಸತ್ಯಾರಿಗೆ ತಾರಾ ಮೌಲ್ಯವೂ ಬಂದಿತ್ತು. ಲಾಂಗು ಮಚ್ಚುಗಳ ನೆರವು ಮಾತ್ರವಲ್ಲದೆ ನಿಗದಿತ ಸಮಯಕ್ಕೆ ಸರಿಯಾಗಿ ಚಿತ್ರವನ್ನು ಮುಗಿಸಿಕೊಡುವುದರಲ್ಲಿ ಸತ್ಯರದ್ದು ಎತ್ತಿದ ಕೈ. ಹೀಗಾಗಿ ನಿರ್ಮಾಪಕರಿಗೂ ಸತ್ಯಾ ಎಂದರೆ ಸತ್ಯವಾಗಲೂ ಇಷ್ಟ. ಆದರೆ ಇದೇ ಮೊದಲ ಬಾರಿಗೆ ಶಿವರಾಜ್‌ಕುಮಾರ್ ಅವರನ್ನು ನಿರ್ದೇಶಿಸಿದ ಸತ್ಯಾ ಅದನ್ನು ವಿಭಿನ್ನವಾಗಿ ಮಾಡಬೇಕೆಂಬ ಅತ್ಯುತ್ಸಾಹದಲ್ಲಿ ಇಡೀ ಚಿತ್ರವನ್ನು ಗಬ್ಬೆಬ್ಬಿಸಿಬಿಟ್ಟಿದ್ದಾರೆ. ನಾಯಕ ನಟನ ಮೂತಿಗೆ ಇನ್ಸ್‌ಪೆಕ್ಟರ್ ಉಚ್ಚೆ ಉಯ್ಯುವುದು, ನಾಯಕ ತನ್ನ ತಂಗಿಯ ಚಿತಾಭಸ್ಮವನ್ನು ಕುಡಿಯುವುದು... ಇಂತಹದ್ದೇ ಅತಿರೇಕದ ಮತ್ತು ಅರ್ಥಹೀನ ದೃಶ್ಯಗಳು ಈ ಚಿತ್ರದಲ್ಲಿವೆ. ಅದನ್ನು ನೋಡಿದಾಗ ಸತ್ಯಾನ ಬತ್ತಳಿಕೆ ಖಾಲಿಯಾಗಿದೆ ಎಂಬುದು ಯಾರಿಗಾದರೂ ಅರ್ಥವಾಗುತ್ತದೆ.



ಸತ್ಯಾರ ಮಾತು ಬದಿಗಿರಲಿ, ಇಂತಹ ಚಿತ್ರದಲ್ಲಿ ನಟಿಸಲು ಅದು ಹೇಗೆ ಶಿವರಾಜ್‌ಕುಮಾರ್ ಒಪ್ಪಿದರು ಎಂಬುದೇ ಅಚ್ಚರಿಯ ಸಂಗತಿ.



ರಮ್ಯಾ ಈಗ ನಿರ್ಮಾಪಕಿ

ಸಾಧಾರಣವಾಗಿ ಇತ್ತೀಚೆಗೆ ಗಾಸಿಪ್ ಕಾಲಮ್ಮುಗಳಲ್ಲಿ ಅಥವಾ ವಿವಾದಾತ್ಮಕ ಸುದ್ದಿಗಳಲ್ಲಿ ಮಿಂಚುತ್ತಿದ್ದ ತಾರೆ ರಮ್ಯಾ ಕ್ಯಾಂಪ್‌ನಿಂದ ಇದೀಗ ಒಂದು ಹೊಸ ಸುದ್ದಿ ತೇಲಿ ಬಂದಿದೆ. ಫಾರ್ ಎ ಚೇಂಜ್ ಇದು ಗಾಸಿಪ್ಪೂ ಅಲ್ಲ ಅಥವಾ ವಿವಾದಾತ್ಮಕ ಸುದ್ದಿಯೂ ಅಲ್ಲ. ವಿಚಾರ ಏನೆಂದರೆ ರಮ್ಯ ಸಿನಿಮಾವೊಂದನ್ನು ನಿರ್ಮಿಸಲು ಹೊರಟಿದ್ದಾಳಂತೆ!

ಈ ಚಿತ್ರ ವಿಭಿನ್ನವಾದ ಕಥಾವಸ್ತುವನ್ನು ಹೊಂದಿದ್ದು ತೆಲುಗಿನ ನಿರ್ದೇಶಕರೊಬ್ಬರು ಅದನ್ನು ನಿರ್ದೇಶಿಸಲಿದ್ದಾರಂತೆ. ರಮ್ಯಳೆ ಚಿತ್ರದ ಹೀರೋಯಿನ್ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅಲ್ಲವೇ? ಯಾಕೆ ಇದ್ದಕ್ಕಿದ್ದಂತೆ ಚಿತ್ರ ನಿರ್ಮಾಣ ಎಂದರೆ "ಇತರೆ ನಿರ್ಮಾಪಕರು ಈ ಚಿತ್ರ ಮಾಡಲು ಹಿಂಜರಿಯಬಹುದು. ಆದ್ದರಿಂದ ನಾನೇ ಇದಕ್ಕೆ ಹಣ ಸುರಿಯಲು ತಯಾರಾಗಿದ್ದೇನೆ" ಎನ್ನುತ್ತಿದ್ದಾಳಂತೆ ರಮ್ಯ. ಇದು ನಿಜವೇ ಆದಲ್ಲಿ ರಮ್ಯಾಳನ್ನು ಅಭಿನಂದಿಸಲೇಬೇಕು.

ಈ ಹಿಂದೆ ಜಯಮಾಲಾ, ಸೌಂದರ್ಯ, ತಾರಾ.. ಮೊದಲಾದ ನಾಯಕಿಯರೂ ಚಿತ್ರಗಳನ್ನು ನಿರ್ಮಿಸಿದ್ದಾರೆ. ಅವರೆಲ್ಲ ಪ್ರಶಸ್ತಿ ಗಿಟ್ಟಿಸುವ ಆಸೆಯಿಂದ ಆ ಕಾರ್ಯಕ್ಕೆ ಕೈಹಾಕಿದ್ದರು. ಆದರೆ ರಮ್ಯಾ ಪ್ರಶಸ್ತಿ ಬಗ್ಗೆ ತಲೆಕೆಡಿಸಿಕೊಂಡಿಲ್ಲವಂತೆ. ಒಂದು ವಿಭಿನ್ನವಾದ ಪಾತ್ರವನ್ನು ನಿರ್ವಹಿಸಬೇಕೆಂಬ ಆಸೆಯಿಂದ ಮಾತ್ರ ಚಿತ್ರ ನಿರ್ಮಿಸುತ್ತಿದ್ದಾಳಂತೆ.

ಪುನೀತ್ ಜೊತೆ ಹೊಸಬರ ಪವರ್!

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ವೃತ್ತಿಜೀವನ ಕವಲುದಾರಿಯಲ್ಲಿದೆ ಎಂದರೆ ನಂಬುವುದು ಕಷ್ಟ. ಆದರೂ ಅದು ಸತ್ಯ. ಇದನ್ನು ಪುನೀತ್ ಕೂಡ ಅರಿತಿದ್ದು ಈಗ ತಾವು ನಟಿಸಲಿರುವ ಚಿತ್ರದ ಕಥಾವಸ್ತು ಮತ್ತು ನಿರ್ದೇಶಕನ ಆಯ್ಕೆಯಲ್ಲಿ ಎಚ್ಚರ ವಹಿಸುತ್ತಿದ್ದಾರೆ.

ಯಶಸ್ವಿ 'ಮಿಲನ' ಚಿತ್ರದ ನಂತರ ಪುನೀತ್ ಮತ್ತೊಂದು ಸೂಪರ್ ಹಿಟ್ ಚಿತ್ರವನ್ನು ಕೊಟ್ಟಿಲ್ಲ. ಅದೇ 'ಮಿಲನ'ದ ಪ್ರಕಾಶ್ ನಿರ್ದೇಶಿಸಿದ್ದ 'ವಂಶಿ' ಕೂಡಾ ಬಾಕ್ಸಾಫೀಸ್‌ನಲ್ಲಿ ಅಂತಹ ಯಶಸ್ಸು ಕಂಡಿರಲಿಲ್ಲ.

ಈಗ ಪ್ರೇಮ್ ನಿರ್ದೇಶನದ 'ರಾಜ್' ಚಿತ್ರ ಪುನೀತ್ ಅಭಿಮಾನಿಗಳಲ್ಲಿ ಅಪಾರ ನಿರೀಕ್ಷೆಯನ್ನು ಹುಟ್ಟಿಸಿದೆಯಾದರೂ ಚಿತ್ರ ಬಿಡುಗಡೆಯಾಗುವ ತನಕ ಏನೂ ಹೇಳಲಾಗುವುದಿಲ್ಲ.

ಇಂತಹ ಸಂದಿಗ್ಧ ಸಂದರ್ಭದಲ್ಲೇ ಪುನೀತ್ ತನ್ನ ಮುಂದಿನ ಎರಡು ಚಿತ್ರಗಳ ಕಾಲ್‌ಶೀಟನ್ನು ಇಬ್ಬರು ವಿಭಿನ್ನ ಅಭಿರುಚಿಯ ನಿರ್ದೇಶಕರಿಗೆ ನೀಡಿದ್ದಾರೆಂಬ ಸುದ್ದಿ ಹರಡಿದೆ. ತಾಂತ್ರಿಕವಾಗಿ ಅತ್ಯುತ್ತಮ ಚಿತ್ರಗಳನ್ನು ನೀಡಿರುವ ಓಂ ಪ್ರಕಾಶ್ ರಾವ್ ಅವುಗಳಲ್ಲಿ ಒಂದನ್ನು ನಿರ್ದೇಶಿಸಲಿರುವುದು ಬಹುತೇಕ ಗ್ಯಾರಂಟಿಯಾಗಿದೆ. ಅದರ ನಿರ್ಮಾಪಕ ಕನಕಪುರ ಶ್ರೀನಿವಾಸ್. ಈ ಹಿಂದೆ ಇವರು ನಿರ್ಮಿಸಿದ್ದ 'ಮಯೂರ' ಚಿತ್ರದ ಕೆಲಸ ಆರಂಭವಾದ ಕೆಲವೇ ದಿನಗಳಲ್ಲಿ ಅದರ ನಿರ್ದೇಶಕ ನಿಧನ ಹೊಂದಿದ್ದರಿಂದ ಆ ಚಿತ್ರ ಅಲ್ಲಿಗೇ ನಿಂತಿತ್ತು.

ಪುನೀತ್ ಅವರ ಮತ್ತೊಂದು ಚಿತ್ರವನ್ನು ನಿರ್ದೇಶಿಸಲು ಸದಾಶಿವನಗರದಲ್ಲಿರುವ ಹೆಡ್‌ಆಫೀಸಿನವರೇ ಆಹ್ವಾನಿಸಿ ಕಾಲ್‌ಶೀಟ್ ಕೊಟ್ಟಿರುವುದು 'ಅಂಬಾರಿ' ಚಿತ್ರದ ಯುವ ನಿರ್ದೇಶಕ ಅರ್ಜುನ್‌ಗೆ ಎಂದು ಸುದ್ದಿ ಇದೆ.

ಅಂದಹಾಗೆ ಈ ಮೂಲಕ ರಾವ್ ಮತ್ತು ಅರ್ಜುನ್‌ಗೆ ಮೊದಲ ಬಾರಿ ಪುನೀತ್ ಚಿತ್ರ ನಿರ್ದೇಶಿಸುವ ಅವಕಾಶ ಸಿಕ್ಕಂತಾಗಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44